ಜನವರಿ
೧೯೫೩

ಈ ಸಂಚಿಕೆಯಲ್ಲಿ:

ಸಂಪುಟ
೧೫

ಸಂಚಿಕೆ
೮

★

ಶ್ರದ್ಧೆಯಿಲ್ಲದೆ ಸಮಾಜಶಾಂತಿಯೆ ? (ಸಂಪಾದಕೀಯ)	ಸಂಪಾದಕರು	.... ೨೮೧
ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)	'ಕಾಲಭೈರವ'	.... ೨೮೩
ಚಪರಾಸಿ (ಸಣ್ಣ ಕತೆ)	ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ.	.... ೨೮೫
ಅಪರಾಧಿ ಬಾಲಕ (ಮನೋವೈಜ್ಞಾನಿಕ)	ಶ್ರೀ. ಬೆಳವಡಿ ರಾಮರಾಯರು ಬಿ. ಎ.	.... ೨೯೧
ವರ್ಷಾಋತುವಿಗೆ ಸ್ವಾಗತ (ಕವನ)	ಶ್ರೀ. ಎಚ್. ಜೆ. ಉಪಾಧ್ಯಾಯ ಎಂ.ಎ.	.... ೨೯೪
ವರ್ಷಾಗಮನ (ಕವನ)	ಶ್ರೀ. ಕಂ. ರಾ. ಮೊಕಾಶಿ ಬಿ.ಎ. ಧಾರವಾಡ.	೨೯೫
ಆಚಾರ್ಯ ಶ್ರೀಶಾಂತಿಸಾಗರರು (ವೈಚಾರಿಕ ಜೀವನ)	ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ	.... ೨೯೬
ಗುರಂದಿ (ಪ್ರದೇಶ ಪರಿಚಯ)	ಶ್ರೀಮತಿ ಇಂದಿರಾ ಎಲ್. ರಾವ್ ಬಿ. ಎ.	.... ೩೦೦
ಶ್ರೀಮತಿ ಅಮಲಾ ಕೇತಕರ (ಆತ್ಮಕಥೆ)	ಪ್ರೊ. ರಂ. ಶ್ರೀ. ಮುಗಳಿ ಎಂ.ಎ.,ಬಿ.ಟಿ.	.... ೩೦೪
ಒಲವಿನ ಒಸಗೆ (ಕವನ)	ಶ್ರೀ. ಶಿವಾನಂದಸ್ವಾಮಿ ಹೂವಿನಹಡಗಲಿ...	೩೦೭
ಕವಿಯಾಗಲೆಂತು ? (ಕವನ)	ಶ್ರೀ. ಎಚ್. ಕೆ. ತುಂಗಳ, ಬಾಗಿಲುಕೋಟೆ..	೩೦೭
ನಾನು ಕುಮಾರಿಯಾಗಿಯೇ ಉಳಿಯುವೆ (ಸಣ್ಣಕತೆ)	ಕುಮಾರಿ ಎ. ಜೆ. ವಿದ್ಯಾ, ಧಾರವಾಡ	.... ೩೦೮
ಲೋಕಪರಿಚಯ (ಸಂಚಯನ)	ಶ್ರೀ. ಪ. ಲ. ಕೆರೂರ ಬಿ. ಎ. ಹುಬ್ಬಳ್ಳಿ	.... ೩೧೦
ಕೋಧನೆ (ಕವನ)	ಶ್ರೀ. ಬಾಳು ಬಿ. ಉಪಾಧ್ಯೇ ಶನುನೇವಾಡಿ...	೩೧೪
ನನ್ದೋ ಮುನ್ನೋ (ಒಂದು ಚಿತ್ರವಿಮರ್ಶೆ)	ನಿರೀಕ್ಷಕ	.... ೩೧೫
ಪುಸ್ತಕ ವಿಮರ್ಶೆ (ಅರುಣ, ಅತ್ತಿಗೆ)	ಬೇರೆ ಬೇರೆ ವಿಮರ್ಶಕರು	.... ೩೧೬
ಸಾಹಿತ್ಯವಿಹಾರ	....	.... ೩೧೮
ಸಾದರ ಸ್ವೀಕಾರ	.... ಹೊದಿಕೆಯ ೩ನೆಯ ಪುಟ	

★

JAYANTI

ಸಾದರ ಸ್ವೀಕಾರ

★

೮೮. **ರಾಧೇಯ** (ನಾಟಕ) ಸರಳರಗಳೆಯಲ್ಲಿ ಬರೆದುದು. ಬರೆದವರು ಶ್ರೀ. ಕೆ. ಟಿ. ಪುರಾಣಿಕ ಬಿ. ಎ., ಬಿ. ಟಿ. ಗೋಕಾಕ. ಪ್ರಕಾಶಕರು ಸಾಹಿತ್ಯಸೇವಾ ಮಂದಿರ, ಗೋಕಾಕ. ಕ್ರೌ. ಅ. ೫೬ ಪುಟಗಳು. ಬೆಲೆ ೧–೪–೦.

೮೯. **ಶ್ರೀಗಣೇಶಾಥರ್ವಶೀರ್ಷಂ** (ಅನುವಾದ ಸಹಿತ ಸ್ತೋತ್ರಗ್ರಂಥ). ಕನ್ನಡದಲ್ಲಿ ಅನುವಾದಿಸಿದವರು ಶ್ರೀಮಾನ್-ವೇದಾಂತ ವಿಶಾರದ ಗುಣೇಕರ ನಾರಾಯಣ ಶಾಸ್ತ್ರಿಗಳು, ಧಾರವಾಡ. ಪ್ರಕಾಶಕರು ಶ್ರೀ ಸರಸ್ವತೀ ಮುದ್ರಣಾಲಯ, ಹುಬ್ಬಳ್ಳಿ ರಸ್ತೆ, ಧಾರವಾಡ. ಕ್ರೌ. ಡಿ ಪ ೧೨ ಪುಟಗಳು. ಬೆಲೆ ೦–೬–೦.

೯೦. **ಸಂಸಾರಶಿಲ್ಪ** (ಕಥಾಸಂಕಲನ). ಲೇಖಕರು 'ಆನಂದ'. ಪ್ರಕಾಶಕರು ರುಚಿರ ಪುಸ್ತಕ ನಿಲಯ, ಮೈಸೂರು. ಕ್ರೌ. ಅ. ೧೩೨ ಪುಟಗಳು. ಬೆಲೆ ೧–೧೨–೦.

೯೧. **ಜನನನಿಯಂತ್ರಣ** (ಜೀವನಸ್ವಾಸ್ಥ್ಯನಿಷಯಕ ಗ್ರಂಥ). ಬರೆದವರು 'ವೈದ್ಯಗುರು' ಶ್ರೀ. ದ. ಕೃ. ಭಾರದ್ವಾಜ, ಬೆಂಗಳೂರು. ಪ್ರಕಾಶಕರು ಆನಂದ ಬ್ರದರ್ಸ್, ಕೆಂಪೇಗೌಡ ರಸ್ತೆ, ಬೆಂಗಳೂರು ೨. ಕ್ರೌ.ಅ. ೨೦೮ ಪುಟಗಳು. ಬೆಲೆ ೩–೦–೦.

೯೨. **ಗಿಳಿ ಮತ್ತು ಇತರ ಕವನಗಳು** (ಕಾವ್ಯಸಂಕಲನ) ಲೇಖಕರು ಶ್ರೀ. ಎಚ್. ಎಸ್. ಹುಯಿಲಿಗೋಳ, ಹುಬ್ಬಳ್ಳಿ. ಲೇಖಕರೇ ಪ್ರಕಾಶಕರು. ಕ್ರೌ. ಅ. ೪ ಪುಟಗಳು. ಬೆಲೆ ೦–೪–೦.

೯೩. **ಹರಿದಾಸ ಭಾರತಿ** (ಮಾಸಪತ್ರಿಕೆ). ಸಂಪಾದಕರು ಶ್ರೀ. 'ಹರಿದಾಸರತ್ನ' ಗೋಪಾಲದಾಸರು, ರಾಘವೇಂದ್ರ ಕಾಲೆನಿ, ಚಾಮರಾಜಪೇಟೆ, ಬೆಂಗಳೂರು ೨. ಕ್ರೌ. ಅ. ೪೦ ಪುಟ. ವಾ. ಚಂದಾ ೩–೦–೦.

ಸಂಪಾದಕರಾದ ಶ್ರೀ. ಗೋಪಾಲದಾಸರು ಹರಿದಾಸ ಸಾಹಿತ್ಯ ಮತ್ತು ಸಂಪ್ರದಾಯಗಳಲ್ಲಿ ತಜ್ಞರಾದವರು. ಹರಿದಾಸಸಾಹಿತ್ಯದ ಸಂಶೋಧಕರೂ ಆಹುದು. ಹರಿದಾಸರ ತತ್ತ್ವಜ್ಞಾನವನ್ನು ಸರಿಯಾಗಿ ಅರ್ಥ ಮಾಡಿ ಹೇಳುವ ಸಾಮರ್ಥ್ಯ ಉಳ್ಳವರು. ಅವರು ಕೇವಲ ವ್ಯವಹಾರದೃಷ್ಟಿಯಿಂದ ಈ ಪತ್ರಿಕೆಯನ್ನು ನಡೆಯಿಸುತ್ತಿಲ್ಲ. ಕರ್ನಾಟಕದ ಹರಿದಾಸರು ಮಾಡಿದ ಲೌಕಿಕ ಆಧ್ಯಾತ್ಮಿಕ ಕಾರ್ಯದ ಮಹತ್ತ್ವವೆಂತಹದೆಂಬುದನ್ನು ಕನ್ನಡಿಗಳ ಕಣ್ಣೆದುರು ತಂದು ತೋರಿಸುವ ಅಪೇಕ್ಷೆಯಿಂದ ಹೊರಟಿದ್ದಾರೆ.

ಹರಿದಾಸರ ಸಂದೇಶವೆಂದರೆ 'ಈಸಬೇಕು ಇದ್ದು ಜಯಿಸಬೇಕು, ಹೇಸಿಕೆಯ ಸಂಸಾರ ಆಶೆ ಲೇಸು ಇಲ್ಲದ್ದಾಂಗೆ' 'ಮಾನವ ಜನ್ಮ ದೊಡ್ಡದು; ವ್ಯರ್ಥ ಹಾನಿ ಮಾಡಲಿ ಬೇಡಿ ಹುಚ್ಚಪ್ಪಗಳಿರಾ!' ಎಂಬ ಲೌಕಿಕ-ಪಾರಮಾರ್ಥಿಕಗಳ ಸಮನ್ವಯದ ದಾರಿಯದು. ಅವರ ಸಂದೇಶ ಇಂದಿನ ನಮ್ಮ ಆಕ್ಷೇಕಸಮಾಜಕ್ಕೆಲ್ಲ ತಾರಕ-ಸ್ವರೂಪಿಯಾಗಿದೆ. ಆದುದರಿಂದ ನಮ್ಮ ಜನರೆಲ್ಲ ಹರಿದಾಸಪಂಥದ ಮಾನವ ಜೀವನ ರಹಸ್ಯವನ್ನು ಅರಿತುಕೊಳ್ಳುವ ಅಗತ್ಯ ತುಂಬ ಇದೆ. ಎಲ್ಲರೂ ಈ ಪತ್ರಿಕೆಗೆ ಚಂದಾದಾರರಾಗಿ, ಈ ಪತ್ರಿಕೆ ನಾಡಿನಲ್ಲಿ ಬಹುಕಾಲ ಬಾಳುವಂತೆ ಸಹಕಾರ ಕೊಡಬೇಕು.

೯೪. **ಕನ್ನಡ ಗೀತಾಂಜಲಿ** (ಅನುವಾದಿತ ಕವನಸಂಕಲನ) ಮೂಲ ಶ್ರೀ ಕವೀಂದ್ರ ರವೀಂದ್ರರ ಗೀತಾಂಜಲಿಯಲ್ಲಿಯ ಕವನಗಳನ್ನು, ಶ್ರೀ. ಪ್ರ. ಬ. ನೇಗಲ್ ಎಂ.ಎ., ಬಿ.ಟಿ. ಅವರು ಕನ್ನಡದಲ್ಲಿ ಭಾಷಾಂತರಿಸಿ ಸಂಕಲನಗೊಳಿಸಿದ್ದಾರೆ. ಧಾರವಾಡದ ಮಿಂಚಿನಬಳ್ಳಿಯವರು ೧೫ನೆಯ ವರ್ಷದ ೧೩ನೆಯ ಕುಡಿಯಾಗಿ ಪ್ರಕಟಿಸಿದ್ದಾರೆ. ಕ್ರೌ. ಅ. ೧೫೮ ಪುಟಗಳು. ಬೆಲೆ ೨–೦–೦.

೯೫. **ನಕ್ಷತ್ರಮಾಲೆ** (ಕಥಾಸಂಕಲನ) ಲೇಖಕರು ಬೇರೆ ಬೇರೆ ಕತೆಗಾರರು. ಗುಳೇದಗುಡ್ಡದ 'ಸಂಗಾಮು ಸಾಹಿತ್ಯ ಸದನ'ದ ಪ್ರಕಟನೆ. ಕ್ರೌ. ಅ. ೯೪ ಪುಟಗಳು. ಬೆಲೆ ೧–೦–೦.

ಇದರಲ್ಲಿ ೭ ಸಣ್ಣ ಕತೆಗಳಿದ್ದು ಶ್ರೀ. ಕುಲಕರ್ಣಿ ಬಿಂದುಮಾಧವ ಬದಾಮಿ, ಶ್ರೀಮತಿ ಸರಸ್ವತೀಬಾಯಿ ರಾಜವಾಡೇ, ಶ್ರೀ. ಸದಾರಾಮ ಮಂಗಳೂರು, ಶ್ರೀ. ಬಳ್ಳಾರಿ ಬೀಚಿ, ಶ್ರೀ. ಎಚ್. ಆರ್. ಕೆದಿಯೂರು, ಶ್ರೀ. ಕೆ. ಎಸ್. ಗಿರಿ ಮಯ್ಯಾಸ, ಶ್ರೀಮತಿ ಆರ್. ಲಲಿತಮ್ಮ ಮೈಸೂರು ಇವರು ಬರೆದುವು ಇವೆ. ಯಾವ ಕತೆಯೂ ಕನ್ನಡ ಕಥಾ ಸಾಹಿತ್ಯಾಕಾಶದಲ್ಲಿ ತೊಳಗಿ ಬೆಳಗುವಂತಹ ಕಲಾಪ್ರಭೆಯಿಂದ ಕೂಡಿದುದಾಗಿ ತೋರುವುದಿಲ್ಲ. ಆದರೆ ಗುಳೇದಗುಡ್ಡದಂತಹ ಹಳ್ಳಿಯಲ್ಲಿಯೂ ಸಾಹಿತ್ಯನಿರ್ಮಿತಿಯ ಕಾರ್ಯವನ್ನು ಪ್ರಾರಂಭಿಸಿದ ಈ ಮಾಲೆಯ ಸಂಪಾದಕರನ್ನು ಅಭಿನಂದಿಸಲೇಬೇಕು. ಅವರ ಸಾಹಸ, ಇಂದಿಲ್ಲ ನಾಳೆ ಒಳ್ಳೆಯ ನಕ್ಷತ್ರಗಳ ಮಾಲೆಯನ್ನೂ ಮೂಡಿಸಿ ತೋರಿಸೀತು.

೯೬. **ಜ್ಯೋತಿ** (ಹೊಸ ತ್ರೈಮಾಸ ಪತ್ರಿಕೆ). ಸಂಪಾದಕರು ಶ್ರೀ. ಹೆಚ್ ಸರ್ವೇಶ್ವರ, 'ಜ್ಯೋತಿ' ಕಾರ್ಯಾಲಯ, ೨೨ ಹಳೆಯ ಮಾದಾರ ಬೀದಿ, ಹೊಸಪೇಟೆ. ಡೆ. ಅ. ೬೪ ಪುಟಗಳು. ವಾ. ಪ. ೧ ರೂಪಾಯಿ. ಬಿಡಿ ಸಂಚಿಕೆಗೆ ೦–೪–೦.

ಲೇಖಕ ವರ್ಗದಲ್ಲಿ ಕನ್ನಡದ ಸುಪ್ರಸಿದ್ಧ ಲೇಖಕರ ಹೆಸರುಗಳೂ ಇವೆ. ಇದೀಗ ಮೊದಲನೆಯ ಸಂಚಿಕೆ. ಅನುಭವದಿಂದ, ಆಗಬೇಕಾಗಿರುವ ಅಂತರಂಗ-ಬಹಿರಂಗ ಸುಧಾರಣೆಗಳು ಆದಾಪು-ಜನತೆ ಸಹಾನುಭೂತಿಯಿಂದ ಸಹಕರಿಸಿ, ಜ್ಯೋತಿಯ ಜೀವನವನ್ನು ಸ್ಥಿರಗೊಳಿಸಬೇಕು.

೯೭. **ಸುಲಭವ್ಯಾಕರಣ** ಮತ್ತು ಛಂದಸ್ಸು, ಅಲಂಕಾರ, ಕವಿಸಮಯಗಳ ಕೈಪಿಡಿ (ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ) ಬರೆದವರು ಶ್ರೀ. ರಾಮಚಂದ್ರ ಉಚ್ಚಿಲ ಮತ್ತು ಶ್ರೀ. ಗುಡ್ಡಪ್ಪ ಬಲ್ಲಾಳ. ಪ್ರಕಾಶಕರು ಪೂರ್ಣಿಮಾ ಪ್ರಕಾಶನ, ಮಾತುಂಗಾ, ಮುಂಬಯಿ ೧೯. ಡೆ. ಅ. ೪೪ ಪುಟಗಳು ಬೆಲೆ ೧–೦–೦.

(ಕವರ್ ೩ನೆಯ ಪುಟ ನೋಡಿರಿ)

ಜಯಂತಿ

. ಸಂ. ೧೫. ಸಂಚಿಕೆ. ೮

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು
ಶ್ರೀ. ಡಿ ಶರತ್‌ಕುಮಾರ

ಪ್ರಕಾಶಕರು :
ಶ್ರೀ. ಎಮ್. ವಿ. ಮೆಳ್ಳಿಗಟ್ಟಿ.

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಶ್ರದ್ಧೆಯಿಲ್ಲದಿದ್ದರೆ ಸಮಾಜಶಾಂತಿಯೆ ?

ಶ್ರದ್ಧೆಯೆಂದರೆ ಇದೊಂದು ಕೇವಲ ಭಾವನೆಯು ಪ್ರಪಂಚಕ್ಕೆ ಸೇರಿದ ವಿಷಯವಾದರೂ, ನಾಗರಿಕ ಸಮಾಜದಲ್ಲಿ ಶಾಂತಿ-ಸಮಾಧಾನಗಳು ನೆಲೆಗೊಳ್ಳಬೇಕಾದರೆ ಇದರ ಅಗತ್ಯ ತುಂಬ ಇದೆ. ಎಂತಲೇ ಭಾರತದೇಶದಲ್ಲಿ ಶ್ರದ್ಧೆಯೇ ಪರಮಧರ್ಮವೆಂಬ ತಿಳಿವಳಿಕೆ ಪ್ರಚಾರದಲ್ಲಿತ್ತು. ಆ ತಿಳಿವಳಿಕೆಯಿಂದಲೇ ನಮ್ಮ ಮೊದಲಿಗರು ವೈಯಕ್ತಿಕ ಜೀವನದಲ್ಲಿಯೂ ಸಾಮಾಜಿಕ ಜೀವನದಲ್ಲಿಯೂ ಶಾಂತಿ-ಸಮಾಧಾನಗಳನ್ನು ಸಂರಕ್ಷಿಸುತ್ತ ಬಂದರು. ಭಾರತ ಸಂಸ್ಕೃತಿಯ ಜೀವಾಳವನ್ನು ಹೇಳಲು ಹೊರಟ ಭಗವದ್ಗೀತೆಯು, ಶ್ರದ್ಧೆಯ ಪವಾಡವನ್ನು ಮೊದಲಿನಿಂದ ಕೊನೆಯ ವರೆಗೂ ಹಾಡಿದೆ. ಶ್ರದ್ಧಾವಂತನೇ ಪರಮಾತ್ಮನ ಪರಮಭಕ್ತನೆನಿಸಿಕೊಳ್ಳುವನೆಂದು ಶ್ರೀಕೃಷ್ಣ ಅದರಲ್ಲಿ ಸಾರಿ ಹೇಳಿದ್ದಾನೆ.

ವ್ಯಕ್ತಿಗೆ ಯಾವುದೇ ಒಂದು ವಿಷಯದ ಬಗ್ಗೆ ಉತ್ಕಟಶ್ರದ್ಧೆಯಿದ್ದರೂ, ಆತನಿಂದ ಹೀನಕರ್ಮಗಳು ನಡೆಯಲಾರವು. ಆತನನ್ನು ದುರ್ಮಾರ್ಗದಲ್ಲಿ ನಡೆಯಿಸಲಾರವು. ಶ್ರದ್ಧಾವಂತ ವ್ಯಕ್ತಿಗಳಿಂದ ಕೂಡಿದ ಸಮಾಜವೂ ಶ್ರದ್ಧಾವಂತ ಎನಿಸಿಕೊಳ್ಳುವುದು. ಅಂತಹ ಸಮಾಜದಲ್ಲಿ ಬಾಳುವ ವ್ಯಕ್ತಿಗೂ ಸುಖ-ಸಮಾಧಾನಗಳು ದೊರೆಯುವುವು; ಸಮಾಜವೂ ಆದರ್ಶ ಸಮಾಜವಾಗಿ ಪರಿಗಣಿತವಾಗುವುದು.

ಭಾರತದಲ್ಲಿ ಆಸ್ತಿಕಭಾವನೆಯನ್ನು ಹೇಳಲು ಹೊರಟ ಮತ-ಧರ್ಮಗಳೆಲ್ಲ ಶ್ರದ್ಧೆಗೆ ಪ್ರಥಮಸ್ಥಾನ ಕೊಟ್ಟಿರುವುದು ಸರಿಯೇ ಸರಿ; ಬುದ್ಧದೇವನಂತಹ ನಾಸ್ತಿಕವಾದಿಯೂ ಶ್ರದ್ಧೆಗೇ ಪ್ರಥಮಸ್ಥಾನವನ್ನು ಕೊಟ್ಟಿದ್ದಾನೆ. ಆಸ್ತಿಕ ತತ್ತ್ವಜ್ಞಾನಿಗಳು ದೈವಶ್ರದ್ಧೆ ಧರ್ಮಶ್ರದ್ಧೆಗಳನ್ನು ಕುರಿತು ಒತ್ತಿ ಒತ್ತಿ ಹೇಳಿದ್ದರೆ, ನಾಸ್ತಿಕ ತತ್ತ್ವಜ್ಞಾನಿಗಳೂ ಜೀವನ ಶ್ರದ್ಧೆ ಸಮಾಜಶ್ರದ್ಧೆಗಳನ್ನು ಕುರಿತು ಗಟ್ಟಿಯಾಗಿ ಹೇಳಿದ್ದಾರೆ. ಅಧ್ಯಾತ್ಮಜೀವಿಗೂ ಶ್ರದ್ಧೆಯ ಅಗತ್ಯವಿದೆ; ಲೌಕಿಕಜೀವಿಗೂ ಶ್ರದ್ಧೆಯ ಅಗತ್ಯವಿದೆ.

ಶ್ರದ್ಧೆಯೆಂದರೆ ಏನು ? ಅತ್ಯಂತಿಕ ವಿಶ್ವಾಸವೇ ಶ್ರದ್ಧೆಯೆನಿಸುವುದು. ಅತ್ಯಂತಿಕ ವಿಶ್ವಾಸವಾದ ಈ ಶ್ರದ್ಧೆಯು, ವ್ಯಕ್ತಿಯನ್ನು ಧ್ಯೇಯನಿಷ್ಠನನ್ನಾಗಿ ಮಾಡುವುದು. ಈ ಧ್ಯೇಯನಿಷ್ಠೆ ವ್ಯಕ್ತಿಯನ್ನು ಸದ್ಗುಣಿಯನ್ನಾಗಿ ಮಾಡುವುದು; ಸುವಿಚಾರಿಯನ್ನಾಗಿ ಮಾಡುವುದು. ಧ್ಯೇಯಸಾಧನೆಗಾಗಿ ಮರಣಕ್ಕೆ ಕೂಡ ಹೆದರದ ನಿರ್ಭೀತನನ್ನಾಗಿ ಮಾಡುವುದು. ಧ್ಯೇಯನಿಷ್ಠೆ ಲೌಕಿಕವಾದುದೇ ಇರಲಿ, ಅಲೌಕಿಕವಾದುದೇ ಇರಲಿ, ಅದು ವ್ಯಕ್ತಿಗೂ ಸಮೂಹಕ್ಕೂ ಕಲ್ಯಾಣಕಾರಿಯಾಗಿರುವುದು.

ನಾವೀಗ ಕೇವಲ ಲೌಕಿಕ ದೃಷ್ಟಿಯಿಂದಲೇ ವಿಚಾರ ಮಾಡೋಣ : ಜಗತ್ತಿನಲ್ಲಿ ಹುಟ್ಟಿ ಬಂದ ಮಾನವವ್ಯಕ್ತಿ, ಈ ಜೀವನರಂಗದಲ್ಲಿದ್ದು ತನ್ನ ಅವಿಕಸಿತ ಜೀವನವನ್ನು ವಿಕಾಸಗೊಳಿಸಿಕೊಳ್ಳಬೇಕಾಗುವುದು. ಹಾಗೆ ವಿಕಾಸಗೊಳಿಸಿಕೊಳ್ಳದೆ ಹುಟ್ಟಿದಹಾಗೆಯೆ ಸತ್ತು ಬಿಟ್ಟರೆ, ಅಂತಹ ವ್ಯಕ್ತಿಯ ಜೀವನ ವ್ಯರ್ಥಜೀವನವೆನಿಸಿಕೊಳ್ಳುವುದು. ಜೀವನವನ್ನು ಸಾರ್ಥಗೊಳಿಸಿಕೊಳ್ಳಬೇಕಾದರೆ, ಅದಕ್ಕಾಗಿ ಅತ್ಯಂತಿಕ ವಿಶ್ವಾಸದಿಂದ ಯೋಗ್ಯ ಕೃಷಿಯನ್ನು ಮಾಡಬೇಕಾಗುವುದು. ಈ ಕೃಷಿಯ ಪರಿಣಾಮದಿಂದ ವ್ಯಕ್ತಿ ಸುಸಂಸ್ಕೃತನೆನಿಸಿಕೊಂಡು ಜೀವನ ವಿಕಾಸ ಪಡೆಯುವನು. ಇಲ್ಲಿ ಸ್ವಂತದ ವಿಷಯದಲ್ಲಿ ಇರಿಸಿಕೊಳ್ಳಬೇಕಾದ ವಿಶ್ವಾಸವೇ ಆತ್ಮಶ್ರದ್ಧೆಯೆನಿಸಿಕೊಳ್ಳುವುದು. ಆತ್ಮಶ್ರದ್ಧೆಯಿಲ್ಲದವನ ಬಾಳು ಹೂಳು ಹಾಳು !

ಪ್ರತಿಯೊಂದು ಮಾನವವ್ಯಕ್ತಿಯೂ ಜೀವನರಂಗಕ್ಕೆ ಇಳಿಯುವಾಗ, ತಾಯಿ ತಂದೆ ಎಂಬ ಎರಡು ಬೇರೆ ವ್ಯಕ್ತಿಗಳ ಸಂಬಂಧವನ್ನು ಇರಿಸಿಕೊಂಡೇ ಇಳಿಯುವನು. ಪರಾಧೀನ-

ಪಾದ ಮಾನವಶಿಶುವನ್ನು ಸಂರಕ್ಷಿಸಿ ಬೆಳೆಯಿಸುವ ಮೊದಲ ಹೊಣೆ ಈ ತಾಯಿ-ತಂದೆಗಳದಿರುವುದು. ತಾಯಿ-ತಂದೆಗಳಲ್ಲಿ ತಮ್ಮ ಸಂತಾನ ವಿಷಯಕವಾದ ಉತ್ಕಟಪ್ರೀತಿಯನ್ನು ಪ್ರಕೃತಿದೇವಿಯು ಸಹಜವಾಗಿಯೇ ಇರಿಸಿಬಿಟ್ಟಿರುತ್ತಾಳೆ. ಈ ಸಹಜಪ್ರೀತಿಯನ್ನೂ ಸಂತಾನಶ್ರದ್ಧೆಯೆಂದೇ ಹೇಳಬಹುದು.

ತಂದೆ-ತಾಯಿಗಳ ಸಂಬಂಧವು ಸ್ವಾಭಾವಿಕವಾಗಿರುವಂತೆ, ಪ್ರತಿಯೊಂದು ಜೀವಿಗೆ ಸಹಜಾತಸಂಬಂಧವೂ ಸ್ವಾಭಾವಿಕವಾಗಿರುವುದು. ಎಲ್ಲರೂ ಸೇರಿ ಒಂದೆಡೆಯಲ್ಲಿ ಬೆಳೆದು ಬಾಳಬೇಕಾಗುವುದು. ಇಂತಹ ಸಂಬಂಧಿಕರ ಬಾಳುವೆಗೇ ಕುಟುಂಬವೆಂದು ಹೇಳುವರು. ವ್ಯಕ್ತಿ-ವ್ಯಕ್ತಿಗಳ ಒಲವು-ಅಭಿರುಚಿಗಳು ಬೇರೆಬೇರೆಯಾಗಿ ಇದ್ದರೂ ಕುಟುಂಬದ ವ್ಯಕ್ತಿಗಳೆಲ್ಲ ಒಂದೆ ಎಡೆಯಲ್ಲಿ ಇರಬೇಕಾಗುವುದರಿಂದ, ಕುಟುಂಬದಲ್ಲಿಯು ಎಲ್ಲರ ಸುಖ-ಶಾಂತಿಗಾಗಿ ಎಲ್ಲರೂ ಒಂದು ಒಪ್ಪಂದದಿಂದ ನಡೆದುಕೊಳ್ಳಬೇಕಾಗುವುದು. ಒಪ್ಪಂದಕ್ಕಾಗಿ ಕೆಲವೊಂದು ಸಾಮಾನ್ಯ ನಿಯಮಗಳನ್ನು ಮಾಡಿಕೊಂಡು, ಎಲ್ಲರೂ ಆ ನಿಯಮುಗಳನ್ನು ಅನುಸರಿಸಿ ನಡೆಯಬೇಕಾಗುವುದು. ಹೀಗೆ ಅನುಸರಿಸಿ ನಡೆಯಬೇಕಾದರೆ, ಕುಟುಂಬದ ವ್ಯಕ್ತಿ-ವ್ಯಕ್ತಿಗಳಲ್ಲಿ ತಮ್ಮ ಕುಟುಂಬದ ವಿಷಯಕವಾದ ಶ್ರದ್ಧೆಯಿರಲೇಬೇಕಾಗುವುದು. ಶ್ರದ್ಧೆ ಇರದೆ ಹೋದರೆ, ಕುಟುಂಬದಲ್ಲಿ ಸಾಮರಸ್ಯವೇ ಉಳಿಯುವುದಿಲ್ಲ. ವೀಣೆಯ ತಂತಿಗಳು ಬೇರೆ ಬೇರೆ ಸ್ವರದ ಮಿಡಿತಗಳಿಂದ ತಂತಮ್ಮ ಪ್ರತ್ಯೇಕ ವ್ಯಕ್ತಿತ್ವವನ್ನು ಸ್ಥಾಪಿಸಿಕೊಂಡರೂ, ಅವು ಒಂದಕ್ಕೊಂದು ಪೂರಕವಾಗಿ ಸಹಕಾರಿಗಳಾಗಿ ಕಾರ್ಯಮಾಡಿ, ವೀಣೆಯ ಮಹತ್ತ್ವ ಹೆಚ್ಚಿಸುವುವು. ಹಾಗೆಯೆ ಕುಟುಂಬದಲ್ಲಿಯ ವ್ಯಕ್ತಿಗಳ ಸ್ವಭಾವ-ಗುಣಗಳಲ್ಲಿ ಪ್ರತ್ಯೇಕತೆಗಳು ಕಂಡರೂ, ಅವು ಒಂದಕ್ಕೊಂದು ಪೂರಕವಾಗಿ ಸಹಕಾರಿಗಳಾಗಿ ವರ್ತಿಸಿದರೆಯೆ ಕುಟುಂಬ ಶ್ರೇಯಸ್ಸನ್ನು ಹೊಂದುವುದು.

ಒಟ್ಟು ಒಂದು ಹೊರಬಿದ್ದೊಡನೆಯೆ ವ್ಯಕ್ತಿಗೆ ಸಮಾಜದ ಸಂಬಂಧ ಬರುವುದು. ಸಮಾಜವೆಂದರೆ ವಿವಿಧ ಸ್ವಭಾವಗಳ, ವಿವಿಧ ಗುಣಗಳ, ವಿವಿಧ ಆಶೆ-ಆಕಾಂಕ್ಷೆ-ಅಭಿರುಚಿಗಳ ವ್ಯಕ್ತಿಗಳ ಮಹಾರಣ್ಯ. ಇಲ್ಲಿಯೂ ವ್ಯಕ್ತಿ-ವ್ಯಕ್ತಿಗಳ ಸ್ವಭಾವ-ಗುಣಗಳೂ ಆಶೆ-ಅಭಿರುಚಿಗಳೂ ಒಂದಕ್ಕೊಂದು ಅಡೆತಡೆಯಾಗಿ ನಡೆದು ಘರ್ಷಣೆಯುಂಟಾಗದಂತೆ ವರ್ತಿಸಬೇಕಾಗುವುದು. ಘರ್ಷಣೆ[illegible] ಹೋದೆ, ಸಮಾಜದಲ್ಲಿ ಶಾಂತಿ-ಸಮಾಧಾನಗಳೇ [illegible] ವೈಪರೀತ್ಯಪೂರ್ಣವಾದ ಸಮಾಜದಲ್ಲಿ ಎಲ್ಲ ವ್ಯಕ್ತಿ-[illegible] ಮುಂದುವರಿಸುವುದಿಲ್ಲ. ವ್ಯಕ್ತಿ-ವ್ಯಕ್ತಿಗಳಲ್ಲಿ ಘರ್ಷಣೆಗಳು [illegible] ಹೊಂದದೆ, ಬಲಿಷ್ಠ ವ್ಯಕ್ತಿ ಬಲಹೀನ ವ್ಯಕ್ತಿಯನ್ನು ನೆಟ್ಟಿ [illegible] ಮಾಡಿಸಿಬಿಟ್ಟೀತು. ಆದುದರಿಂದಲೆ ಸಮಾಜದಲ್ಲಿ ಸಮತೆಯನ್ನು ಕಾಯಬೇಕಾಗುವುದು. ಸಮತೆಯಿಲ್ಲದೆ ಹೋದರೆ, ವ್ಯಕ್ತಿ ಜೀವನ—ವಿಕಾಸದ ಮುಖವನ್ನೇ ಕಾಣದೆ ಹೋಗುವುದು. ಆದುರಿಂದಲೇ ಸಮತೆಯನ್ನು ಕಾಯುವುದಕ್ಕಾಗಿ ಸರ್ವಸಾಮಾನ್ಯವಾದ ಸಾಮಾಜಿಕ ನಿಯಮುಗಳನ್ನು ಮಾಡಿಕೊಳ್ಳಬೇಕಾಗುವುದು. ಸಮಾಜದ ಪ್ರತಿಯೊಂದು ವ್ಯಕ್ತಿಯೂ ಈ ನಿಯಮುಗಳನ್ನು ಜೀವಭಾವದಿಂದ ಅನುಸರಿಸಿ ನಡೆದುಕೊಳ್ಳಬೇಕಾಗುವುದು. ಸರ್ವರ ಬಾಳು ಸಮಾಧಾನಗಳೇ ಈ ನಿಯಮುಗಳ ಗುರಿಯಾದುದರಿಂದ, ಸರ್ವರೂ ಈ ನಿಯಮುಗಳನ್ನು ಶ್ರದ್ಧೆಯಿಂದಲೇ ಕಾಣಬೇಕಾಗುವುದು.

ಮೇಲಿನ ವಿವೇಚನೆಯಿಂದ ಪ್ರತಿಯೊಬ್ಬ ಮಾನವ ವ್ಯಕ್ತಿಗೂ ಆತ್ಮಶ್ರದ್ಧೆ, ಕುಟುಂಬಶ್ರದ್ಧೆ, ಸಮಾಜಶ್ರದ್ಧೆಗಳು ಅತ್ಯವಶ್ಯವೆಂಬ ಮಾತು ತಾನೇ ಸಿದ್ಧವಾಗುವುದು. ಈ ಶ್ರದ್ಧೆಗಳು ಜಾಗೃತವಿರುವ ಪ್ರದೇಶದಲ್ಲಿ, ದುಃಖ-ದುಮ್ಮಾನಗಳು ತಲೆಯನ್ನೇ ಎತ್ತಲಾರವು. ಸಾಮಾಜಿಕ ವಿಷಮತೆಯು ಕಹಿಗೊಳಸನ್ನು ಉಣ್ಣಬೇಕಾದ ಪ್ರಸಂಗವೇ ಬರಲಾರದು.

ಸಾಮಾಜಿಕ ಶ್ರದ್ಧೆಯೇ ದೇಶಕಾಲಾನುಸಾರವಾಗಿ ರಾಜನಿಷ್ಠೆ, ರಾಷ್ಟ್ರನಿಷ್ಠೆ, ಪ್ರಜಾನಿಷ್ಠೆ, ಧರ್ಮನಿಷ್ಠೆ, ಎಂಬುದಾಗಿ ಬೇರೆ ಬೇರೆ ನಾಮಗಳನ್ನು ಪಡೆದಿರುವುದು. ಇವುಗಳಲ್ಲಿಯ ಕಾಲೋಚಿತವಾದ ಯಾವ ನಿಷ್ಠೆಯೂ ಸಮಾಜದ ಶಾಂತಿಗೆ ಕಾರಣವಾಗಿ ನಿಲ್ಲಬಲ್ಲದು. ಆದರೆ ಇಂದಿನ ನಮ್ಮ ಜೀವನದಲ್ಲಿ ಯಾವ ನಿಷ್ಠೆಗೂ ಅವಕಾಶವಿಲ್ಲದಂತಾಗಿದೆ. ವ್ಯಕ್ತಿಗೆ ತನ್ನ ಸ್ವಂತದ ವಿಕಾಸದ ಕಲ್ಪನೆಯಿಲ್ಲ; ಕುಟುಂಬಕಲ್ಯಾಣದ ವಿಚಾರವಿಲ್ಲ; ಸಾಮಾಜಿಕ ಸಮತೆಯ ವಿವೇಚನೆಯಿಲ್ಲ. ಪ್ರತಿಯೊಂದು ವ್ಯಕ್ತಿಯೂ ಯಾವ ಕಟ್ಟುಪಾಡುಗಳಿಗೂ ಒಳಗಾಗದೆ, ಸ್ವೈರವಾಗಿ ನಡೆದುಕೊಂಡು ಸ್ವಾರ್ಥವನ್ನು ಸಾಧಿಸಲು ಹವಣಿಸುತ್ತಲಿದೆ. ವ್ಯಕ್ತಿ-ವ್ಯಕ್ತಿಗಳ ಸ್ವಾರ್ಥ ಸಾಧಕ ಪ್ರವೃತ್ತಿಗಳೇ ಸಮಾಜದಲ್ಲಿ ಹಲವು ವಿಧದ ಘರ್ಷಣೆಯನ್ನು ಎಬ್ಬಿಸುತ್ತಲಿವೆ. ಯಾವ ವ್ಯಕ್ತಿಗೂ ತಾನು ಎಂತಹ ಸಾಮಾಜಿಕ ಅಪರಾಧಗಳನ್ನು ಮಾಡುತ್ತೇನೆಂಬುವರ ಕಡೆಗೆ ಲಕ್ಷ್ಯವೇ ಇಲ್ಲದಾಗಿದೆ. ಬಲವಂತರಿಂದ ಬಲಹೀನರು ಏಟುತಿಂದು ಬಳಲುತ್ತಿರುವುದು ಎಲ್ಲೆಲ್ಲಿಯೂ ನಡೆದಿದೆ. ಎಂತಲೇ ಇಂದು ವೈಯಕ್ತಿಕ ಜೀವನದಲ್ಲಿ ಶಾಂತಿ-ಸಮಾಧಾನಗಳಿಲ್ಲ; ಸಾಮಾಜಿಕ ಜೀವನದಲ್ಲಿ ಶಾಂತಿ-ಸಮಾಧಾನಗಳಿಲ್ಲ. ಎಲ್ಲೆಲ್ಲಿಯೂ ಅತೃಪ್ತಿ, ನಿಟ್ಟುಸಿರು, ಕ್ರೋಧ, ದ್ವೇಷ, ಮತ್ಸರ, ಕಲಹ, ದುಃಖ, ವಿನಾಶ—ಇವೇ ಕಣ್ಣಿಗೆ ಬೀಳುತ್ತಲಿವೆ. ಶ್ರದ್ಧೆಗೆ ಸ್ಥಾನವೇ ದೊರೆಯದಿರುವ ಸಮಾಜದಲ್ಲಿ, ಸುಖ-ಶಾಂತಿಗಳಿಗೆ ಅವಕಾಶವೆಲ್ಲಿ? ಇದರ ವಿಚಾರವನ್ನು ವರ್ತಮಾನ ಕಾಲದ ಪ್ರತಿಯೊಂದು ವ್ಯಕ್ತಿಯೂ ಮಾಡಬೇಕಾಗಿದೆಯಲ್ಲವೆ?

ನಾಡನಡೆ

ಪ್ರಾಂತನಿರ್ಮಿತಿಗಾಗಿ ಪ್ರಾಣಾಹುತಿ

ಭಾಷಾನುಗುಣ ಪ್ರಾಂತರಚನೆಯ ಚಟುವಟಿಕೆಗಳು ದಕ್ಷಿಣ ಭಾರತದ ಎಲ್ಲ ಭಾಷಾಪ್ರದೇಶಗಳಲ್ಲಿ ನಡೆದಿವೆಯಾದರೂ, ಆಂಧ್ರ ಪ್ರದೇಶದ ಜನರಷ್ಟು ಉತ್ಕಟಭಾವನೆಯ ಚಳವಳಿಯನ್ನು ಇನ್ನಾವ ಭಾಷಾಪ್ರದೇಶದ ಜನರೂ ನಡೆಯಿಸಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಆಂಧ್ರಪ್ರಾಂತ್ಯದ ಏಕೀಕರಣ ಚಳವಳಿಯು ಬಹುಕಾಲದಿಂದಲೂ ನಡೆದುಕೊಂಡುಬಂದುದು; ಆದರೆ ಹಿಂದಿನ ಬ್ರಿಟಿಷರಿಗೆ ಈ ಆಂಧ್ರದ ಏಕೀಕರಣ ಬೇಡವಾಗಿದ್ದಿತು. ಬ್ರಿಟರಿಗೆ ವಿರೋಧಿಯಾಗಿ ನಡೆಯುವುದನ್ನೇ ಗುರಿಯಾಗಿಟ್ಟುಕೊಂಡಿದ್ದ ಹಿಂದಿನ ಕಾಂಗ್ರೆಸ್ಸು, ಭಾಷಾನುಗುಣ ಪ್ರಾಂತರಚನೆಯ ತತ್ತ್ವವನ್ನೊಪ್ಪಿಕೊಂಡು, ತನ್ನ ಸ್ವದೇಶವಿಭಾಗದಲ್ಲಿ ಆಂಧ್ರಪ್ರಾಂತಕ್ಕೆ ಸ್ವತ್ಯೇಕ ಸ್ಥಾನವನ್ನು ಕಲ್ಪಿಸಿಕೊಟ್ಟಿತು. ಕಾಂಗ್ರೆಸ್ಸಿನ ಈ ಧೋರಣೆಯಿಂದ ಆಂಧ್ರಜನರಲ್ಲಿ ಕಾಂಗ್ರೆಸ್ಸಿನ ನಿಷ್ಠೆ ಬೆಳೆಯಿತು. ಎಂತಲೇ ಆ ಭಾಗದಲ್ಲಿ ಕಾಂಗ್ರೆಸಿನ ಸ್ವತಿಯೊಂದು ಕಾರ್ಯಕ್ರಮಗಳೂ ಯಶಸ್ವಿಯಾಗಿ ನೆರವೇರುತ್ತಲಿದ್ದುವು. ಆಂಧ್ರನಲ್ಲಿಯ ಬಹುಸಂಖ್ಯಾಕರು ಕಾಂಗ್ರೆಸ್ಸನ್ನು ಆತ್ಮೀಯತೆಯಿಂದ ಕಾಣುತ್ತಲಿದ್ದರು.

ಸರಿ! ಬ್ರಿಟಿಷರು ಕಾಂಗ್ರೆಸಿನ ಕೈಗೆ ರಾಜ್ಯಸೂತ್ರಗಳನ್ನು ಒಪ್ಪಿಸಿಕೊಟ್ಟು ಭಾರತವನ್ನು ಬಿಟ್ಟು ತೆರಳಿದರು. ಕಾಂಗ್ರೆಸ್ಸಿನ ಅಭಿಮಾನಿದೈವತವಾದ ಮಹಾತ್ಮಾ ಗಾಂಧಿಯವರು, ತಮ್ಮೊಂದಿಗೆ ಕಾಂಗ್ರೆಸ್ಸಿನ ಸತ್ಯ-ಅಹಿಂಸೆ-ಜನಹಿತಗಳನ್ನು ತೆಗೆದುಕೊಂಡು ಕಣ್ಮರೆಯಾಗಿಬಿಟ್ಟರು. ಭಾರತದ ರಾಜ್ಯಘಟನೆಯ ಮಹಾನಾಟಕ ನಡೆಯಿತು. ಆಗ ಭಾಷಾನುಗುಣಪ್ರಾಂತರಚನೆಯ ಮಾತು-ಕತೆಗಳ ಗುಲ್ಲು ಏಳಲು, ಪರಿಸ್ಥಿತಿಯ ಕಾರಣವನ್ನು ಮುಂದೊಡ್ಡಿ, ಆಗ ಹೊಸ ಪ್ರಾಂತಗಳ ನಿರ್ಮಾಣಕಾರ್ಯವನ್ನು ಮುಂದೆ ಹಾಕಿದರು. ಅಂದಿನ ವಿಷಮಪರಿಸ್ಥಿತಿಯ ಮನವರಿಕೆಯೊಡದುದರಿಂದಲೋ ಏನೋ, ಪ್ರಾಂತವನ್ನು ಬೇಡುವ ಜನರೆಲ್ಲ ಕಾಂಗ್ರೆಸ್ಸಿನ ಮುಂದಾಳುಗಳಲ್ಲಿ ನಂಬುಗೆಯನ್ನಿಟ್ಟು ಆಗ ಸುಮ್ಮನಾದರು.

ಹೊಸ ಚುನಾವಣೆ ನಡೆದು ಹೊಸ ಸರಕಾರಗಳು ಸ್ಥಾಪಿತವಾದುವು. ಅಧಿಕಾರಲಾಲಸೆಯ ಕಾಂಗ್ರೆಸ್ ಮುಂದಾಳುಗಳು ಮಂತ್ರಿಗಳಾಗಿ, ದೊರೆತ ಸ್ಥಾನ-ಮಾನಗಳಲ್ಲಿ ಸ್ವತಂತ್ರ ಪ್ರಾಂತಗಳ ನಿರ್ಮಿತಿಯ ಮಾತನ್ನೇ ಮರೆತು ಕುಳಿತರು. ಕಾಂಗ್ರೆಸ್ಸಿನಲ್ಲಿ ಇದ್ದ ಜನರಿಗೆ ಪಕ್ಷದ ಶಿಸ್ತುಭಂಗದ ಭೂತದ ಬೆದರಿಕೆ. ಕಾಂಗ್ರೆಸ್ಸಿನ ಹೊರಗಿದ್ದು ಪ್ರಾಂತದ ನಿರ್ಮಿತಿಯ ಬಗ್ಗೆ ಕೂಗುವವರಲ್ಲಿ ಜನರ ಶ್ರದ್ಧೆಯಿರಲಿಲ್ಲ. ಕಾಂಗ್ರೆಸ್ಸು ಕೊಟ್ಟ ಮಾತಿನಂತೆ ನಡೆದುಕೊಳ್ಳುವುದೆಂಬ ನಂಬಿಗೆಯೂ ಬಹುಜನರಲ್ಲಿತ್ತು.

ಆದರೆ ಸರಕಾರ ಕಾಂಗ್ರೆಸ್ಸಿನದಾದರೂ ಹಿಂದಿನ ಕಾಲದ ಕಾಂಗ್ರೆಸ್ಸಿನ ತತ್ತ್ವವನ್ನು ಅದು ಒಪ್ಪಿಕೊಳ್ಳಲಿಲ್ಲ. ಭಾಷಾನುಗುಣ ಪ್ರಾಂತನಿರ್ಮಿತಿಯ ವಿಚಾರಕ್ಕೆ ಅಡ್ಡಗಾಲು ಹಾಕುವ ಕೆಲಸವನ್ನೇ ಅದು ನಡೆಯಿಸಿತು. ಪ್ರತ್ಯೇಕ ಪ್ರಾಂತ್ಯದ ಬಗ್ಗೆ ಕುತೂಹಲಿಗಳಾಗಿರುವ ಆಂಧ್ರಜನರಲ್ಲಿ, ಹದಿನಾರಾಣೆ ಕಾಂಗ್ರೆಸ್ಸಿಗರಾಗಿ ಇದ್ದವರು—ಮಹಾತ್ಮರ ವಿಷಯದಲ್ಲಿ ಜೀವಂತ ಶ್ರದ್ಧೆಯನ್ನು ತಳೆದಿದ್ದವರು—ಮುಂದಾಳುಗಳೇ ಪ್ರಾಂತೀಕರಣದ ಚಳವಳಿಯ ಸೂತ್ರವನ್ನು ಕೈಕೊಂಡರು. ಕಳೆದ ವರ್ಷವೇ ಒಬ್ಬ ಸುಪ್ರಸಿದ್ಧ ಮುಂದಾಳು ಉಪವಾಸ ಸತ್ಯಾಗ್ರಹ ನಡೆಯಿಸಿದರು; ಆದರೆ ಅವರಿಗೆ ಪ್ರಾಣಾಹುತಿ ಕೊಡಬೇಕಾದ ಪ್ರಸಂಗ ಬರಲಿಲ್ಲ. ಹೇಗೋ ತಪ್ಪಿಹೋಯಿತು. ಈಗ ಮತ್ತೆ ಪೊಟ್ಟಿ ರಾಮುಲು ಅವರು ಉಪವಾಸ ಸತ್ಯಾಗ್ರಹವನ್ನು ಹೂಡಿ, ಪ್ರಾಂತನಿರ್ಮಿತಿಗಾಗಿ ಪ್ರಾಣಾಹುತಿಯನ್ನು ಕೊಟ್ಟರು.

ಯಾರು ಪೊಟ್ಟಿ ರಾಮುಲು ಸಾಮಾನ್ಯರೆ?

ಈಗ ಪ್ರಾಣಾಹುತಿಯನ್ನು ಕೊಟ್ಟ ಪೊಟ್ಟಿ ರಾಮುಲು ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ. ಕಾಂಗ್ರೆಸ್ಸಿನ ಸೇವೆಯಲ್ಲಿ ತಮ್ಮ ಜೀವನವನ್ನು ಸವೆಯಿಸಿದವರು. ಮಹಾತ್ಮರ ನಿಕಟವರ್ತಿಗಳಾಗಿದ್ದು ಸತ್ಯಾಗ್ರಹದ ತತ್ತ್ವವನ್ನು ಜೀರ್ಣವಾಗಿ ಅರಿತುಕೊಂಡವರು. ಉಪವಾಸ ಸತ್ಯಾಗ್ರಹದ ಅವಶ್ಯಕತೆಯ ಔಚಿತ್ಯವನ್ನು ಜೀರ್ಣವಾಗಿ ತಿಳಿದುಕೊಂಡವರು. ಇವರ ಮರಣಕ್ಕಾಗಿ ಮಹಾತ್ಮರ ನಿಜವಾದ ಅನುಯಾಯಿವರ್ಗವೆಲ್ಲ ಹೃತ್ಪೂರ್ವಕವಾಗಿ ಶೋಕವನ್ನು ಪ್ರದರ್ಶಿಸುತ್ತಲಿದೆ. ಇದನ್ನೆಲ್ಲ ವಿಚಾರಮಾಡಿ ನೋಡಿದಾಗ, ಆಂಧ್ರಜನರಿಗೆ ಪ್ರತ್ಯೇಕಪ್ರಾಂತ್ಯದ ಆವಶ್ಯಕತೆ ಎಷ್ಟರಮಟ್ಟಿಗಿದೆಯೆಂಬುದು ವ್ಯಕ್ತವಾಗುತ್ತದೆ.

ಇಂದು ಸ್ವಭಾಷಾ-ಸ್ವಸಂಸ್ಕೃತಿಗಳ ವಿಷಯದಲ್ಲಿ ಜಾಗೃತಿಯಿರುವ ಆಂಧ್ರರಿಗೂ ಕನ್ನಡಿಗರಿಗೂ ಸ್ವರಾಜ್ಯವಿದ್ದೂ ಇಲ್ಲದಂತಾಗಿದೆ. ಸ್ವಾತಂತ್ರ್ಯ ದೊರೆತೂ ದೊರೆಯದಂತಾಗಿದೆ. ಭಾರತ ಸರಕಾರದ ಎದುರು ಅನೇಕ ವಿಷಮಸಮಸ್ಯೆಗಳ ತೊಡಕು ಇರಬಹುದು ಸರಿಯೆ! ಆದರೆ ಆ ಸರಕಾರ ನಿಷ್ಪಕ್ಷಪಾತದಿಂದ ವಿಚಾರಮಾಡಿ ನೋಡಿದರೆ, ಆಂಧ್ರರೂ ಕನ್ನಡಿಗರೂ ಸದ್ಯದ ಪರಿಸ್ಥಿತಿಯಲ್ಲಿ ಪಡುತ್ತಿರುವ ಪಾಡೂ ವಿಷಮಸಮಸ್ಯೆಯಾಗಿ ತೋರಲೇಬೇಕು. ಎಲ್ಲ ಜನರ ಸುಖದ ಯೋಜನೆಯ ವಿಚಾರ ಮಾಡುತ್ತಿರುವ ಸರಕಾರ, ಆಂಧ್ರರಿಗೂ ಕನ್ನಡಿಗರಿಗೂ ಸುಖಾಪಹವಾದ ಮೊದಲ ಯೋಜನೆಯಾವುದೆಂಬುದನ್ನು ಯೋಚಿಸಬೇಕಲ್ಲವೆ? ಛತ್ರ-ಧರ್ಮಶಾಲೆಗಳಲ್ಲಿರಿಸಿ ಹೊಟ್ಟೆತುಂಬ ಊಟಕ್ಕೆ ಹಾಕಿದರೆ, ಆ ನಿರ್ವಾಸಿತ ಜೀವನದಲ್ಲಿ ಸುಖವೆನಿಸೀತೇ? ಸ್ವಂತದ ಮನೆಯಲ್ಲಿ ಕುಳಿತು ಸ್ವಂತಶ್ರಮದಿಂದ ಗಳಿಸಿ ಅರೆಹೊಟ್ಟೆಯುಂಡೇ ಆಗಲಿ, ಸ್ವತಂತ್ರವಾಗಿ ಬದುಕುವುದರಲ್ಲಿ ಪೌರುಷವಿದೆ; ಸುಖ-ಸಮಾಧಾನಗಳಿವೆ!

ಆಂಧ್ರರೂ ಕನ್ನಡಿಗರೂ ಇವೇ ಭಾವನೆಯಿಂದ ಪ್ರತ್ಯೇಕ ಪ್ರಾಂತವನ್ನು ಬೇಡುತ್ತಿರುವರು. ಸ್ವತಂತ್ರಭಾರತದ ಸೇವೆಯಲ್ಲಿ ತಮ್ಮ ವ್ಯಕ್ತಿತ್ವವನ್ನೂ ಸವೆಯಿಸಬೇಕೆಂದು ಇವರಿಗೆ ಆತುರ. ಆದರೆ ಇವರ ಮುಡಿಮೆ-ಪಡಿಪುಗಳ ನೆರನಿನಿಂದ ತಮ್ಮ ವ್ಯಕ್ತಿತ್ವವನ್ನು ಬೆಳೆಯಿಸಿ ಮೆರೆಯಿಸಬೇಕೆಂಬ ಕೆಲವು ಜನ ಮುರಾಶೆಯ ಮುಂದಾಳುಗಳಿಗೆ, ಈ ಪ್ರತ್ಯೇಕ ಪ್ರಾಂತೀಕರಣ ಬೇಡವಾಗಿದೆ. ಅವರ ದುರಾಶೆ ಆಂಧ್ರ

ನುತ್ತು ಕನ್ನಡಿಗರ ಆಕೆ-ಆದರ್ಶಗಳನ್ನು ಹುಡಿಗೂಡಿಸುತ್ತ ನಡೆದಿದೆ. ಲೋಕಕ್ಕೆ ಇವರ ಕೂಗು ಕೇಳಿಸಬೇಕಾಗಿತ್ತು....ಪೊಟ್ಟಿ ರಾಮುಲು ಅವರು ಹುತಾತ್ಮರಾಗಿ ಈ ಕೂಗನ್ನು ಮುಗಿಲಿಗೆ ಮುಟ್ಟಿಸಿದರು. ಪೊಟ್ಟಿ ರಾಮುಲು ಅವರಿಗೆ ಸ್ವಂತಕ್ಕೆ ಬೇಕಾದುದೇನು? ಏನೂ ಇರಲಿಲ್ಲ. ದುಃಖಿತರ ದುಃಖನಿವಾರಣೆಗಾಗಿ ತಮ್ಮ ಪ್ರಾಣವನ್ನೇ ಬಲಿದಾನವನ್ನಾಗಿಸಿದರು.

ಕರ್ನಾಟಕ ಪ್ರಾಂತದ ಗತಿಯೇನು?

ರಾಮುಲು ಅವರ ಪ್ರಾಣಾಹುತಿಯಿಂದ ಕಂಗೆಟ್ಟನರಾದ ಆಂಧ್ರದ ಜನಸಾಮಾನ್ಯರು ಅಲ್ಲಲ್ಲಿ ದೊಂಬೆಯೆಬ್ಬಿಸಿದರು. ರ್ಗಳಿರ ವಿಧ್ವಂಸಕ ಚಳವಳಿಯು ಪುನರವತಾರವಾಯಿತಲ್ಲಿ. ಕೇಂದ್ರಸರಕಾರಕ್ಕೆ ರಾಮುಲು ಅವರ ಜೀವದ ಬೆಲೆ ಗೊತ್ತಾಗದೆ ಹೋದರೂ, ತಮ್ಮ ಆಡಳಿತದ ಬೆಲೆ ಚೆನ್ನಾಗಿ ಗೊತ್ತಾಯಿತು. ಇನ್ನು ಬಿಗಿಹಿಡಿದು ಉಪಯೋಗವಿಲ್ಲವೆಂದು ಆಂಧ್ರಪ್ರಾಂತೀಕರಣದ ಪೂರ್ವಸಿದ್ಧತೆಯ ವಿಚಾರವನ್ನೇ ಪ್ರಾರಂಭಿಸಿಬಿಟ್ಟಿತು. ಆದರೆ ಆಂಧ್ರರಿಗಿಂತ ಹೆಚ್ಚಿನ ಕಷ್ಟವನ್ನು ಅನುಭವಿಸುತ್ತಲಿರುವ ಕನ್ನಡಿಗರ ಪ್ರಾಂತನಿರ್ಮಿತಿಯ ಮಾತನ್ನೇ ಸರಕಾರ ಎತ್ತದಿರುವುದು ಆಶ್ಚರ್ಯದ ಸಂಗತಿ. ನಮ್ಮ ಕೇಂದ್ರಸರಕಾರ ಕರ್ನಾಟಕದಿಂದಲೂ ಪ್ರಾಣಾಹುತಿಯನ್ನು ಅಪೇಕ್ಷಿಸುತ್ತಿರುವುದೋ ಏನೋ!

ಆಂಧ್ರಪ್ರಾಂತ ನಿರ್ಮಿತಿಯ ಘೋಷಣದಿಂದ ಬೆಚ್ಚಿಬಿದ್ದ ಕರ್ನಾಟಕದ ಮುಂದಾಳುಗಳು, ಕನ್ನಡದ ಭಾಗ ಆಂಧ್ರಕ್ಕೆ ಸೇರಬಾರದೆಂದು ಕೂಗಿಕೊಳ್ಳುವುದನ್ನು ನಡೆಯಿಸಿದ್ದಾರೆ ಇಷ್ಟೇ ಹೊರತು ಪ್ರಾಂತೀಕರಣದ ಮಾತನ್ನು ಗಟ್ಟಿಮುಟ್ಟಾಗಿ ಕೂಗಿಕೊಳ್ಳುತ್ತಿಲ್ಲ. ಹಾಗೆ ಕೂಗಿಕೊಳ್ಳುವುದಕ್ಕೆ ಅಧಿಕಾರೇತರರಾದ ಮುಂದಾಳುಗಳೆಂಬವರು ಕರ್ನಾಟಕದಲ್ಲಿ ಉಳಿದೇ ಇಲ್ಲ. ಎಂದರೆ ಮುಂದಾಳುಗಳೆನಿಸಿಕೊಳ್ಳುವವರೆಲ್ಲ ರಾಜ್ಯಸರಕಾರಗಳಲ್ಲಿಯೂ ಪ್ರಾಂತ ಸರಕಾರಗಳಲ್ಲಿಯೂ ಕಾಂಗ್ರೆಸ್ಸಿನಲ್ಲಿಯೂ ಅಧಿಕಾರ ಸ್ಥಾನಗಳನ್ನು, ಹಿಡಿದುಕೊಂಡು ಕುಳಿತಿದ್ದಾರೆ. ಜನಸಾಮಾನ್ಯರು ಕೂಗಿಕೊಳ್ಳುವುದಕ್ಕೆ ಅವಕಾಶವೂ ಇಲ್ಲ. ಹೀಗಾಗಿ ಕನ್ನಡಿಗರಿಗೆ ಪ್ರತ್ಯೇಕ ಪ್ರಾಂತ್ಯದ ಆವಶ್ಯಕತೆ ಇಲ್ಲವೇ ಇಲ್ಲವೇನೋ ಎಂದು ಬಹುಜನರಿಗೆ ಎನಿಸುವಂತೆ, ಇಂದಿಲ್ಲಿ ಮಂಜುಗಟ್ಟಿದ ಪರಿಸ್ಥಿತಿಯಿದೆ. ದೇಶದ ಯಾವುದೇ ವಿಧಾಯಕ ಕಾರ್ಯದ ಬಗೆಗೆ, ಆಸ್ಥೆಯಿಂದ ಇದುವರೆಗೂ ಚಳವಳಿ ನಡೆಯಿಸಿದವರೆಂದರೆ, ಕರ್ನಾಟಕದಲ್ಲಿಯ ಮಧ್ಯಮ ತರಗತಿಯ ಜನರು. ರಾಜ್ಯಸರಕಾರಗಳು ತಮ್ಮ ಹೊಸ ಹೊಸ ಕಾಯಿದೆಗಳಿಂದ ಬಿಗಿದು, ಜೀವ-ಸಾವುಗಳ ನಡುವೆ ಅವರನ್ನು ಜೋಲುಬಿಟ್ಟಿರುವಾಗ, ಕರ್ನಾಟಕ ಏಕೀಕರಣದ ಚಳವಳಿಯನ್ನು ಮಾಡಬೇಕೆಂಬ ಉತ್ಸಾಹ-ತವಕಗಳು ಅವರಿಗೆ ಹೇಗೆ ಉಂಟಾದಾವು? ಆದುದರಿಂದಲೇ ಕರ್ನಾಟಕದಲ್ಲಿ ಪ್ರಾಂತನಿರ್ಮಿತಿಯ ಚಳವಳಿಯು ಉತ್ಕಟವಾದ ರೀತಿಯಿಂದ ಏಳುವ ಸಂದರ್ಭವೇ ಇಲ್ಲ. ಕರ್ನಾಟಕದ ವಿಚಾರದಲ್ಲಿ ಕೇಂದ್ರಸರಕಾರ ಸಂಪೂರ್ಣ ನಿಶ್ಚಿಂತವಾಗಿಯೇ ಇರಬಹುದು. ಆಂಧ್ರಪ್ರಾಂತ ನಿರ್ಮಾಣವಾಗುವ ಮುಂದೆ ಮಹಾರಾಷ್ಟ್ರಪ್ರಾಂತವೂ ಸ್ವತಂತ್ರವಾಗಿ, ಅನೇಕಪ್ರಾಂತಗಳು ಬೇಡವೆಂದು ಬಿಟ್ಟ ಭಾಗವು ಕರ್ನಾಟಕ ಪ್ರಾಂತವಾಗಿ ನಿಲ್ಲುವುದೆಂದು ನಮ್ಮ ಮುಂದಾಳುಗಳೂ ನಿಶ್ಚಿಂತೆಯ ನಿದ್ರೆಯಲ್ಲಿ ಕನಸನ್ನು ಕಾಣುತ್ತಿರಬಹುದು. ಕನ್ನಡಿಗರ ದುಃಖವನ್ನು ಕನ್ನಡದೇವಿಯೇ ಕೇಳಬೇಕು; ತಾನೂ ಕಂಬನಿ ಸುರಿಸಬೇಕು. ಈ ಪಾರ್ಲಿಮೆಂಟು ಅಸೆಂಬ್ಲಿಗಳಿಗೆ ಆರಿಸಿ ಹೋದ ಕನ್ನಡ ಮುಂದಾಳುಗಳು, ಇನ್ನೊಂದು ಸಲದ ಚುನಾವಣೆಯಲ್ಲಿ ಆಯ್ಕೆ ಪಡೆದು ಹೋಗಬೇಕೆಂದರೆ, ಆ ಕಾಲದಲ್ಲಿ ಕರ್ನಾಟಕ ಪ್ರದೇಶವೆಂಬುದು ಪ್ರತ್ಯೇಕವಾಗಿ ಉಳಿಯಬಹುದೆ?

ರಾಯಲುಸೀಮೆಯವರ ರಾದ್ಧಾಂತ

ಅಧಿಕಾರಲಾಲಸೆ ಕನ್ನಡಿಗರಿಗಷ್ಟೇ ಹುಚ್ಚು ಹಿಡಿಸಿಲ್ಲ; ತೆಲುಗು ರಾಯಲುಸೀಮೆಯಲ್ಲಿಯ ಕೆಲವರಿಗೂ ಹುಚ್ಚು ಹಿಡಿಸಿದೆ. ಎಂತಲೇ ಆಂಧ್ರಪ್ರಾಂತದಲ್ಲಿಯೇ ಪರಿಗಣಿತವಾಗಬೇಕಾದ ರಾಯಲುಸೀಮಾ ಭಾಗದ ಜನನಾಯಕರು, ವೈಯಕ್ತಿಕ ಸ್ವಾರ್ಥಸಾಧನೆಗಾಗಿ ತಾಯಿಯ ಹೊಟ್ಟೆಯನ್ನೇ ಹರಿದು ತಿನ್ನುವ ಕಾರ್ಯವನ್ನು ನಡೆಯಿಸಿರುವರು. ಕರ್ನಾಟಕದಲ್ಲಿ ಮೈಸೂರ ಜನನಾಯಕರು ನಡೆಯಿಸಿಲ್ಲವೇ? ಹಾಗೆಯೇ ಇದೆ ರಾಯಲುಸೀಮೆಯವರ ಕೂಗಾಟ. ಕನ್ನಡಿಗರಲ್ಲಿ ಆದ ಮೈಸೂರಿನವರಿಗೆ ಕರ್ನಾಟಕ ಪ್ರಾಂತದಲ್ಲಿ ಸೇರುವುದು ಬೇಕಾಗಿಲ್ಲ; ಆಂಧ್ರರೇ ಆದ ರಾಯಲುಸೀಮೆಯವರಿಗೆ ಆಂಧ್ರರ ಏಕೀಕರಣದಲ್ಲಿ ಸೇರುವುದು ಬೇಕಾಗಿಲ್ಲ. ಇನ್ನೊಂದು ಭಾಷೆಯವರಾದ ತಮಿಳರೊಂದಿಗೆ ಮದ್ರಾಸ್ ಪ್ರಾಂತದಲ್ಲಿಯೇ ಇದ್ದುಬಿಡಬೇಕೆಂಬ ಅಪೇಕ್ಷೆ ಅವರಿಗೆ. ಇದಕ್ಕಾಗಿ ಅವರು ಕೆಲವು ಕಾರಣಗಳನ್ನು ಕೊಡುತ್ತಿರಬಹುದು. ಹೊರಗಣ್ಣಿಗೆ ಅವು ಸಮಂಜಸವಾಗಿಯೂ ಕಾಣುತ್ತಿರಬಹುದು. ಆದರೆ ಆಂಧ್ರಪ್ರಾಂತನಿರ್ಮಾಣದ ದಾರಿಯಲ್ಲಿ ರಾಯಲುಸೀಮೆಯವರ ಈ ಚಟುವಟಿಕೆಯೊಂದು ಅಡ್ಡಗೋಡೆಯನ್ನೇ ಒಡ್ಡಬಹುದಾಗಿದೆ. ರಾಯಲುಸೀಮೆಯವರು ಆಂಧ್ರದಲ್ಲಿ ಸೇರಲು ಒಪ್ಪುವುದಿಲ್ಲ. ಹೈದರಾಬಾದಿನವರು ಆ ರಾಜ್ಯವನ್ನು ಒಡೆಯಲು ಸಿದ್ಧರಾಗುವುದಿಲ್ಲವಾದುದರಿಂದ, ಅದರ ಎಂಟು ಜಿಲ್ಲೆಗಳೂ ಆಂಧ್ರದಿಂದ ಪ್ರತ್ಯೇಕವಾಗಿಯೇ ಉಳಿಯುವುವು. ಮದ್ರಾಸಿನ ಅಲೆಯನ್ನಂತೂ ಆಂಧ್ರರು ಮಾಡುವ ಹಾಗಿಲ್ಲ. ಹೀಗಿರುವಾಗ ಈಗ ನಿರ್ಮಾಣವಾಗಬಹುದಾದ ಆಂಧ್ರಪ್ರಾಂತಕ್ಕೆ ಪರಿಪೂರ್ಣತೆ ಹೇಗೆ ಸಿಕ್ಕಬಹುದು? ಇಂತಹ ಅಪೂರ್ಣಪ್ರಾಂತದಿಂದ ಆಂಧ್ರರು ಹೇಗೆ ಸಂತೃಪ್ತರಾಗುವರು? ಈ ಪ್ರಾಂತೀಕರಣದ ಚದುರಂಗದಾಟದಲ್ಲಿ ಆಂಧ್ರಪ ಜನತೆ ಸರಕಾರಕ್ಕೆ ಇನ್ನೆಂತಹ ಶಹವನ್ನು ಕೊಡುವುದೋ ನೋಡಬೇಕು. ಏಕೆಂದರೆ ಆಂಧ್ರದ ಜನರು ನಿರಾಶರಾಗಿ ಕೈಮುಚ್ಚಿ ಕುಳಿತುಕೊಳ್ಳುವವರಲ್ಲ.

ಚಪರಾಸಿ

(ಚಿಕ್ಕಕತೆ)

ಪ್ರೋ. ಬಿ. ಆರ್. ಪಾಡಿಪ್ಪಿ ಎಂ. ಎ., ಬಿ. ಟಿ. ಧಾರವಾಡ

★

ಇನ್ನೊಬ್ಬರು ತನ್ನನ್ನ ಕೀಳೆಂದು ಭಾವಿಸಿ ಇರದಿದ್ದರೂ ತಾನು ಕೀಳೆಂದು ತಾನೇ ಭಾವಿಸಿ ಮರುಗುತ್ತಿರುವುದು ಮಾನವನ ಮನಸ್ಸಿನದೊಂದು ರೀತಿ. ಚಪರಾಸಿ ಕಾಶೀಮನು ಸಂತಾಪಗೊಂಡುದೂ ಈ ಕೀಳ್ಮೆಯ ಭಾವನೆಗಾಗಿಯೆ!

★

ಎಂದಿನಂತೆ ಕೋಳಿ ಕೂಗುವ ಮುನ್ನ ಏಳುವ ಕಾಶೀಮ, ಇಂದು ಹಾಸಿಗೆಯಿಂದ ಎದ್ದು 'ಅರೇ ಅಲ್ಲಾ!' ಎಂದು ನುಡಿಯದೆ ಸುಮ್ಮನೆ ಬಿದ್ದುಕೊಂಡಿದ್ದ! ಬೇಸಗೆಯ ದಿನಗಳಲ್ಲಿ ಬಯಲಿನಲ್ಲಿ ಬಿದ್ದುಕೊಳ್ಳುವುದು, ಬಯಲುಸೀಮೆಯಲ್ಲಿ ರೂಢಿಯಷ್ಟೆ? ಕಾಶೀಮನಾದರೂ ಮನೆಯ ಮುಂದೆ ತಾನೇ ನೆಟ್ಟ ಬೇವಿನಮರದ ಹಸನಾದ ಕಟ್ಟೆಯಮೇಲೆ ಮಲಗಿಕೊಳ್ಳುತ್ತಿದ್ದ. ಕಾಶೀಮನ ಸಂಸಾರವೆಂದರೆ—ಕಾಶೀಮ, ಅವನ ತಂಗಿ—ವಿಧವೆ—ಫಾತೂ, ನಾಲ್ಕಾರು ಮೇಕೆಗಳು ಹಾಗು ಹಲವಾರು ಕೋಳಿಗಳು. ಕಾಶೀಮನ ಇದ್ದೊಬ್ಬ ಮಗ ಹುಸೇನಿ ನೌಕರದಾರನಾಗಿ ಹೋಗಿ ಎಷ್ಟೋ ವರುಷಗಳು ಕಳೆದಿದ್ದವು. ಕಾಶೀಮ, ತಾನಿದ್ದ ಊರ ಮಾಮಲೇದಾರರ ಕಚೇರಿಯಲ್ಲಿ ಪಟ್ಟೇವಾಲಾ ಆಗಿ ಎಷ್ಟು ವರುಷಗಳಾದುವೆಂಬುದನ್ನು ಹೇಗೋ ಲೆಕ್ಕ ಹಾಕಿ ಹೇಳುವುದರಲ್ಲಿಯೇ— ಅವನನ್ನು ಕೇಳಿದರೇ ಅವನ್ನ ಬಿಳಿಯ ಗಡ್ಡ ನೋಡಿ, ಕಾಶೀಮ ನಿವೃತ್ತನಾಗಲು ಎಂದಿದ್ದಾನೆಂದು ತಿಳಿದುಕೊಳ್ಳಬಹುದು! ಕಾಶೀಮನ ಕಣ್ಣುಗಳು ಕೃಷ್ಣಪಾಪುವುಗಳು. ಎಮರು ನಿಂತವರ ಮೇಲೆ ಒಂದು ಪ್ರಭುತ್ವ ಬೀರುವಂತಹವು. ಗಡ್ಡದ ಮೇಲೆ ಕೈ ಆಡಿಸುವುದು ಅವನಿಗೆ ರೂಢಿಯಾಗಿದೆ; ಇಷ್ಟೇ ಅಲ್ಲದೆ, ಅವುಗಳ ಮೇಲೆ ಅವನಿಗೆ ಇಲ್ಲದ ಕಳಿಮಾನ! ಒಮ್ಮೆ ಓಣಿಯ ಹುಡುಗರು 'ಗಡ್ಡದ ಸಾಬ' ಎಂದು ಕೂಗಿದ್ದಕ್ಕೆ—ಕಾಶೀಮ ಆ ಹುಡುಗರನ್ನು ಜೆನ್ನಾಗಿ ಥಳಿಸಿದ್ದನಂತೆ. ಆ ಹುಡುಗರಲ್ಲಿ ಆ ಊರ ಮಾಮಲೇದಾರರ ಮಗನೂ ಸೇರಿದ್ದನಂತೆ! ಮಾಮಲೇದಾರರು ಮಾತ್ರ ಅವನನ್ನು ಈ ಮಾತಿನ ಬಗ್ಗೆ ಎಂದೂ ಕೇಳಲಿಲ್ಲವೆಂದು ಕಾಶೀಮನಿಗೆ ಬಹು ಹೆಮ್ಮೆ! ಅಂದಿನಿಂದ ಅವನ ಗಡ್ಡದ 'ಉಸಾಬರಿ'ಯನ್ನು ಯಾರೂ ಮಾಡುತ್ತಿರಲಿಲ್ಲ. ಅವನ ಆಕಾರ ಭವ್ಯ. ದೇಹ ಬಡಕಾಗಿದ್ದರೂ ನಿಲುವು ಎತ್ತರ. ತಲೆಯೆಲ್ಲ ಬೆಳ್ಳಗಾಗಿದ್ದರೂ— ಹಟ ತುಂಬಿದ ಹೆಣೆ. ಕೊಟ್ಟ ಕೆಲಸವನ್ನು ತಪ್ಪಿಸುವವನಲ್ಲವೆಂದು ಅವನ ನೀಟಾದ ಮೂಗು ಸೂಚಿಸುವಂತಿತ್ತು. ಮನೆಯ ಅಂಗಣದಲ್ಲಿ ಮೇಕೆಗಳ ಸಂಗಡ ಅವನು ಗುದ್ದಾಡುವ ದೃಶ್ಯ ಮೋಹಕವಾಗಿತ್ತು. ಕೆಂಪು ಪಟ್ಟೆ-ಪಟ್ಟೆಯ ಒಂದು ಅರಿವೆಯನ್ನು ಮೈಗೆ ಸುತ್ತಿಕೊಂಡು—ತುಸು ಭೀಕರನಾಗಿಯೇ ಕಾಣುತ್ತಿದ್ದ. ಆದರೂ ಕಾಶೀಮನ ಬಗ್ಗೆ ಜನರಲ್ಲಿ ಒಂದು ಆದರಭಾವ ಮೂಡಿಕೊಂಡು ನಿಂತಿತ್ತು.

ಮೂಡಣದಿಕ್ಕು ರಾಗರಂಜಿತವಾಗಿ ನಸುಕಿನ ತಂಗಾಳಿ ಬೀಸಿದೊಡನೆ, ಕಾಶೀಮ, ಪ್ರತಿದಿನವೂ ಹಳ್ಳದ ಕಡೆಗೆ ಹೋಗಿ ಬರುವ ರೂಢಿ. ಮರಳಿ ಬರುವಾಗ ಒಂದು ಹುಲ್ಲಿನ ಸೆಂಡೆಯನ್ನು ಮೇಕೆಗಳಿಗಾಗಿ ತಂದು ಚೆಲ್ಲುತ್ತಿದ್ದ. ಬಳಿಕ ತನ್ನ ಡ್ರೆಸ್ ಹಾಕಿಕೊಂಡು ಮಾಮಲೇದಾರರ ಮನೆಗೆ ಹೋಗುತ್ತಿದ್ದ. ಆದರೆ ಅದೇಕೊ, ಇಂದು ಕಾಶೀಮ ಹಾಸಿಗೆಯನ್ನೇ ಬಿಟ್ಟು ಎದ್ದಿರಲಿಲ್ಲ. ತಂಗಿ ಫಾತೂ ಎರಡು ಮೂರು ಸಲ ಸುಳಿದು ಹೊದಳು. ಮೇಕೆಗಳನ್ನು ಚಪ್ಪರಿಸಿದಳು 'ಹ್ಯಾ-ಹೂ' ಧ್ವನಿಮಾಡಿದಳು. ಕಾಶೀಮ ಅಸ್ವಸ್ಥನಾದರೆ ಮಾತ್ರ ಹೀಗೆ ಮಾಡುವನೆಂದು ಅವಳು ಬಲ್ಲಳು. ಇದಲ್ಲದೆ ಹಿಂದಿನ ರಾತ್ರಿ ಕಾಶೀಮ, ತನ್ನ ಆ ಮುರುಕು ಕನ್ನಡಕ ಹಾಕಿಕೊಂಡು ಒಂದು ಪತ್ರವನ್ನು ಮೇಲಿಂದ ಮೇಲೆ ಓದಿ-ಆ ಮಸಕು ಬೆಳಕಿನಲ್ಲಿ-ನಿಟ್ಟುಸಿರು ಬಿಡುತ್ತಿದ್ದುದನ್ನು ಆಕೆ ಕಂಡಿದ್ದಳು! ಮಗನ ಪತ್ರ ಬಂದಿದ್ದರೆ ತಪ್ಪದೆ ತಂಗಿಗೆ ಓದಿ ಹೇಳುತ್ತಿದ್ದ. ಕಾಶೀಮನನ್ನು ಫಾತೂ ಎಂದೂ ಮುಂದುವರೆದು ಮಾತನಾಡಿಸುತ್ತಿರಲಿಲ್ಲ. ಕಾಶೀಮನು ನಿಷ್ಠುರವಾದಿ ಎಂದು ಅವಳಿಗೆ ಚೆನ್ನಾಗಿ ಗೊತ್ತು. ಎರಡು ಮೂರು ಸಲ ಹೊರಗೆ ಸುಳಿದುಹೋದಳೇ ಏನಾ, ಅವನನ್ನು ಎಬ್ಬಿಸುವ ಧೈರ್ಯ ಮಾಡಲಿಲ್ಲ. ಗಿಡದ ಮೇಲೆ ಕಾಗೆಗಳ ಕರ್ಕಶ ಸ್ವರ ಪ್ರಾರಂಭವಾಯಿತು. ಫಾತೂ 'ಹುಶ್ಯಾ-ಹುಶ್ಯಾ' ಎಂದಳು. ಕಾಶೀಮ ಸಾವರಿಸಿಕೊಂಡು ಎದ್ದು ಕುಳಿತು "ಅರೇ ಅಲ್ಲಾ! ಜೀವ ಬ್ಯಾಸರಾತು!" ಎಂದು ನಿಟ್ಟುಸಿರು ಬಿಟ್ಟು, ಗಡ್ಡದ ಮೇಲೆ ಕೈಯಾಡಿಸುತ್ತ ಗಿಡದ ಬೊಡ್ಡೆಗೆ ಆತು ಕುಳಿತುಕೊಂಡ. ಫಾತೂ "ಯಣ್ಣಾ ಜಡ್ಡು ಆಗೇತೇ?" ಎಂದು ಅಣ್ಣನ ಮೈ ಮುಟ್ಟಿ ನೋಡಿದಳು. ಮೈ ತುಂಬಾ ಕಾಯ್ದಿತ್ತು. ಫಾತೂ ತುಂಬಾ ಗಾಬರಿಯಾಗಿ "ನಿನ್ನ ಮಗ್ಗ ಪತ್ರಾ ಬರಸತೇನಿ" ಎಂದಳು ಕಳವಳದಿಂದ. ಕಾಶೀಮ ಬೇವಿನ ಮರವನ್ನು ಒಮ್ಮೆ ನೋಡಿ "ಈ ಗಿಡ ನಾ ಹಚ್ಚೇನಿ. ನನಗ ನೆಳ್ಳ ಕೊಟ್ಟೇತಿ ಸಾಕು!" ಎಂದು ಅರ್ಥಪೂರ್ಣವಾಗಿ ನುಡಿದ. 'ಮಗನನ್ನು ಕರೆಯಿಸುವೆನೆನ್ನುವುದಕ್ಕೂ ಗಿಡದ ನೆರಳಿಗೂ ಯಾವ ಅರ್ಥ?' ಎಂದುಕೊಂಡಳು ಫಾತು. ಕಾಶೀಮ ಕೆಮ್ಮುತ್ತ ನುಡಿದ: "ನಾ ಇವತ್ತ ಕಚೇರಿಗೆ ಹೋಗೂದಿಲ್ಲ. ಸೀಕ್ ಅಂತ ಚೀಟೀ ಬರೀತೇನಿ— ಫಕ್ರಾಸಿ ದಾದೂನ ಕೈಯಾಗ ಕೊಡು!" ಕಾಶೀಮ ಕೈ ನಡುಗಿಸುತ್ತ ಚೀಟಿ ಬರೆಯ ಹತ್ತಿದ. "ಯಣ್ಣಾ ಹುಸೇನಿಗೂ ಬರಿ- ಪತ್ರಾ" ಎಂದಳಾಕೆ. "ಭೀ- ಭೀ" ಎಂದು ಕಾಶೀಮು ಮತ್ತೆ ಹಾಸಿಗೆಯ ಮೇಲೆ ಹೊರಳಿಕೊಂಡ.

"ಒಬ್ಬನಽ ಮಗಾ– ದೊಡ್ಡ ಕೆಲಸಾ ನೂಡ್ಲಾಕಹತ್ತಿ ಹತ್ತುವರಸ ಆತು! ನಾ ಕಚೇರೀ ಸಿಪಾಯಿಕೇ ಬಿಡಬೇಕಂತ– ನಿನ್ನೆ ಪತ್ರಾ ಬರದಾನ!"

"ಮುಪ್ಪು ಬಂತು, ಮಗ ಬಿಡು ಅಂತಾನ; ಬಿಡಲಾ!" ಎಂದಳು ಫಾತೂ ಅವಸರದಿಂದ!

"ಅಂವಾ ಮಾಮಲೇದಾರ. ನಾನು ಛಪ್ರಾಸಿ. ತಂದಿ-ಮಗ ಅಲ್ಲ;" ಫಾತೂಗ ಇವರ ನಡುವಿನ ಅಂತರ ತಿಳಿಯಲಿಲ್ಲ. ಎಷ್ಟೆಂದರೂ ಹಳ್ಳಿಯ ಮುಗ್ಧ ಹೆಣ್ಣು ಅವಳು! ಮೂಗಿನ ಬುಲಾಕು ಅದಿರುವಂತೆ ಮೂಗು ಹೊರಳಿಸಿ, "ನೀ ತಂದಿ-ಅಂವ ಮಗಾ" ಎಂದು ತೀರ್ಪು ಕೊಟ್ಟಳು. ಕಾಶೀಮು ಅವಳ ಮಾತು ಕೇಳುವ ಸ್ಥಿತಿಯಲ್ಲಿದ್ದಿಲ್ಲ. ಯಾವುದೋ ವಿಚಾರದ ಆಳದಲ್ಲಿ ಮುಳುಗಿತ್ತು ಅವನ ಮನಸ್ಸು. ಮುಂಜಾವಿನಿಂದ ಸಂಜೆಯವರೆಗೆ ಯತ್ನಮಾಡಿ ಬರಿಗೈಯಿಂದ ಮರಳುವ ಮೀನುಗಾರನಂತೆ– ಮತ್ತೆ ಹೊರಬಂದಿತು ಅವನ ಪ್ರಜ್ಞೆ. "ಹಾಂ– ಏನಂದಿ, ಫಾತೂ?" ಎಂದ.

"ಚಹಾ ಕುಡೀತೀಯಾ ಕಾಶೀಮಸಾಬ್" ಫಾತೂ ಕೇಳಿದಳು. ಕಾಶೀಮು ನಿತ್ಯ ಮುಂಜಾವಿನಲ್ಲಿ ಚಹ ಕುಡಿಯುತ್ತಿದ್ದ. ಅಣ್ಣು ಉತ್ತರ ಕೊಡದಿದ್ದರೂ ಫಾತೀಮಾ ಒಳಗೆ ಹೋದಳು— ಚಹ ತರುವುದಕ್ಕಾಗಿ. ಕಾಶೀಮು ಕಣ್ಣೆತ್ತಿ ಬೇವಿನ ಮರವನ್ನು ನೋಡಿದ. ಅದು ತುಂಬಾ ಹೂಬಿಟ್ಟು ಹಳ್ಳಿಯ ಸುಂದರಿಯಂತೆ ಲೋಭಿಸುತ್ತಿತ್ತು. ಕಾಶೀಮು ಕಣ್ಣು ಮುಚ್ಚಿದ. ಇಪ್ಪತ್ತೈದು ವರುಷಗಳ ಹಿಂದೆ ಗತಿಸಿಹೋದ ತನ್ನ ಹೆಂಡತಿಯನ್ನು ಪುನಃ ಅವನಿಗೆ ಕಂಡಂತಾಯಿತು. ತನ್ನ ಹೆಂಡತಿ ಸತ್ತ ದಿನವೇ— ತಾನು ಬೇವಿನ ಗಿಡ ನೆಟ್ಟಿದ್ದು ಅವನಿಗೆ ನೆನಪಾಯಿತು. ತನ್ನ ಬೀಬಿ ಈ ಗಿಡದ ರೂಪದಲ್ಲಿ ನಿಂತಿರುವಳೇನೋ— ಎಂದೆನಿಸಿತು ಕಾಶೀಮನಿಗೆ! ಅದೆಂಥ ದುರ್ದಿನ? ಮಗು ಒಂದನ್ನೇ ಬಿಟ್ಟು ಅವಳು ಹೋದಾಗ ತನಗೆ ಪರಿತಾಪ ಹೇಗಾಯಿತೆಂದು ನೆನೆಸಿಕೊಂಡ. ಪಾಪ, ಅವನ ಬೈ ನಡುಗಿತು! ಫಾತೂ ಚಹ ತಂದಿಟ್ಟು "ಯಣ್ಣಾ" ಎಂದಳು. ಕಾಶೀಮು ಅಳಹತ್ತಿದ. ಫಾತೂ ಕೂಡ ಕಣ್ಣೊರಸಿಕೊಂಡಳು.

"ಅಣ್ಣಾ, ನಿನ್ನ ಮಗನ್ನ ಕರಸತೇನಿ; ನೀನು ಬಹಳ ಹಟಮಾರಿ!"

"ನೀನು ಹುಚ್ಚಿ!"

"ನೀನು?" ಎಂದು ಫಾತೂ ಪ್ರತಿಯಾಡಿದಳು. ಕಾಶೀಮನಿಗೆ ಇಷ್ಟು ನಿಷ್ಠುರ ಉತ್ತರ ಇಂದೇ ಅವಳಿಂದ ಬಂದುದು!

"ನಾನು ನೌಕರೀ ಬಿಡಬೇಕಂತೆ— ಅಂವಾ ಈ ಊರಿಗೆ ಮಾಮಲೇದಾರನಾಗಿ ಬಂದಾನಂತಽ" ಕಾಶೀಮು ವಿಚಿತ್ರವಾಗಿ ಕಣ್ಣುಗುಡ್ಡೆಗಳನ್ನು ಹೊರಳಿಸಿ ಬೇವಿನಮರ ನೋಡಿದ!

"ಮಗಾ ಮಾಮಲೇದಾರ— ನಿನಗೇನು ಕಡಿಮಿ?"

"ಅದಕ್ಯಽಽ ನಿನಗ ಹುಚ್ಚು ಅಂದದ್ದು ನಾ."

"....." ಫಾತೂ ಗೊಂಬೆಯಂತೆ ನಿಂತಿದ್ದಳು.

"ಅಪ್ಪ ಚಪರಾಸಿ; ಅದಕ್ಕ ಅವನ ಮಾನಹೋಗತೈತಂತ!"

"ನೀನು ಯಾಕ ಹಟಮಾಡತಿ?"

"ನಿನ್ನೇ ಈ ಊರಿಗೆ ಬಂದಾನ; ಊರ ಹೊರಗಿನ ಬಂಗ್ಲೇನಾ ಇಳಕೊಂಡಾನ! ಮನಿಗೆ ಯಾಕ ಬರಬಾರದು? ಅವನ ಮಾನ ಸಾಲಲಿಲ್ಲ.... ನಾ ಸೀಪಾಯಿ!"

"ನಾ ಹೋಗಿ ಅವನ್ನ ಕರಕೊಂಡು ಬರತೇನಿ ಮನಿಗೆ."

"ಏ ಫಾತೂ, ನಿನಗ ತಲೀಕೆಟ್ಟೈತಿ; ಅಂವ ಮಾತಾಡಸ್ಯಾನನ"

"ಯಣ್ಣಾ, ಹುಸೇನಿ ಅಂಥಾ ಹುಡುಗಲ್ಲಾ" ಎಂದಳು ಫಾತೂ.

"ಅಂವಗ ಕೆಲಸಾಗಿ ಹತ್ತುವರಸಾತು. ವರಸಾ ಒಮ್ಮೆ ಬಂ ನಾಕುದಿನಾ ಇದ್ದು ಹೋಗ್ತಿದ್ದ. ಈಗ ಇದಽ ಊರಿಗೆ ಬಂದಽ ಬಂಗ್ಲೇದಾಗ ಇಳವಾನ?"

"ಅವನ ಮರ್ಯಾದಿ ಹೋಕ್ಕೈತೇನು ಮನಿಗೆ ಬಂದರ?" ಎಂ ಫಾತೂ ಸೆರಗು ಸರಿಮಾಡಿಕೊಂಡಳು. ಬಿಸಿಲು ಬಲಿತಿತ್ತು. ಕಾಶೀಮನ ಮೋರೆಯ ಮೇಲೆ ಬಿಸಿಲು ಬಿದ್ದಿತು. ಫಾತೂ ತಽ ಕೈಹಿಡಿದು ಒಳಗೆ ಕರೆದುಕೊಂಡು ಹೋದಳು.

* * * *

ಅಂದು ಸಾಯಂಕಾಲ ಆರುಗಂಟೆಗೆ ದಾದೂ ಚಪರಾಸಿ ಮನೆ ಬಂದಾಗ, ಕಾಶೀಮನಿಗೆ ಎಚ್ಚರವೇ ತಪ್ಪಿದಂತಾಗಿತ್ತು. ಒಮ್ಮೊಮ್ಮೆ "ನಾ..... ನೀ ಸತ್ತಮ್ಯಾಗ ಇಂವನ್ನ ಜ್ಞಾಪಕಾನ ಮಾಡಿದೆ. ಎಂದು ಗೊಣಗುತ್ತ ಹೊರಳಾಡುತ್ತಿದ್ದ. ಫಾತೀಮಾ ಗಬ್ಬದ ಮೇಲೆ ಕೈ ಇಟ್ಟುಕೊಂಡು ಸುಮ್ಮನೆ ಕುಳಿತಿದ್ದಳು. ದಾದೂ ನುಡಿದ:

"ಯಕ್ಕಾ— ಕಾಶೀಮಸಾಬಗ ಪಿತ್ತಾ ಗೇತಿ. ಹೊರಳಾಡ್ಲಾಕ ಹತ್ಯಾನು."

"ಕಾಶೀಮಸಾಬನ ಚೀಟೀ ಕೊಟ್ಟಲ್ಲೊ?"

"ಚೀಟೀ ನೋಡಿ ಸಾಹೇಬರು ಸಣ್ಣಮಾರಿ ಮಾಡಿಕೊಂಡ ಕುಂತರು."

"ನೀ....ಜಡ್ಡಾಗೇತಿ– ಕಾಶೀಮಸಾಬಗ ಅಂತ ಹೇಳಿದೇನು?"

"ಯಪ್ಪಾ, ಅವರ ಮುಂದ ಮಾತಾಡ್ಲಾಕ ಅಂಜಿಕಿ ಬರತೈತಿ."

"ಹುಸೇನಿ ಅಷ್ಟು ಸಿಟ್ಟೈನಾವ ಆಗ್ಯಾನs?"

"ನಮಗs ಅಂಜಿಕಿ ಬರತೈತಿ, ದೊಡ್ಡವರ ಸಂಗತಿ!"

"ಹಾಂಗಾರ ನಾನs ಹೊಕ್ಕೇನಿ;—ಹುಸೇನಿ ನನಗ ದೊಡ್ಡಮ ಏನು?"

"ಬ್ಯಾಡ.... ಯಕ್ಕಾ, ನಾ ಎಲ್ಲಾ ಇವತ್ತ ರಾತ್ರಿ ಅಪ್ಪನs ಮುಂದ ಹೇಳತೇನಿ!" 'ಅಪ್ಪನಾರ ಮುಂದ ಹೇಳತೇನಿ' ಎಂ ನುಡಿ ಕೇಳಿದೊಡನೆ ಫಾತೂನ ಮೋರೆ ಸಿಟ್ಟಿನಿಂದ ಕೆಂಪಗಾಯಿತ ಕಣ್ಣು ಮಿಂಚಿದುವು. ಅವಳು ಸುಮ್ಮನೆ ಪುರುಪುರನೆ ಗೋ ನೋಡುತ್ತಾ ಕುಳಿತುಕೊಂಡಳು. ದಾದೂ ಗೋಡೆಗೆ ಒ ಕುಳಿತುಕೊಂಡ.

"ಅರೇ ಅಲ್ಲಾ....ನನ್ನ ಒಯ್ಯಿ" ಕಾಶೀಮು ಕಣ್ಣರೆದ! ಫಾತೂ ಟ್ಟ ಮಾಡುವುದಕ್ಕೆ ಒಳಗೆ ಹೋದಳು. ಒಲೆಯ ಮುಂದೆ ಗೆ ಕಾರುವ ಚಿಮಣೀ ಇಟ್ಟಳು. ಅವಳ ಬುಲಾಕನ ಕೆಂಪು ನು ಹೇಗೋ ಹೊಳೆಯುತ್ತಿತ್ತು! ದಾದೂ ನಾಳೆ ಸುತ್ತೆ ಬರುವು- ಗ ಪೇಳಿ ಮನೆಗೆ ಹೊರಟುಹೋದ. ಕಾಶೀಮನು ಸುತ್ತೆ ಷ್ಟುವಿಚಾರದ ಕುದುರೆ ಏರಿದ! ಫಾತೂ 'ಪಟ ಪಟ' ರೊಟ್ಟಿ ಯಪತ್ತಿದಳು. ಅವಳಿಗೆ ಏನೋ ಒಂದು ವಿಧದ ನೋವು! ಪ್ರೀ ಮಗನ ನಡುವೆ— ಅಧಿಕಾರ, ಮಾನ, ಮರ್ಯಾದೆ— ಳಿತು—ಒಂದು ದೊಡ್ಡ ಅತಂಕವನ್ನೇ ಮಾಡಿದ್ದುವು. ಇದರಲ್ಲಿ ೀಲು ಗೆಲವು ಯಾರಿಗೊ? ಹೊರಗೆ ಅಂಗಣದಲ್ಲಿ ಕಟ್ಟಿದ ೀಕೆಗಳು ಹಸಿದು, ಹುಲ್ಲಿಗಾಗಿ "ಬ್ಯಾ—ಬ್ಯಾ—" ಎಂದು ಪ ಹತ್ತಲು—ಕಾಶೀಮು ತತ್ತರಿಸುತ್ತ ಎದ್ದು, ಅವುಗಳಿಗೆ ಹುಲ್ಲು ಸಿ, ಆಯಾಸದಿಂದ "ಅರೇ ಅಲ್ಲಾ" ಎಂದು ಕೂಗಿದ! ಜ್ವರದ ನಳ ಹೆಚ್ಚಾಗಿತ್ತು. ಸಂಕಟಪಡುತ್ತ ಹೊರಗೆ ಬಂದು ತಾನು ದಿನ ಮಲಗುವ ಗಿಡದ ಕೆಳಗೆ ಬಿದ್ದುಕೊಂಡ. ಫಾತೂ ಹೊರಗೆ ಬ್ದವನ್ನು ಕೇಳಿ ಓಡಿ ಬಂದಳು. ಕಾಶೀಮು ಗಿಡದಡಿಯಲ್ಲಿ ಪ್ಪೆಯಾಗಿ ಬಿದ್ದದ್ದು ಕಂದು "ಯಂಣ್ಣಾ, ಹಿಂಗ್ಯಾಕ ಮಾಡ್ಲಾಕ ತ್ತೀದಿ? ತಂಪು! ಒಳಗ ನಡಿ." ಎಂದಳು. ಕಾಶೀಮು ಒಲ್ಲೆನೆಂದು ಜಿತ್ರವಾಗಿ ಗೋಣು ಹೊರಳಿಸಿದ. ಎಷ್ಟೆಂದರೂ ಫಾತೂ ಹೆಣ್ಣು; ಳಗಳ ಅಳುವುದಕ್ಕೆ ಸುರು ಮಾಡಿದಳು. ಕಾಶೀಮು ಧಿಗ್ಗನೆ ಮ್ಮೆಕುಳಿತು "ನೀ ಅಳಬ್ಯಾಡ ಫಾತೂ—! ನನ್ನ ಮಗ ಮಾಮುಲೇದಾರ. ನಾ ಸತ್ತರ ಅಂವಾ ನಿನ್ನ ಜ್ಞಾವಾನ ಮಾಡತಾನ!" ಮು ವಿಕಟವಾಗಿ ನಕ್ಕು. ಫಾತೂ "ಯಣ್ಣಾ ಒಳಗ ನಡಿ, ತಂಡಿ ಗ" ಎಂದಳು. ಕಾಶೀಮು, ತಾನು ನೆಟ್ಟಗಿಡವೇ ತನಗೆ ಆಶ್ರಯ- ಬ ಭಾವ ಬೀರಿ, ತಾನು ಅಲ್ಲಿಯೇ ಮಲಗುವುದಾಗಿ ಹೇಳಿದ. ತೂ ಅಲ್ಲಿಯೇ ಹಾಸಿಗೆ ಬಿಚ್ಚಿಕೊಟ್ಟಳು.

ಫಾತೀಮಾ ಅಣ್ಣನ ಸ್ವಭಾವ ಪೂರ್ಣ ಬಲ್ಲಳು. ಅವನು ಜ್ಞಾವಾಗಲೆಲ್ಲ ಹೀಗೆಯೇ ಹಟಮಾಡುತ್ತಿದ್ದ. ಕಾಶೀಮ ನಿಶ್ಚೆ ೀದನೆಂದು ಬಗೆದು ಅವಳು ಒಳಗೆ ಹೋದಳು. ರಾತ್ರಿ ಸಾಕ- ಗಿತ್ತು. ಮನೆಯೊಳಗಿನ ಇಲಿಗಳೆಲ್ಲ ಗದ್ದಲಹಾಕುತ್ತಿದ್ದುವು. ತೂ ತನ್ನ ಹಾಸಿಗೆ ಹಾಸಿ ಮಲಗಿಕೊಂಡಳು. ಮುಂಜಾವಿನಿಂದ ಸಿಯ ವರೆಗೆ ದುಡಿದು ದಣಿದ ದೇಹಕ್ಕೆ ಹಾಸಿಗೆಯ ಆಸರ ಕ್ಕುವೆ—ನಿದ್ದೆ ಬಾರದೇನು ಮಾಡೀತು? ಅವಳಿಗೆ ಗಾಢನಿದ್ದೆ ತ್ತಿತು. ಕಾಶೀಮು ಮಾತ್ರ ದಮ್ಮಿನಿಂದ ಬಳಲುತ್ತಿದ್ದ. ಅವನಿಗೆ ಸಹನೀಯ ವೇದನೆಯಾಗಹತ್ತಿತು. ಮಗ ಊರಿಗೆ ಬಂದರೂ, ನೆದೆ ಬಾರದೆ ಊರಹೊರಗಿನ ಪ್ರವಾಸಿಗರ ಬಂಗ್ಲೆಯಲ್ಲಿ ಇಳಿದು- ಳ್ಳಬೇಕೆ? ಹುಸೇನಿಯ ಮನಸ್ಸನ್ನು ಅವನು ತಿಳಿಯ. ಹುಸೇನಿ ಾವರೋ ಬೇರೊಂದು ದೊಡ್ಡಮನೆ ಹಿಡಿದು, ತಂದೆಯನ್ನು ಯಿಸುವ ವಿಚಾರ ಮಾಡಿದ್ದ! ಕಾಶೀಮು ಹುಚ್ಚುಕಲ್ಪನೆಯ ನ್ನು ಹಿಡಿದು— ತಲೆಕೆಡಿಸಿಕೊಂಡ!

ವೈಶಾಖ ಮಾಸದ ಆಕಾಶ ಶುಭ್ರವಾಗಿತ್ತು. ಚುಕ್ಕಿಗಳು ಯಾರ ಕಿವಿಗಳಿಗೂ ಕೇಳದ - ಆದರೆ ಹೃದಯಕ್ಕೆ ಮಾತ್ರ ಮುಟ್ಟುವ ಗೀತ- ಗಳನ್ನು ಹೇಳುತ್ತಲಿದ್ದುವು! ಚಂದಿರನೂ ಬಾನಂಗಣದಲ್ಲಿ ಬೆಳಗು- ತ್ತಿದ್ದ. ಗಾಳಿಯಂತೂ ಕಲ್ಲಾಗಿತ್ತು. ದೂರದಲ್ಲಿ ಗಿಡಗಳು ಯೋಗಿ- ಗಳಂತೆ ಧ್ಯಾನಮಗ್ನವಾಗಿದ್ದುವು. ಕಾಶೀಮ ಕಣ್ಣು ತೆರೆದಾಗ— ಅತ ನೆಟ್ಟ ಬೇವಿನ ಮರದ ಎಲೆಗಳೊಳಗಿಂದ ಬೆಳುದಿಂಗಳು ಸೂಸು- ತ್ತಿತ್ತು! ಅದು ಎಂಥ ಚೆಲುವು? ಅದು ಅವನಿಗೆ ಹೂಬಾಣ ಹಚ್ಚಿದ ಹಾಗೆ ಕಂಡಿತು! ಕಾಶೀಮು ತನ್ನ ಹಿಂದಿನ ಬಾಳನ್ನು ನೆನಸಿಕೊಂಡ. ಬೀಬಿಯನ್ನು ಮದುವೆಯಾದ ದಿನ ಅವನಿಗೆ ನೆನಪಾಯಿತು! ಅಂದು ಅವನು ಕುದುರೆಯನ್ನೇರಿ, ಮುಖದ ಮೇಲೆ ಮಲ್ಲಿಗೆಯ ಹೂವಿನ ಬಾಸಿಂಗವನ್ನು ಕಟ್ಟಕೊಂಡಿದ್ದ! ಬೀಬಿಯನ್ನು ಮೊದಲು ಕಂಡಾಗ ಅವನಿಗೆ ಹೇಳಲಾರದ ಆನಂದವಾಗಿತ್ತು. ಗುಲಾಬಿಯ ವರ್ಣದ ಮುಖದಲ್ಲಿ-ಮೀನದಂತೆ ಹೊರಳಾಡುವ-ಬೀಬಿಯ ಕಣ್ಣುಗಳು ಅವನ ಹೃದಯವನ್ನು ಸೆರೆಹಿಡಿದಿದ್ದುವು! ಪಾಪ! ಮಗ ಹುಟ್ಟಿದ ಮೂರು ವರುಷಗಳಲ್ಲಿಯೇ ಆಕೆ ಕೈ ಬಿಟ್ಟು ಹೋಗುವುದೆಂದರೇನು? ಕಾಶೀಮು- ಇನ್ನೊಂದು ಮದುವೆಯಾಗಲೆಂದು ಎಷ್ಟು ಜನ ಪೇಳಿದರು! ಕಾಶೀಮನಿಗೆ ತನ್ನ ಚಿಕ್ಕ ಅನಾಥ ಮಗುವಿನ ಮುಂದೆ- ಮದುವೆ ಹೀನವಾಗಿ ಕಂಡಿತು. ಅದಕ್ಕಾಗಿಯೇ ತಂಗಿ ಫಾತೂನನ್ನು ಕರೆದು ತಂದು, ಮಗುವನ್ನು ಅವಳಿಗೆ ಒಪ್ಪಿಸಿದ! ಅಂದಿನಿಂದ ಅವನು ಮಗನ ಯೋಗಕ್ಷೇಮದಲ್ಲಿಯೇ ಕಾಲಕಳೆಯುತ್ತಿದ್ದ; ಅವನನ್ನು ದೊಡ್ಡವನನ್ನಾಗಿ ಮಾಡಿದ. ತಾನು ತಾ ಲೂ ಕು ಕಚೇರಿಯಲ್ಲಿ ಚಪರಾಸಿಯಾದರೂ, ಮಗ ಹುಸೇನಿಗೆ ಅದೇ ಊರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಾಗುವವರೆಗೆ ಓದಿಸಿದ. ಹುಸೇನಿಯೂ 'ಹುಷಾರ್' ಹುಡುಗನೆಂದು ಹೆಸರಾಗಿದ್ದ. ಕುಳಿತ ವರುಷವೇ ಮ್ಯಾಟ್ರಿಕ್ ಪಾಸಾಗಿ ತಂದೆಗೆ ಆನಂದವನ್ನುಂಟುಮಾಡಿದ.

ಕಾಶೀಮನು ಹುಸೇನಿಯನ್ನು ಕರೆದುಕೊಂಡು ಮಾಮುಲೇದಾರ ಮನೆಗೆ ಬಂದಾಗ— ಮಾಮುಲೇದಾರರು ಸುಖಾಸೀನರಾಗಿ, ಮುಕ್ಕು- ಕೊಡನೆ ಹರಟುತ್ತಿದ್ದರು. ಹತ್ತಿರವೇ ಅವರ ಪತ್ನಿ ನಗುತ್ತ ನಿಂತು

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮುಪ್ತ್ ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೪-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ :—
ಗಣೇಶ ರಾಮಂಚೆಂದ್ರ ಕರ್ಕಿ ಮುಪ್ತ್ ಕಂಪನಿ
ಗಿರಗಾಂವ, ಮುಂಬಯಿ ೪

ತೋರಿಸಿದ್ದರು. ಕಾಶೀಮು ಬಾಗಿಲಿಗೆ ಬಂದು "ಸಲಾಮ್ ರಾವ್-ಸಾಬ್!" ಎಂದು ಮಗನನ್ನು ಅವರ ಮುಂದೆ ನಿಲ್ಲಿಸಿ "ಗರೀಬನ ನುಗ ವಾಸ್ ಆಗ್ಯಾನು" ಎಂದು ನಿಂತುಕೊಂಡ. ಹುಸೇನಿಗೆ ಮಾತ್ರ ಇದು ಅಸಹ್ಯನೆನಿಸಿತು. ತನ್ನ ತರಗತಿಯಲ್ಲಿಯೇ- ಓದು ತ್ತಿದ್ದ ರಾಮೂ— ಮಾಮುಲೇದಾರರ ಮಗ ಅಲ್ಲಿಯೇ ನಿಂತುಕೊಂಡಿದ್ದ. ಮಾಮುಲೇದಾರರು ಕಣ್ಣು ಹೊರಳಿಸಿ "ಹುಡುಗ ಹುಷಾರಿದ್ದಾನ ಚಪರಾಸಿ!" ಎಂದು ತನ್ನ ಅಧಿಕಾರದ ದರ್ಪವಲ್ಲಿಯೇ ನುಡಿದರು. ಹೆಣ್ಣಿನ ಹೃದಯ ಎಷ್ಟೆಂದರೂ ಮೃದುವಲ್ಲವೆ? ಮಾಮುಲೇದಾರರ ನುಡಿದ ಕುಸುಮಾಬಾಯಿ ನುಡಿದರು: "ನಮ್ಮ ರಾಮೂ ಕಾಲೇಜಕ್ಕ ಹೋಗತಾನ— ಹುಸೇನಿನ್ನೂ ಕಳಿಸು— ಕಾಶೀಮಸಾಬಾ"

"ತಾಯಿ, ನಾವು ಗರೀಬರು....ದುಡ್ಡು ಬೇಕಲ್ಲರಿ"

"ಛೀ ಹುಚ್ಚಾ....ಹುಸೇನಿ ಜಾಣ ಇದ್ದಾನ" ಕುಸುಮಾಬಾಯಿ ನುಡಿದರು.

"ರಾವ್ ಸಾಹೇಬ್.... ದಯಮಾಡ್ರಿ.... ಹುಸೇನಿಗೆ ಒಂದು ಕಾರಕೂನಿಕಿ ಜಾಗಾ ಕೊಡ್ರಿ!"

ಮಾಮಲೇದಾರರು ತಮ್ಮ ಬಾಯಿಂದ ಸಿಗರೆಟಿನ ಹೊಗೆ ಬಿಡುತ್ತ "ಅರ್ಜೀ ಮಾಡಿಸು ನೋಡೋಣ" ಎಂದರು.

'ಬಗನ' ಬಾಲಾಮೃತ

ಮುಳ್ಳಿನ ಸಕ್ಕರೆಯಂತಿರುವ ಮಕ್ಕಳ ಯಾವುದೇ ಮುಖ್ಯ ಹೊಟ್ಟೆ

ಮುಖ್ಯವಾದ ಮಕ್ಕಳ ಯಾವುದೇ ಮುಖ್ಯ ಹೊಟ್ಟೆ

ಸಕ್ಕರೆಯಂತಿರುವ ಮಕ್ಕಳ ಹೊಟ್ಟೆ ಮುಖ್ಯವಾದ ಯಾವುದೇ ಮಕ್ಕಳ ಹೊಟ್ಟೆ

ಮಕ್ಕಳ ಸಕ್ಕರೆಯಂತಿರುವ

ನ್ನಬಿಟ್ಟಿದ್ದ. ಮಾಮಲೇದಾರ ಸಾಹೇಬರು ಊರಲ್ಲಿ ಹೊರಟರೆ ಸರಾಸಿ ಮುಂದೆ ಮುಂದೆ ಹೊರಟಿರಬೇಕು! ಕಾಶೀಮ ನೌಕರಿಯಲ್ಲಿ ಉಳಿದರೆ, ಮಗನ ಮುಂದೆ ಪಟ್ಟಾಹಾಕಿಕೊಂಡು ಹೋಗಬೇಕೆ? ಪೆಂಥ ಪರಿಸ್ಥಿತಿ! ಅದಕ್ಕಾಗಿಯೇ ಹುಸೇನಿ ತಂದೆಗೆ ಕೆಲಸ ಬಿಡುವುದಕ್ಕೆ ಪತ್ರ ಬರೆದಿದ್ದ. ಹುಸೇನಿ ತಂದೆಯ ಪಟಮಾರಿತನವನ್ನು ಚೆನ್ನಾಗಿ ಬಲ್ಲ. ಅದೆಷ್ಟೋ ಸಲ ತಂದೆಗೆ ನೌಕರಿ ಬಿಟ್ಟು—ತನ್ನ ಹತ್ತಿರವೇ ಇರುವುದಕ್ಕೆ ಪ್ರಯತ್ನಿಸಿದ್ದ! ಆದರೆ ಕಾಶೀಮ ಉಳಿಮುಟ್ಟದಿದ್ದ ಶಿಲೆಯಂತೆ ಒರಟನಾಗಿಯೇ ನಿಂತುಕೊಂಡಿದ್ದ. ಅವನಿಗೆ ಇರುವ ಸ್ವಾಭಿಮಾನವು ಹೇಳತೀರದು. ಹುಸೇನಿಯು ದುರಭಿಮಾನಿಯೆಂದು ಎಷ್ಟೋಸಲ ತಂಗಿಯ ಮುಂದೆ ಮರುಗಾಡಿದ್ದ. ಹುಸೇನಿ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ—ಕಾಶೀಮ ಮಗನನ್ನು ಕಾಣುವುದಕ್ಕಾಗಿ ಒಮ್ಮೆ ಹೋಗಿದ್ದ, ಮಗನಿಗೆ ಕಾಣುವುದಕ್ಕೆಂದು ಬುತ್ತಿಕಟ್ಟಿಕೊಂಡು– ಹುಸೇನಿಯಿರುವ ಹಾಸ್ಟೇಲ ಹುಡುಕುತ್ತ ಗೇಟಿನ ಹತ್ತಿರ ನಿಂತುಕೊಂಡಾಗ— ಹಾಸ್ಟೇಲಿನ ಯಾರೋ ಅವನನ್ನು ಹುಸೇನಿಯ ಕೋಣೆಗೆ ಕರೆತಂದು ಹೇಳಿದ: "ಯಾರೋ ಬಂದಾರ ನಿಮ್ಮೂರವರು" ಎಂದ. ಕೋಣೆಯ ಬಾಗಿಲನ್ನು ತೆರೆಯುವ ಮೊದಲೇ ಕಾಶೀಮ "ಹುಸೇನಿ ಹುಸೇನಿ" ಎಂದು ಕೂಗಿದ. ಹುಸೇನಿಯು ತಂದೆಯ ಧ್ವನಿ ಕೇಳಿ ಬಾಗಿಲ ತೆಗೆದು, ಮೋರೆ ಸಣ್ಣದು ಮಾಡಿದ. ಅವನಿಗೆ ಅವನ ನೇಷಭೂಷಣ ಹಿಡಿಸಿಸಲಿಲ್ಲ. ಸುತ್ತಲೂ ಸಿರಿವಂತರ ಮಕ್ಕಳು ನಿಂತಿದ್ದರು. ಅದಕ್ಕಾಗಿಯೇ ತಂದೆಯ ಸಂಗಡ ಹೆಚ್ಚು ಮಾತನಾಡದೆ–ಅವನನ್ನು ಕರೆದುಕೊಂಡು ಹೊರಗೆ ಹೊರಟೇಬಿಟ್ಟ. ಇದು ಕಾಶೀಮನಿಗೆ ತಿಳಿಯಲಿಲ್ಲ! ಮಗನಿಗೆ ಹೇಳುವ ನಾಲ್ಕು ಮಾತು ಹೇಳಿ—ಅಂದೇ ಊರಿಗೆ ಮರಳಿದ. ಕಾಶೀಮನು ರಾತ್ರಿಯ ಗಾಡಿಯಿಂದ ಮನೆಗೆ ಬಂದಾಗ, ಫಾತೂ ಕಟ್ಟೆಯಮೇಲೆ ಕುಳಿತುಕೊಂಡಿದ್ದಳು. ಅವಳು ಅಣ್ಣನನ್ನು ಕಂಡು "ಯಾಕ ಕಾಶೀಮಸಾಬಾ—ಇವತ್ತs ಬಂದಿ?" ಎಂದಳು. ಕಾಶೀಮ ಗೊಗ್ಗರದನಿಯಿಂದ "ನಮ್ಮ ಕೆಲಸರ ಏನು ಚರಿತಾಪಡಾಗs"

"ಹುಸೇನಿ ಬೇಸಿ ಅದಾನ?"

"ಇರವ ಏನ ಮಾಡತಾನು?"

"ಎರಡು ದಿವಸ ಇದ್ದು ಬರಬೇಕಾಗಿತ್ತು ಧಾರವಾಡದಾಗ?"

"ನಾವು ಹುಚ್ಚರು—ಹುಸೇನಿಗೆ ಸೊಕ್ಕು ಬಂದೈತಿ"

"ಇರಲಿ ಬಿಡೋ, ಕಾಶೀಮಸಾಬಾ—ನಿಂದು ಇಂಥಾ ಮಾತs!"

"ತಂಗೀ ನಾ ಏನ ಹೇಳ್ಲಿ— ಬಂವ, ನಮಗ ಮುಂದ ಮಾನಾ ಇಡೂದಿಲ್ಲ!"

"ಇಲ್ಲದ್ದೊಂದು ಮಾತು ನಿನ್ನದು. ಹುಡುಗರ ಮಾತಿಗೆ ನೀ ಹ್ಯಾಗಬಾರದು" ಫಾತೂ ಏನೋ ಹೇಳಿಯೇ ಹೇಳಿದಳು. ಕಾಶೀಮ ಒಂದಕ್ಕೂ ಉತ್ತರ ಕೊಡಲಿಲ್ಲ. ರಾತ್ರಿ ಬಹಳವಾಗಿತ್ತು ಕಾಶೀಮ ಹಾಸಿಗೆ ಬಿಟ್ಟು ಗಿಡದಡಿಯಲ್ಲಿ ಮಲಗಿಕೊಂಡ. ಆ ಹಿಂದಿನ ಸಂಗತಿಯೂ ಕಾಶೀಮನಿಗೆ ಈಗ ಚುಚ್ಚಹತ್ತಿತು! ತಾನು ಇನ್ನು ಜೀವಿಸಬಾರದೆಂದೆನಿಸಿತು.

ಬೆಳಗಿನ ತಂಗಾಳಿ ಸುಳಿದೊಡನೆ, ವಿಚಾರಮಾಡಿ ದಣಿದ ಕಾಶೀಮನಿಗೆ ನಿದ್ದೆ ಹತ್ತಿತು. ಫಾತೂ ಒಮ್ಮೆ ಹೊರಗೆ ಬಂದು ಅಣ್ಣನನ್ನು ನೋಡಿದಳು. ಅವನ ಮೇಲೆ ಕಂಬಳಿಯನ್ನು ಸರಿಯಾಗಿ ಹೊದ್ದಿಸಿ— ಒಳಗೆ ಹೋದಳು. ಹತ್ತಿರವೇ ಕಟ್ಟಿದ ಮೇಕೆಗಳು ಹೇಕರಿಸಿದವು. ದೂರದ ಕೋಳಿ "ಕುಕೂ ಕೂಽ" ಎಂದೊದರಿತು. ಅದಕ್ಕೆ ಉತ್ತರವಾಗಿ ಕಾಶೀಮನ ಅಂಗಣದ ಕೋಳಿತು! ಕೂಗಿತು. ಕಾಶೀಮ ಹಾಗೆಯೇ ಮಲಗಿದ್ದ! ಓಣಿಯ ಒಕ್ಕಲ ಮಕ್ಕಳು ತನ್ನ್ಮ ಕೆಲಸ ಮಾಡುತ್ತ ಹಾಡುವುದು ಬೆಳಗಿನ ಜಾವದ ಆ ಸ್ನಿಗ್ಧ ವಾತಾವರಣಕ್ಕೆ ಒಂದು ಅಪೂರ್ವ ಕಳೆ ತಂದುಕೊಟ್ಟಿತ್ತು! ಈಗ ಎರಡು ದಿನ ಕಾಶೀಮನ ಭೆಟ್ಟಿಯಿಲ್ಲದ ಓಣಿಯ ಜನರು, ಅವನನ್ನು ಕಾಣುವುದಕ್ಕಾಗಿ ಬಂದು "ಕಾಶೀಮ ಸಾಬಾ- ಏ ಕಾಶೀಮಸಾಬಾ!" ಎಂದು ಕೂಗಿದರು. ಫಾತೂ ಗಡಬಡಿಯಿಂದ ತನ್ನ ಸೆರಗು ಸರಿಮಾಡಿಕೊಂಡು "ಒಳಗ ಬರ್ರಿ.... ಅಣ್ಣಾ ಮಲಕೊಂಡಾನು" ಎಂದಳು. ನಾಲ್ಕಾರು ಹಿರಿಯ ರೈತರು ಒಳಗೆ ಬಂದು ಕಟ್ಟೆಯ ಮೇಲೆ ಕುಳಿತುಕೊಂಡರು. ಕಾಶೀಮಸಾಬ, ಅವರ ಗದ್ದಲಕ್ಕೆ ಕೆಮ್ಮುತ್ತ ಎದ್ದು ಕುಳಿತುಕೊಂಡನು. ಆ ಬೇವಿನ ಮರದ ಬೊಡ್ಡೆಯು ಅವನಿಗೊಂದು ಆಸರವಷ್ಟೆ? ಕಾಶೀಮ ಹೇಗೋ ಕೆಮ್ಮನ್ನು ನಿಲ್ಲಿಸಿ "ನೀನs ತಂದಿ, ನೀವs ಮಕ್ಕಳು-ಮರಿ ನನಗ" ಎಂದು ಆಕಾಶದಕಡೆಗೆ ಕೈ ಮಾಡಿದನು.

ಕುಳಿತವರಲ್ಲೊಬ್ಬ "ಏ ಕಾಶೀಮಸಾಬಾ- ನೀ ಮಾಮಲೇದಾರ ತಂದಿ!"

"ಸುಡು— ಆ ಮಾತು" ಎಂದು ಅಸಹ್ಯವಾಗಿ ಒದರಿದ ಕಾಶೀಮಸಾಬ.

"ಹಾಂಗಂದರ ಹ್ಯಾಂಗೋ ಕಾಶೀಮಸಾಬಾ" ಮತ್ತೊಬ್ಬನ ಸುದಿ.

"ಯಪ್ಪಾ ಈ ದಿನದಾಗ ಎಲ್ಲೀ ತಂದಿ? ಎಲ್ಲೀ ಅಣ್ಣಾ ತಮ್ಮ?"

ಕಾಶೀಮ ಹೀಗೆ ಮಾತುಗಳನ್ನು ಎಳೆದೆಳೆದು ಮಾತಾಡುವಾಗ ಅವನ ಬಿಳಿಯ ಗಡ್ಡಗಳು ಅತ್ತ ಇತ್ತ ಹಾರಾಡುತ್ತಿದ್ದುವು.

"ಹೀಂಗ ಅಸ್ಕೋ ನೀನs ನಾಳೆ— ಬಂಗ್ಲೆದಾಗ ಹೋಗಿ ಕುಂದರತಿ?" ಎಂದು ಒಬ್ಬ ಒಕ್ಕಲಿಗ ನಗುತ್ತ ಚುಟ್ಟ ಹೊತ್ತಿಸಿ, ಒಂದು ಟುಪ್ಪ ಕಾಶೀಮನ ಕಡೆಗೆ ಚೆಲ್ಲಿದ!

"ಛೀ....ನಿನ ಬಿಡೋ...." ಎಂದ ಕಾಶೀಮ. ಕಾಶೀಮ ಚುಟ್ಟಾ ಸೇದದೆ ಅಲ್ಲಿಯೇ ಚೆಲ್ಲಿದ. ಅವನಿಗೆ ಕೆಮ್ಮು ಮತ್ತೆ ಬಂದಿತು:

ಫಾತೂ ಒಳಗಿನಿಂದ ಓಡಿ ಬಂದು "ಯಪ್ಪಾ.....' ದಿನಾ ಹೀಂಗಽ ಕೆಮ್ಮುತಾನ ನೋಡ್ರಿ" ಎಂದಳು.

"ಸಗತಿ ಕದಿಮ್ಯಾತು. ನಿನ್ನ ಸಿಪಾಯಿಕೇ ಬಿಡು ಸಾಬಾ!" ಎಂದು ಜೇರೊಬ್ಬ ನುಡಿದ.

"ಯಪ್ಪಾ..ಅದು ಸಿಟ್ಟು ಹಚ್ಚಿಕೊಂಡು.... ಬ್ಯಾನೀ ಬಿದ್ದಾನು" ಫಾತೂ ಒಮ್ಮೆಲೆ ನುಡಿದಳು. ಕಾಶೀನು ಅದಕ್ಕೆ ಉತ್ತರ ಕೊಡದೆ ಸುಮ್ಮನೆ ಕುಳಿತುಕೊಂಡನು.

"ಯವ್ವಾ, ಫಾತವ್ವಾ, ಪುಸೇನಸಾಹೇಬರಿಗೆ— ಹೇಳಿ ಕಳಸಬಾರದು?"

"ಇವತ್ತ ನಮ್ಮ ಸಿಪಾಯಿ ಹೇಳಿ ಬಂದಾನು!"

"ಏ ಫಾತೂ, ಯಾರ ಸಿಪಾಯಿ?" ಎಂದು ಕಾಶೀನು ಅರ್ಥಪೂರ್ಣವಾಗಿ ನುಡಿದ!

"ನಿಮ್ಮ ಸಿಪಾಯಿ— ನಿನ್ನ ಮಗ ಊರ ಮಾಮಲೇದಾರ" ಎಂದು ಒಬ್ಬ ನಗಹತ್ತಿದ. ಫಾತೂನೂ ನಗಹತ್ತಿದಳು. ಕಾಶೀಮನ ಸಿಟ್ಟು ಕಡಿಮೆಯಾಯಿತೋ ಏನೋ—"ದೇವರು ದೊಡ್ಡಾಂವ!" ಎಂದ.

ಇಷ್ಟರಲ್ಲಿಯೇ ಪೀರನನ್ನು ಎತ್ತಿಕೊಂಡು ದಾದೂ ಚಪರಾಸಿ ಮನೆಗೆ ಬಂದೇಬಿಟ್ಟ! ಪೀರ ಓಡುತ್ತ ಹೋಗಿ ಅಜ್ಜನ ತೊಡೆಯ ಮೇಲೆ ವಿರಾಜಮಾನನಾದ! ಮೊಮ್ಮಗನ ಮುಖ ನೋಡಿ ಕಾಶೀಮನ ಸಿಟ್ಟು ಗಾವುದ ಗಾವುದ– ದೂರ ಓಡಿಹೋಗಿರಬೇಕು!

"ಮಾಮಲೇದಾರಸಾಹೇಬರು ಈಗ ಬರತಾರು! ಸಣ್ಣ ಸಾಬರನ್ನ ಕರಕೊಂಡು ನಾ ಮೊದಲ ಬಂದೆ" ದಾದು ನುಡಿದ. ಕಾಶೀಮನಿಗೆ ಈ ಮಾತುಗಳು ಕೇಳಿಸಿದುವೋ ಇಲ್ಲವೋ— ಅವನು ಮೊಮ್ಮಗನ ಸಂಗಡ ಮಾತಾಡುತ್ತಿದ್ದ! ಮಾಮಲೇದಾರಸಾಹೇಬರು ಬರುವರೆಂಬುದನ್ನು ಕೇಳಿ ಆ ಒಕ್ಕಲಿಗರು ಬತ್ತಿಸೇದುವುದನ್ನು ನಿಲ್ಲಿಸಿದರು. ಫಾತೂ ಪೀರನಿಗೆ "ಪೀರಸಾಬ್ ಊಟಾ ಮಾಡತೀಯಾ?" ಎಂದು ಗಲ್ಲಹಿಡಿದು ಮುದ್ದಿಟ್ಟಳು. ಚಪರಾಸಿ ದಾದೂ ಚಿತ್ತ ಇತ್ತ ಅಲೆದಾಡಿ— ಒಳಗೆ ಬಂದು ಹೇಳಿದ. "ಕಾಶೀಮಸಾಬರ, ನೀವು ಇನ್ನಮ್ಯಾಗ ಸಣ್ಣ ಸಾಬರ ಚಪರಾಸಿಯಾಗರಿ! ನಾ ದೊಡ್ಡ ಸಾಬರ ಚಪರಾಸಿಕೇ ಮಾಡತೇನಿ" ಎಂದು ನಗಹತ್ತಿದ. ಫಾತೂ ನಗುತ್ತ "ದಾದೂ ನೀ ಖರೇಮಾತ ಹೇಳಿದಿ" ಎಂದಳು.

ಜಿಲ್ಲಿ ಸೆರೆವನರಲ್ಲೊಬ್ಬ "ಏ ಕಾಶೀಮಸಾಬಾ, ನಮ್ಮನ್ನ ಮರಿಬ್ಯಾಡಪಾ" ಎಂದ. ಎಲ್ಲರೂ ನಗುತ್ತಿರುವಾಗಲೇ—ದೂರದಲ್ಲಿ ಬೂಟಿನ ಸಪ್ಪಳ ಕೇಳಿಸಲು— ದಾದೂ ಓಡಿ ಹೋಗಿ ರಸ್ತೆಯ ಹತ್ತಿರವೇ ವಿನಯಶಾಲಿಯಾಗಿ ಸಾಹೇಬರ ಬರುವಿಕೆಯನ್ನು ನಿರೀಕ್ಷಿಸಹತ್ತಿದ! ಸಾಹೇಬರು ಮನೆಯ ಬಾಗಿಲಿಗೆ ಬರಲು "ಸಲಾಮ್" ಎಂದ ದಾದು!


ಪರ್ಫ ಕಾಡಾ
ಉಷ್ಣ ಪವಿಯು ನಿಮ್ಮ ಸೂಕ್ಷ್ಮ ಪ್ರಕೃತಿಗೆ ಅಸಹ್ಯವಾಗಿ, ಮಧ್ಯಾಹ್ನ ಮತ್ತು ರಾತ್ರಿಯೂ ಕೂಡಾ ಯಾವತ್ತೂ ಅವಯವಗಳು, ಅಂಗೈ, ಅಂಗಾಲು, ಕಣ್ಣುಗಳು ಅಸಹ್ಯವಾಗಿ ಉರಿಯುತ್ತಿವೆ. ಬೇಸಿಗೆಯಂತೆ ಈವು ಏದುವದು. ಅವಜಿನ, ಊಟವಾದ ಮೇಲೆ ಪೊಟ್ಟಿಯಲ್ಲಿ ಉರಿ, ಹೊಟ್ಟೆ ಉಬ್ಬುವದು, ನೋಯುವದು, ಮಲವಿಸರ್ಜನ ಸ್ವಚ್ಛವಾಗದಿರೋಣ, ಯಾವಾಗಲೂ ಅನುತ್ಸಾಹ, ಸರ್ವಾಂಗವೂ ನಿಶಕ್ತಿಯವಾಗಿ ಜೀವನವೇ ಬೇಜಾರವೆನಿಸಿದ್ದರೆ ಇಂದೇ
"ಪರ್ಫ ಕಾಡಾ" ಸೇವಿಸಲು ವ್ಯಾರಂಭ ಮಾಡಿರಿ.
ಅಬಲಾಮೃತ
ಗರ್ಭಾಶಯದ ಬಳನವಣಿಗೆ ಅಪೂರ್ಣವಾಗಿರುವದರಿಂದ ಹೆಂಗಳೆ ಮುಟ್ಟು ನಿಯಮಿತವಾಗುವುದಿಲ್ಲ. ಯೋಗ್ಯ ಕಾಲದಲ್ಲಿ ಮುಟ್ಟಾಗದಿರೋಣ ಪ್ರತ್ಯೇಕ ಮುಟ್ಟಿನಲ್ಲಿ ಭಯಂಕರ ಅಶಕ್ತತೆಯಾಗುವದು, ಶರೀರಕ್ಕೆ ಬೈಸನ್ನ ಆನಿಸಿದ್ದರಿಂದ ಸರ್ವಾಂಗವೂ ವೇದನಾಮಯವಾಗಿ ಪೆಸ್ಸು, ಟೊಂಕ, ಕೈ-ಕಾಲುಗಳು ಅಸಹ್ಯವಾಗಿ ನೆಲೆಯುನವು. ಹೀಗಾಗಿ ಹೆಂಗಳೆ ಮುಟ್ಟಾಗುವ ದೆಂದರೆ ಒಂದು ಸಂಕಟವನ್ನೆದುರಿಸಿದಂತೆ. ಜಡೆ ಮತ್ತು ಮೈಸ ವದರು ರೋಗ, ಬಾಣಂತಿತನದ ಕೆಂತೆರೆದ ಅಶಕ್ತತೆ ಮುಂತಾದವುಗಳ ಮೇಲೆ ಶ್ರೀಮತಿ ಅನಂದೀಬಾಯಿ ದೇಸಾಯಿ ಇವರ 'ಅಬಲಾಮೃತ' ಸುರಿಗೆಗಳು ಖಂಡಿತ ಗುಣಕಾರಿಯೆಂದು ಪ್ರತಿಕ ಸ್ತ್ರೀಯರ ಅನುಭವದಿಂದ ಕಂಡುಬಂದಿದೆ.
ನಿಮ್ಮ ಸಮೀಪದ ಕೆಮಿಸ್ಟರಲ್ಲಿ ಕೇಳಿರಿ
ಪರ್ಫ ಕೆಮಿಕಲ್ ವರ್ಕ್ಸ್, ಮುಂಬಯಿ ೨೭ No.4

ಅಪರಾಧಿ ಬಾಲಕ

ಅಥವಾ

ದಾರಿ ತಪ್ಪಿದ ಬಾಲಕ

ಶ್ರೀ. ಬೆಳವಡಿ ರಾಮರಾಯರು ಬಿ. ಎ. (ಆನರ್ಸ್) ಪುಣೆ

ಲೇಖನಾಂಕ ೧

ಬಾಲಕರು ತಪ್ಪುಗಾರರಾಗಿ ಪರಿಣಮಿಸುವುದಕ್ಕೆ ಕಾರಣರು ಬಾಲಕರೇ ಅಲ್ಲ; ಹುಟ್ಟಿ ಬೆಳೆದ ವಂಶ, ಸುತ್ತುಮುತ್ತಣ ಪರಿಸ್ಥಿತಿ ಇವೇ ಕಾರಣವಾಗಿವೆ. ನಮ್ಮ ಸಮಾಜ, ಸರಕಾರ ಎರಡೂ ಬಾಲಕರ ಸುಧಾರಣೆಯ ಕಡೆಗೆ ಲಕ್ಷ್ಯ ಪೂರಯಿಸುವುದು ಅತ್ಯಗತ್ಯವಾಗಿದೆ.

★

ಇಂದಿನ ಚಿಕ್ಕ ಬಾಲಕನು ನಾಳಿನ ಸಮಾಜದ ಮಾನವ. ಮಾನವರು ದೇವಪುತ್ರರೆಂದು ನಾವೆಲ್ಲರೂ ಭಾವಿಸುತ್ತೇವೆ. ಆದರೆ ಇಂದಿನ ಜೀವನ ಅದನ್ನು ಪ್ರತಿಬಿಂಬಿಸುವುದಿಲ್ಲ. ಈ ಹೊತ್ತು ಕಾಣುವ ಸಮಾಜದಲ್ಲಿ ಮಾನವನು ಕಷ್ಟದಿಂದ ಬಳಲಿದ್ದಾನೆ, ಚಿಂತೆಯಿಂದ ಸೊರಗಿದ್ದಾನೆ. ಸಮಾಜದೋಷಗಳಿಂದ ಪೀಡಿತನಾಗಿದ್ದಾನೆ. ಜೀವನದ ಭಾರದಿಂದ ಬಾಗಿದ್ದಾನೆ. ಇವುಗಳನ್ನೆಲ್ಲ ಎದುರಿಸುವ ಶಕ್ತಿ ಅವನಲ್ಲಿಲ್ಲ. ಅವುಗಳಿಗೆ ಅವನದೆಷ್ಟುಮಟ್ಟಿಗೆ ಜವಾಬ್ದಾರಿಯೋ ಅವನ್ನು ಹೇಳುವುದು ಶಕ್ಯವಿಲ್ಲ. ಕಾರಣ ಸಮಾಜವು ಮಾನವರ ಗುಂಪು. ಅದೇರೀತಿಯಿಂದ ಮಾನವನು ಸಮಾಜದ ಘಟಕ. ಅದುದರಿಂದ ಸಮಾಜದ ಲೋಪ-ದೋಷಗಳ ಪರಿಣಾಮ ಮಾನವನ ಮೇಲೆ ಆಗುವುದು ನಿಶ್ಚಿತ. ಅದೇ ರೀತಿಯಲ್ಲಿ ಮಾನವನ ಕಾರ್ಯಕಲಾಪಗಳ, ವಿಚಾರ ಲಹರಿಯ ಹಾಗೂ ಭಾವನೆಯ ಸಮೂಹದ ಪರಿಣಾಮ ಸಮಾಜದ ಮೇಲೆ ಪ್ರತಿಬಿಂಬಿಸುವುದು ಸಾಧ್ಯ. ಈ ರೀತಿ ಒಂದು ಸುತ್ತೊಂದನ್ನು ಅವಲಂಬಿಸಿದೆ. ಒಂದು ಇನ್ನೊಂದರಲ್ಲಿ ಅಡಕವಾಗಿದೆ. ಅದೇ ರೀತಿಯಲ್ಲಿ **ಬಾಲಕನ ಜೀವನ**, ಜೀವನದಾರಿ ಹಾಗೂ ಜೀವನದ ಧ್ಯೇಯ ಸಾಧಿಸುವಿಕೆ, ಅವನಿರುವ ಪರಿಸ್ಥಿತಿ, ಶಿಕ್ಷಣ ಹಾಗೂ ಅನುಭವಗಳ ಪರಿಣಾಮ ಅವನ ಮೇಲೆ ಆಗುವುದರಿಂದ, ಅವನಿಂದ ಘಟಿಸುವ ಸಮಾಜ ದೋಷಗಳಿಗೆ, ಅಪರಾಧಗಳಿಗೆ ಅವನು ಬಾಧ್ಯಸ್ಥನಲ್ಲ.

ಹಿಂದಕ್ಕೆ ಯುರೋಪದಲ್ಲಿ ಫಾದರ್ ವ್ಯಾಸಿಗನ್‌ನೆಂಬ ಪಾದ್ರಿಯವರು, ಅತ್ಯಂತ ಉಚ್ಚಭಾವನೆಯಿಂದ ಒಂದು "ಹುಡುಗರ ಊರು" ಎಂದು ತೆಗೆದರು. ಅದನ್ನು ತೆಗೆಯುವಾಗ ಅವರು ತೆಗೆದ ಉದ್ಗಾರ ಮನನೀಯವಿರುವದು: ಯಾವುದೇ ಬಾಲಕನು ಕೆಟ್ಟವನು ಇರನು. 'There is no bad boy in the world' ಇದ್ದರೆ ಕೆಟ್ಟ ತಾಯಿ-ತಂದೆಗಳಿರಬಹುದು. ಇದನ್ನು ಪ್ರತಿಯೊಬ್ಬ ಸಮಾಜ ಸೇವಕನು ಅಥವಾ ಸುಧಾರಕನು ಮರೆಯಲಾಗದು. ಇಂಗ್ಲಂಡಿನಲ್ಲಿ ಔದ್ಯೋಗಿಕ ಕ್ರಾಂತಿಯಾದನಂತರ, ಆರ್ಥಿಕ ಸಾಮಾಜಿಕ ಬದಲಾವಣೆ ತುಂಬ ತೀವ್ರಗತಿಯಿಂದ ಉಂಟಾಯಿತು. ಎಷ್ಟೋ ವರ್ಷಗಳಿಂದ ಮನೆಬಿಟ್ಟು ಹೋಗದಿದ್ದ ಮಾನನೀಯ ಹೆಂಗಳೆಯರು ಕಾರಖಾನೆಗಳಲ್ಲಿ, ಶಾಲೆಯಲ್ಲಿ, ದವಾಖಾನೆಯಲ್ಲಿ, ಕಚೇರಿ-ಕೋರ್ಟುಗಳಲ್ಲಿ ವ್ಯಾಪಾರ-ಉದ್ಯೋಗದಲ್ಲಿ ಹಾಗು ನಿಲಟರಿಯಲ್ಲಿ ಕೆಲಸಕ್ಕಾಗಿ ಹೊರಬಿದ್ದರು. ಮನೆಯೆಂಬುದು ಕೇವಲ ಪಸಾಹತಿಯಂತೆ ಆಯಿತು. ಮನೆಯೆಂದರೆ ಕೇವಲ ಮಲಗಿಕೊಳ್ಳಲು ಬರುವ ಸ್ಥಳ. ಗಂಡುಸಾದರೂ ಹೊರಕೆಲಸಕ್ಕಾಗಿಯೇ ಹೋಗಬೇಕಾಗುತ್ತಿತ್ತು. ಇದರಿಂದ ಚಿಕ್ಕ ಬಾಲಕರಿಗೆ ಬೇಕಾಗುವ ತಾಯಿ-ತಂದೆಗಳ ಸ್ನೇಹ, ಪ್ರೀತಿ ಮುಂತಾದ ಹಾಗೂ ಭಾವನೆಗಳ ರಕ್ಷಣೆ ತಪ್ಪಿದಂತಾಯಿತು. ಬಾಲಕರಿಗೆ ದಾರಿ ತೋರಿಸಲು ತಾಯಿ-ತಂದೆಗಳಿಗೆ ಅನುವು ಸಿಗದಂತಾಯಿತು, ಬಾಲಕರ ಶಿಕ್ಷಣ-ಚಾರಿತ್ರ್ಯ ಹಾಗು ಬೆಳೆವಣಿಗೆಯ ಕಡೆಗೆ ಲಕ್ಷ್ಯ ಪೂರೈಸಲು ಔದ್ಯೋಗಿಕ ತಾಯಿ-ತಂದೆಗಳಿಗೆ ಬಿಡುವು ಇಲ್ಲದಂತಾಯಿತು. ಚಿಕ್ಕ ಬಾಲಕರಿಗೆ- ಮಾರ್ಗದರ್ಶನವಿಲ್ಲದಂತಾಯಿತು. ಬಿರುಗಾಳಿಯಲ್ಲಿ ಸಿಕ್ಕ ಪಡಗಿನಂತೆ ಅತ್ತಿಂದಿತ್ತ ಇತ್ತಿಂದತ್ತ ಹೊಯ್ದಾಡಿ- ದಾರಿ ತೋಚದೆ ಕಂಡದ್ದನ್ನು ಮಾಡುವುದು, ಸಿಕ್ಕದ್ದನ್ನು ತೆಗೆದುಕೊಳ್ಳುವುದು ಮೊದಲಾಯಿತು.. ಇದೇ ಬಾಲಕನನ್ನು ಈ ಹೊತ್ತು "ದಾರಿತಪ್ಪಿದ ಹುಡುಗ" ಅಥವಾ "ಅಪರಾಧಿ ಬಾಲಕ" ಎಂದು ಹೇಳಬಹುದು. ಇಂಗ್ಲೀಷಿನಲ್ಲಿ "Delinquent child" or Juvenile Delinquency" ಎಂದು ಅನ್ನುವರು.

ಪರರಾಷ್ಟ್ರಗಳ ಔದ್ಯೋಗಿಕ ಕ್ರಾಂತಿಯು ಹೊಗೆಹಿಡಿಯುತ್ತಾ ನಮ್ಮಲ್ಲಿಗೂ ಬಂದು ತಲುಪಿದೆ. ಅಲ್ಲಿಯ ಸಾಮಾಜಿಕ ಲೋಪ-ದೋಷಗಳು ಇಲ್ಲಿಯೂ ಬಂದುಬಿಟ್ಟಿವೆ. ಇಲ್ಲಿಯ ಸಮಾಜವನ್ನು ಶಿಥಿಲಪಡಿಸಿದೆ. ಸಮಾಜವು ಬೆಳೆದಂತೆ ಕುಂದು-ಕೊರತೆಗೆಳೂ ಬೆಳೆಯುತ್ತಲಿವೆ. ಸಾಮಾಜಿಕಪ್ರಶ್ನೆಗಳು ದಿನೇ ದಿನೇ ಬಿಕ್ಕಟ್ಟಾಗಿ ತೋರುತ್ತಲಿವೆ. ಏನೂ ತಿಳಿಯದ ಬಾಲಕನು ಸಾಮಾಜಿಕ ಹಾಗೂ ಆರ್ಥಿಕ ಆಂದೋಲನಕ್ಕೆ ಬಲಿಬೀಳುತ್ತಿದ್ದಾನೆ. ಇಂಥ ಕೆಲವೊಂದು ಉದಾಹರಣೆಗಳನ್ನು ಇಲ್ಲಿ ಹೇಳಬಹುದು. ಪಟ್ಟಣಗಳಲ್ಲಿ ಸಾವಿರಾರು ಚಿಕ್ಕ ಬಾಲಕರು ಗಾಡಿಯಲ್ಲಾಗಲೀ, ರೇಲ್ವೇ ನಿಲ್ದಾಣದಲ್ಲಾಗಲೀ ಟಿಕೇಟ್ಟಿಲ್ಲದೆ ಪ್ರವಾಸಮಾಡಿ ಪೋಲೀಸರ ಕೈಗೆ ಸಿಕ್ಕುದ್ದುಂಟು. ಸಿನೇಮಾ ಥಿಯೇಟರಿನ ಹತ್ತಿರ ನಿಂತು ಬೇರೆಯವರ ಹಣದ ಚೀಲವನ್ನು ಕದ್ದು ಓಡಿಹೋದದ್ದುಂಟು. ಅದೇ ರೀತಿಯಲ್ಲಿ ಕುದುರೆಯ ಬಂಡಿಯ ಏಂದುಗಡಿಗೆ ಕುಳಿತು ೪-೬ ಮೈಲು ಪ್ರವಾಸ

ಮಾಡಿದ್ದುಂಟು, ಶಾಲೆಗೆ ಹೋಗುತ್ತೇನೆಂದು ಹೇಳಿ ಹೊಲ-ದಲ್ಲಾಗಲಿ ಬೀದಿಯಲ್ಲಾಗಲೀ, ಗುಡಿಯಲ್ಲಾಗಲೀ ವೇಳೆ ಕಳೆದ-ದ್ದುಂಟು. ಯಾರದೋ ಮನೆಗೆ ಆಡಲು ಹೋಗಿ ಗಡಿಯಾರ, ಫಾವುಂಟನ್‌ಪೆನ್, ಸಾಯ್‌ಕಲ್‌ಪಂಪು ಕಳವುಮಾಡಿ, ಕೋರ್ಟಿನ ಮುಂದೆ ಬಂದ ಹುಡುಗರು ಅನೇಕರು. ಮತ್ತೆ ಕೆಲವರು ತಿಳಿಯದೇ ಪಟ್ಟಣದಲ್ಲಿಯ ನುವಾಲಿಯ ಕೈಗೆ ಸಿಕ್ಕು, ಬೀಡಿ-ಸಿಗರೇಟು ಸೇದುತ್ತ ಪೇಳೆಕಳೆಯುತ್ತಲೂ ಇರಬಹುದು. ಅದೇ ರೀತಿಯಲ್ಲಿ ಬಾಲಕನ್ಯೆಯರು ತಾಯಿ-ತಂದೆಗಳ ಪ್ರಾಸಂಗಿಕಸಿಟ್ಟನ್ನು ತಡೆಯಲಿಕೆ ಮನೆಬಿಟ್ಟು ಓಡಿಹೋಗಿ, ಸೂಳೆಯರ ದಲಾಲರಿಗೆ ಬಲಿಬಿದ್ದು ಸೂಳೆತನವನ್ನು ಚಿಕ್ಕವಯಸ್ಸಿನಲ್ಲಿಯೇ ಅವಲಂಬಿಸಿದ್ದೂ ಉಂಟು. ಈ ವರ್ಗದ ಬಾಲಕರು ದಾರಿಯಲ್ಲಿ ದಿನಾಲು ಸಾವಿರಾರು ನಮ್ಮಿಗೆ ಕಾಣಬಹುದು.

ಈ ರೀತಿಯಿಂದ ಅಸಾಮಾಜಿಕ ಘಟನೆಗಳು ಈ ಬಾಲಕರ ಕೈಯಿಂದ ಘಟಿಸುವುವು. ಈ ದುಷ್ಕೃತ್ಯಗಳು ಸಮಾಜದ ಅಡಿಗಲ್ಲನ್ನು ಸಡಿಲಾಗಿ ಮಾಡುವುವು. ಸಮಾಜದಲ್ಲಿ ಅಶಾಂತತೆ, ದುರ್ಘಟನೆಗಳು ಬೆಳೆಯುತ್ತ ಹೋಗುವುವು. ಸಾಮಾಜಿಕ ಶಾಂತತೆ, ಏನ್ನು ಬೆಳೆಯಲಾರದು. ತಕ್ಕ ವೇಳೆಯಲ್ಲಿ ಇಂಥ ಕೃತ್ಯಗಳನ್ನು ನಿಲ್ಲಿಸದೆ ಹೋದರೆ, ಇದೇ ಬಾಲಕರು ಮುಂದೆ ದರೋಡೆಖೋರ-ರಾಗಲೀ ಕೊಲೆಗಾರರಾಗಲೀ ಸಮಾಜದ ಶತ್ರುಗಳಾಗಲೀ ಆಗಿ ಬಿಡುವರು. ಈ ಬಾಲಕರನ್ನು ಸುಧಾರಿಸಲುಬಹುದು. ಇವರನ್ನು ತಡೆಹಿಡಿದರೆ ಸಮಾಜದಲ್ಲಿ ಎಷ್ಟೋ ದುಷ್ಕೃತ್ಯಗಳನ್ನು ಇಲ್ಲದಂತೆ ಮಾಡಬಹುದು. ಕೈಮೀರಿ ಹೋಪನಂತರ ಪ್ರಯತ್ನಿಸುವುದು ಯೋಗ್ಯವಲ್ಲ.

ಇಂಥ ಕೃತ್ಯಗಳಿಗೆ ಯಾವುದೇ ಒಂದೇ ಕಾರಣವನ್ನು ಹೇಳಲು ಸಾಧ್ಯವಿಲ್ಲದೆ ಹೋದರೂ ಹಲವಾರು ಕಾರಣಗಳನ್ನು ತೋರಿಸ-ಬಹುದು. ಬಾಲಕನ ಮನೋಭಾವನೆಯನ್ನು ತಿಳಿದುಕೊಳ್ಳುವುದು ಅತ್ಯವಶ್ಯ. ಪ್ರತಿಯೊಬ್ಬನಿಗೂ ಭಾವನೆ ವಿಚಾರಗಳು ದೇಹ-ವಿದ್ದಂತೆಯೇ ಇರುವುವೆಂದು ಮನಗಾಣಿಸಬೇಕು. ಅವುಗಳಿಗೆ ತಕ್ಕ ಚಿಕಿತ್ಸೆ ಮತ್ತು ಔಷಧಿಯನ್ನು ತೆಗೆದುಕೊಂಡರೆ ಸಾಮಾಜಿಕ ಅಪರಾಧಗಳು ಕಮ್ಮಿಯಾಗುವುವೆಂಬುದರಲ್ಲಿ ಸಂದೇಹವಿಲ್ಲ. **"ಬಾಲಕನ ಕೃತ್ಯವನ್ನು ನಿಂದಿಸಿರಿ; ಆದರೆ ಬಾಲಕನನ್ನು ನಿಂದಿಸಬೇಡಿರಿ"** ಬಾಲಕನು ಅಪರಾಧಿಯಲ್ಲ; ಆದರೆ ಅವನ ಪರಿಸ್ಥಿತಿ ಹಾಗೂ ಅನುವಂಶ ಅದಕ್ಕೆ ಕಾರಣವೆಂದು ಹೇಳಬಹುದು. ಅದಕ್ಕಾಗಿ ಬಾಲಕನ ಅಪರಾಧದ ಕಡೆಗೆ ನೋಡುವ ದೃಷ್ಟಿಯನ್ನು ಬದಲಾಯಿಸಬೇಕು. ಅಪರಾಧವು ಅವನಿಂದ ಘಟಿಸಿದ್ದರೂ ಅವನು ಅಹ್ಯೋಂದು ಹೊಣೆಗಾರನಲ್ಲ. ಎಷ್ಟೋ ಸಲ ನಾವು ನೋಡಿದ್ದುಂಟು; ಕೇಳಿದ್ದುಂಟು. ತಾಯಿ-ತಂದೆಗಳು ಹುಡುಗನ ಭಾವನೆ ವಿಚಾರಗಳಲ್ಲಿ-ದುರ್ಲಕ್ಷ್ಯಮಾಡಿ ಮೈಮುರಿ ಹೊಡೆಯುವುದುಂಟು. ಕಾಲಿಗೆ ಬಾಯಿಗೆ ಬರೆಕೊಟ್ಟದ್ದುಂಟು. ಮನೆಬಿಟ್ಟು ಹೊರಗೆ ದಬ್ಬಿದ್ದುಂಟು. ಅದೇ ರೀತಿ ಪೋಲೀಸ ಅಧಿಕಾರಿಗಳು ತಮ್ಮ ವೇಷ-ಭೂಷಣಗಳಿಂದ, ದಂಪಧಾರಣೆಯಿಂದ ಬೆದರಿಸಿ-ಮುಟ್ಟಿ ಬರುವವರೆಗೆ ಹೊಡೆದು ಸುಧಾರಿಸಲು ಪ್ರಯತ್ನಿಸಿದ್ದುಂಟು. ಆದರೆ ಆ ಕೃತ್ಯಗಳಿಗೆ ಕಾರಣವೇನೆಂಬುದನ್ನು ಯಾರೂ ಹುಡುಕಲು ಪ್ರಯತ್ನಿಸುತ್ತಿರುವುದಿಲ್ಲ. ಇದು ನಿಜವಾಗಿಯೂ ದುರ್ದೈವವೇ ಸರಿ. ಇಂಥ ಬಾಲಕರನ್ನು ಕಾರಾಗೃಹವಾಸದಲ್ಲಿ ಒ-ಅವರ್ಷ ಶಿಕ್ಷೆಯ ಉದಾಹರಣೆಗಳೂ ಸಾಕಷ್ಟು ದೊರಕಬಹುದು.

ಇತ್ತಿತ್ತಲಾಗಿ ನವೀನದೃಷ್ಟಿ, ನವೀನ ತತ್ತ್ವಜ್ಞಾನದ ಗಾ ಬೀಸುತ್ತಲಿದೆ. ಸಮಾಜಕಾರ್ಯದ ರೂಪರೇಷೆಯಾದರೂ ಬದಲಾಗುತ್ತಲಿದೆ. ಸಮಾಜ ಸೇವೆಯು ಶಾಸ್ತ್ರದ ರೂಪವನ್ನು ಧರಿಸುತ್ತ-ಲಿದೆ. ಅದಕ್ಕಾದರೂ ಒಂದು ಶಾಸ್ತ್ರ, ಶಿಕ್ಷಣ ಬೇಕೇಬೇಕೆಂದು ಜನರು ಪ್ರತಿಪಾದಿಸುತ್ತಲಿದ್ದಾರೆ. ಸಮಾಜಸೇವಕನು ಅಥವಾ ಸಮಾಜ ಸುಧಾರಕನು ಸಾಮಾಜಿಕ ಸೇವೆಯಲ್ಲಿ ಶಾಸ್ತ್ರೀಯ ಶಿಕ್ಷಣ ಹೊಂದಿ ನುರಿತವನಿರಬೇಕೆಂದು ಜನತೆಯಲ್ಲಿ ಬಿಂಬಿಸುತ್ತಲಿದೆ. ವೈದ್ಯನು ಬೇನೆಯನ್ನು ನೆಟ್ಟಗೆ ಮಾಡಬೇಕಾದರೆ ಬೇನೆಯನ್ನು ತಿಳಿ-ವನಿರಬೇಕಾದಂತೆಯೇ ಸಾಮಾಜಿಕ ಬೇನೆಯನ್ನಾಗಲೀ ರೋಗ-ವನ್ನಾಗಲಿ, ಗುಣಮಾಡ-ಬಯಸುವವನು ಬೇನೆಯ ಲಭ್ಯಾಂಶ ಮಾಡಿದವನಿರಬೇಕಾಗುವದೆಂಬುದು ಅತ್ಯಂತ ಸುಲಭವಾದ ವಿಷಯ. ಇಲ್ಲದೆ ಹೋದರೆ ಬಡಿಗನ ಹತ್ತರ ಹೋಗಿ ಅಪೆಂಡೆಟಿಸದ ಮೇಲೆ ಶಸ್ತ್ರಕ್ರಿಯೆ ಮಾಡೆಂದು ಹೇಳಿದಂತಾಗುವುದು. ಈ ರೀತಿ ಯಾರೂ ಮಾಡುವುದಿಲ್ಲ. ಆದರೆ ಸಮಾಜಸೇವೆಯನ್ನು ಮಾಡಲು ಯಾರಾದರೂ ನಡೆಯುವುದೆಂಬ ಭಾವನೆ ಉಂಟು. ಕೆಲಸವಿಲ್ಲದಾಗ—ಹಣ ಜೇಬಿ-ದಾಗ ಸಮಾಜಕಾರ್ಯ, ಸಮಾಜ ಸೇವೆಯನ್ನು ಮಾಡಲು ಸಾಧ್ಯ-ವೆಂಬ ಕಲ್ಪನೆ ತಪ್ಪು. ಅದಕ್ಕಾದರೂ ಒಂದು ಶಾಸ್ತ್ರೀಯ ಶಿಕ್ಷಣ, ಅನುಭವ ಅತ್ಯವಶ್ಯ. ಅದಕ್ಕಾಗಿ—ಸರಕಾರ್ಯಗಳಲ್ಲಿ ಶಾಲೆ ಕಾಲೇಜು-ಗಳು ಹೊರಟವೆ. ಅದೇ ರೀತಿ ಮುಂಬಯಿಯಲ್ಲಾದರೂ "ಟಾಟಾ ಇನ್ಸ್ಟಿಟ್ಯೂಟ ಆಫ್ ಸೋಶಿಯಲ್ ಸಾಯಿನ್ಸಿಸ್" ಇದೆ. ಇನ್ನಿ-ತರ ಶಾಲೆಗಳು ಬೇರೆಡೆಯಲ್ಲಿ ಇರುವುವು. ಇಂಥ ಶಾಲೆಗಳಲ್ಲಿ 'ಚಿಕ್ಕ ಬಾಲಕರ ಕುಟುಂಬ ಕಲ್ಯಾಣ ಮೂಲಕ ಕೂಲಿಕಾರ ಸಂಬಂಧ

ಜಮಖಂಡಿಯಲ್ಲಿ ನಮ್ಮ ಏಜಂಟರು

ಮೆ. ಕುಲಕರ್ಣಿ ಬಂಧುಗಳು, ನ್ಯೂಜ್ ಏಜಂಟ್ಸ್

ಗುಡಗೇರಿಯಲ್ಲಿ ನಮ್ಮ ಏಜಂಟರು

ಶ್ರೀ. ಡಿ. ಎನ್. ಹುಲಕೋಟಿ, ನ್ಯೂಜ್ ಏಜಂಟ್

ಹಾಗೂ ಅವರ ವ್ಯವಸ್ಥೆ, ಗುಡ್ಡಗಾಡು ಜನರ ಸಂಗಡದ ಸುಧಾರಣೆಯ ಶಿಕ್ಷಣ ಇವುಗಳನ್ನೆಲ್ಲ ನಡೆಯಿಸುವರು. ಪ್ರತಿಯೊಂದು ಭಾಗ ಬೇರ್ಪಡಿಸಿ ಅದರ ಸಾಧನೆಯಲ್ಲಿ ಪೂರ್ಣತೆ ಹೊಂದಲು ಪ್ರಯತ್ನ ನಡೆದಿದೆ. ಅದೇ ರೀತಿ ಮುಂಬಯ ಸರಕಾರವು, ಸಮಾಜಸೇವೆಯಾದರೂ ಒಂದು ಸರಕಾರದ ಆದ್ಯ ಕರ್ತವ್ಯವೆಂದು ಬಗೆದು, ಅದನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನಿಸುತ್ತಲಿದೆ. ಈಗಾಗಲೇ ಬಾಲಕರ ಅಪರಾಧಿಯ ಖಾತೆ 'ಭಿಕ್ಷುಕರ ಖಾತೆ' ಹಾಗೂ ಅಪರಾಧ ಮೈಗೊಂಡವರ ಖಾತೆ (Habitual offender) ಎಂದು ಸುರುಮಾಡಿ, ಅವುಗಳ ಕಡೆಗೆ ಲಕ್ಷ್ಯಪೂರೈಸುತ್ತದೆಂಬುದಕ್ಕೆ ಇದೊಂದು ಪ್ರತೀಕ. ಶಾಸ್ತ್ರ ಹಾಗೂ ಶಿಕ್ಷಣಗಳು ಅತ್ಯವಶ್ಯವೆಂಬುದನ್ನು ಸರಕಾರವು ಒಪ್ಪಿಯೇ ಈ ಕೆಲಸಕ್ಕೆ ಕೈ ಹಾಕಿದೆ. ಆದರೆ ಇನ್ನೂ ಸಾಕಷ್ಟು ಸುಶಿಕ್ಷಿತ ಜನರು ದೊರಕದಿದ್ದ ಮೂಲಕ್ಕ ಸಮಾಜಸೇವೆಯೇ ಧ್ಯೇಯವೆಂದು ಬಗೆದ ಜನರ ಸಹಾಯದಿಂದ ಕೆಲಸವನ್ನು ಸಾಗಿಸಿದೆ.

ಮೇಲೆ ಹೇಳಿದಂತೆ ಸರಕಾರವು ಹುಡುಗರನ್ನು ದುಶ್ಚಟ ಹಾಗೂ ದುಷ್ಕೃತಿಗಳಿಗೆ ಬಲಿಬೀಳದಂತೆ ನೋಡಿಕೊಳ್ಳುವುದಕ್ಕಾಗಿ ಹಾಗೂ ಬಾಲಕನ ಅಪರಾಧದ ಕಡೆಗೆ ನೋಡುವ ನವೀನ ದೃಷ್ಟಿಯಿಂದೇ ಆಗಲಿ—೧೯೨೪ರಲ್ಲಿ ಬಾಲಕಕಾನೂನು ಪಾಸಾಯಿತು. ಅದನ್ನು ೧೯೪೭ರಲ್ಲಿ ಸುಧಾರಿಸಲಾಯಿತು. ಇವೆರಡರಲ್ಲಿ ದೃಷ್ಟಿಕೋನದ ಬದಲುಂಟು. ಮೊದಲಿನದರಲ್ಲಿ ಬಾಲಕನ ಬಂಧನ, ಪರೀಕ್ಷೆ, ಶಿಕ್ಷೆಗಳ ಕಲ್ಪನೆ ಉಂಟು. ಎರಡನೆಯದರಲ್ಲಿ ಅಪರಾಧದ ಉಪಚಾರ, ಹಾಗೂ ಅವನ ಜೀವನದಲ್ಲಿ ಅವನನ್ನು ಪುನಃ ಸ್ಥಾಪಿಸುವುದು ಅಥವಾ ಮತ್ತೊಮ್ಮೆ ಅವನನ್ನು ಸುಮಾರ್ಗದ ಮೇಲೆ ಬಿಡುವ ಕಲ್ಪನೆಗಳು ಹುದುಗಿಕೊಂಡಿರುವವು. ಮೊದಲನೆಯದರಲ್ಲಿ 'ಬಾಲಕನೇ ಅಪರಾಧಿ ಹಾಗೂ ಅದಕ್ಕೆ ಅವನು ಜವಾಬ್ದಾರಿ' ಎಂದು ತೀರ್ಮಾನಿಸಲ್ಪಟ್ಟಿದೆ. ಆದರೆ ಎರಡನೇಯದರಲ್ಲಿ ಅವನು ಪರಿಸ್ಥಿತಿಯ ಸಖನೆಂದೂ ಅದೇ ರೀತಿಯಲ್ಲಿ ಅವನ ವಿಚಾರಣೆ ಹಾಗೂ ಪರೀಕ್ಷೆಯುವಕ ಕೋರ್ಟನಲ್ಲಾಗದೆ, ಬಾಲಕರ ಕೋರ್ಟನಲ್ಲಿ ನಡೆಯಬೇಕೆಂದೂ ಆಯಿತು. ವಕೀಲಿಯನ್ನು ಪ್ರತಿಬಂಧಿಸಲಾಯಿತು. ಮತ್ತು ಎಲ್ಲಕ್ಕೂ ಮಹತ್ತ್ವದ್ದೆಂದರೆ ಬಾಲಕನನ್ನು ಯಾವುದೇ ಕುಟುಂಬವಲ್ಲಾಗಲೀ, ವಿಶ್ವಾಸಿಕ ಮನುಷ್ಯನಿಗಾಗಲೀ, ಒಳ್ಳೇ ಸಂಸ್ಥೆಗಾಗಲೀ ಒಪ್ಪಿಸಲು ಈ ಕಾನೂನಿನಲ್ಲಿ ಆಸ್ಪದ ಉಂಟು. ಅವನನ್ನು ಕಾರಾಗೃಹಕ್ಕೆ ಕಳುಹಬೇಕೆಂಬ ಕಲ್ಪನೆಯನ್ನು ದೂರಮಾಡಲಾಯಿತು. ಈ ರೀತಿ ಮೊದಲಿನ ಹಾಗೂ ಎರಡನೆಯ ಕಾಯದೆಯಲ್ಲಿ ದೃಷ್ಟಿ ಹಾಗೂ ಅದಕ್ಕೆ ಸಂಬಂಧಿಸಿದ ತತ್ತ್ವಜ್ಞಾನದಲ್ಲಿ ಬದಲಾವಣೆಯಾಯಿತು. ಇನ್ನಿತರ ಸುಧಾರಣೆಗಳೂ ಬರುತ್ತಲಿವೆ. ಪರಿಸ್ಥಿತಿಯ ಮೂಲಕ, ಹಣದ ಅಭಾವಕ್ಕಾಗಿ, ಸುರಿತ ಕಾರ್ಯಕರ್ತರ ಅಭಾವಕ್ಕಾಗಿ ಅಷ್ಟೊಂದು ಪ್ರಗತಿಯಾಗುತ್ತಿಲ್ಲ.

ಚಿಕ್ಕ ಬಾಲಕನು ದಾರಿತಪ್ಪಿ ನಡೆದಾಗ, ಅವನನ್ನು ಪುನಃ ಸನ್ಮಾರ್ಗದ ಮೇಲೆ ಒಯ್ದು ಅವನ ಜೀವನವನ್ನು ಯಶಸ್ವಿ ಸೂಡುವುದಕ್ಕೋಸ್ಕರ ಹೆಣಗಾಡುವ ಸಂಸ್ಥೆಗಳೇ ಸ್ವೀಕೃತ ಕೇಂದ್ರಗಳೆಂದು ಅನ್ನಬಹುದು. ಅಥವಾ ಬಾಲ ಸುಧಾರಕ ಕೇಂದ್ರವೆಂದೂ ಅನ್ನಬಹುದು. ಇವುಗಳೇ ಇಂಗ್ಲೀಷಿನಲ್ಲಿ 'Remand homes' ಎಂದು ಕರೆಯಿಸಿಕೊಳ್ಳುತ್ತಲಿವೆ.

ವರ್ಷಾಋತುವಿಗೆ ಸ್ವಾಗತ

ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್

卐

೧

ಬಂದಿದೆ ಚೆಂದದ ನಲ್ಮುಳಿಗಾಲ—
ತಂದಿದೆ ಧಾತ್ರಿಗೆ ಹರುಷವನತುಲ.
ಹಸಿರಾಂತು ನೆರೆದಿದೆ ಭುವನತಲ—
ಮುದವಾಂತು ನಲಿದಿದೆ ಜೀವಕುಲ.

೨

ಮುಗಿಲರಾಯನು ತನ್ನ ನಿಜತಂಗಿ ವಸುಧೆ—
ಬಿಸಿಲ ಬೇಗೆಗೆ ಬೆಂದ ದೆಸೆನೋಡಿ ಮನದೆ
ಮುಮ್ಮಲ ಮರುಗಿದನತಿನೊಂದು—
ಸಾಂತ್ವನಗೈದಿಹನಿಂತೆಂದು :
'ಮೆಳ್ಗರ್ಜನೆಯೆಂಬ ಮುದ್ದಳೆ ಹೊಡೆಸಿ—
ಖಡಖಡ ಸಿಡಿಲಿನ ತೂಬಾಕೆ ನುಡಿಸಿ,
ಹೊಳೆವ ಕೋಲ್ಮಿಂಚಿನ ದೀವಟಿಗೆಯುರಿಸಿ,
ಸುರಿವಾಲಿಶಲ್ಲಿನ ಹೂಮಳೆಗರಿಸಿ—
ಶೀತಲ ಜಲಧಾರೆಯಭಿಷೇಕ ರಚಿಸಿ
ಹಸಿರು ಸೀರೆಯುಡಿಸಿ ಕಮ್ಮಲರ ಮುಡಿಸಿ—
ನಲಿಸುವೆ ಓ ತಂಗೀ ನಿಜಸೌಖ್ಯವೆರಸಿ
ಬಿಸಿಲ ಬೇಗೆಗೆ ಬೆಂದ ದುಗುಡವ ಮರೆಸಿ!'

೩

ಬಿಸಿಲ ತಾಪಕೆ ತಪ್ತ ಪರ್ವತ ಸಾನು
ಧ್ಯಾನಸ್ಥಯೋಗಿಯಂತಚಲವಿಹುದೇನು?
ತಮ್ಮ ಭಾರವ ಹೊತ್ತ ವಸುಧೆಗೆಂದೇನು—
ಅಚಲ ಶ್ರದ್ಧೆಯೊಳಿಂತು ತಪಗೈವುವೇನು?
ಶುದ್ಧಮನದ ಶ್ರದ್ಧೆಯಚಲ ತಪವು ಫಲಿಸಿ ಬಂದಿತು,
ಶುದ್ಧನೀಲ ಗಗನಪಟದಿ ಮೇಘ ಮೂಡಿ ನಿಂದಿತು.
ಅದೋ ನೋಡು ಬಾನಿನಿಂದ ಮೇಘ ಮುಳೆಯ ಸುರಿಸಿತು,
ಇದೋ ನೋಡು ಭುವನತಲವು ತಂಪ ಕಂಪ ಸೂಸಿತು.
ಬಾನ ಬಸಿರಿನಿಂದೆ ಜಲದ ಅಮೃತ ಧಾರೆ ಹರಿಯಿತು,
ಅದನು ಸುರಿದ ಜೀವಕುಲವು ಪ್ರಾಣರಸವ ಪಡೆಯಿತು.

೪

ಬನ-ಬನವೂ ತರು-ತರುವೂ ತಂಪ ಕಂಪ ಸೂಸಿನೆ;
ಕೆರೆ-ತೊರೆಯೂ ನದ-ನದಿಯೂ ತುಂಬಿ ಸೂಸಿ ಹರಿದಿನೆ.
ಬಾಯಾರಿದ ಚಾತಕವದೊ ಮಳೆಯ ನೀರ ಕುಡಿದಿದೆ;
ಗಿರಿಯೇರಿದ ಸೋಗೆನವಿಲು ಗರಿಗೆದರುತ ಕುಣಿದಿವೆ.
ತುಂಬುಪಾತ್ರದೊಳಿಂದು ಮುಂದಗಾಮಿಗಳಾಗಿ
ಚೆಂದದೀ ಹೊಳೆಗಳು ಹರಿಯುತಿವೆ;
ಅವುಗಳಿಕ್ಕೆಲದಲ್ಲಿ ಜನಕನ್ನವನ್ನೀವ
ಬೆಳೆಗಳು ತೆನೆಗೊಂಡು ಮೆರೆಯುತಿವೆ.
ಸೊರಗಿ ಸಣ್ಣಾಗಿರ್ದ ಹಳ್ಳಕೊಳ್ಳಗಳಿಂದು
ನೈದುಂಬಿ ಬಂದತ್ತ ಹರಿಯುತಿವೆ;
ಅವುಗಳ ಮಡಿಲಲ್ಲಿ ಮನೆಮಾಡಿ ಜಲಜಂತು
ಹರುಷದಿ ಅತ್ತಿತ್ತ ಚಲಿಸುತಿವೆ.

೫

ಜೀವಕುಲದ ಪ್ರಾಣವೆನಿಸಿ ಕೃಷಿಕ ಜನರ ತ್ರಾಣವೆನಿಸಿ
ಬರದ ಭೀತಿಯನ್ನು ಹರಿಸಿ ಸುಗ್ಗಿಯ ಸಿರಿಗನಸ ಕರೆಸಿ,
ಬಂದಿತಿಳೆಗೆ ವರ್ಷಋತುವು ತಂದಿತೆಲ್ಲ ಜನಕೆ ಸತುವು.
ಮರೆಯದಂತೆ ವರುಷಕೊಮ್ಮೆ ಹೀಗೆ ನೀನು ಬರುತಿರು—
ಜನಕೆ ಅನ್ನ ದನಕೆ ಹಸಿರ ತಪ್ಪದೆಯೇ ತರುತಿರು!
ನಿನ್ನ ಒಲುಮೆಯೊಂದೆ ಸಾಕು ತುಂಬಬಹುದು ಎಲ್ಲ ಕೊರತೆ,
ನಿನ್ನ ನಲುಮೆಯೊಂದೆ ಬೇಕು ಹರಿಯಬಹುದು ಸೌಖ್ಯಸರಿತೆ!
ಇಳಿದು ಬರಲೀ ಜನಕೆ ನಂದನದ ಸೊಗವು,
ಅಳಿದು ಹೋಗಲಿ ಜಗದಿ ಬರವೆಂಬ ಹೆಗೆಯು;
ಇದೊ ನಿನಗೆ ವರ್ಷಋತು ಅದರದ ಸ್ವಾಗತವು,
ಸದಯ ನಿನ್ನಿಂದೆಮಗೆ ಸಕಲ ಸುಖ ಕರಗತವು!

— ವರ್ಷಾಗಮನ —

ಶ್ರೀ. ಶಂ. ರಾ. ಮೊಕಾಶಿ ಬಿ. ಎ. ಧಾರವಾಡ

ಬಿಸಿಲು! ರಣರಣ ಬಿಸಿಲು!— ಎಲ್ಲೆಡೆ
ಬಿಸಿಲು—ಬಿಸಿಲಿನ ಹಾಸಿಗೆ!
ತನ್ನ ಬೇಸರ ಮಂಚದಲಿ ಹುಸಿ-
ಹೊಂಚು ಹಾಕುತ, ಬೇಸಗೆ
ಕನಸು ಕುಸುರನು ಹೆಣೆಯುತಿರೆ, ಅದೆ
ಸರಸವಾ ಪರದೇಸಿಗೆ!

ಹಗಲು ಹನ್ನೆರಡಕ್ಕೆ ಸಾಗಿರೆ
ದುಡಿವ ರೈತನ ರಂಟೆಯು,
ಅನನ ಮೈಬೆಮರಿಂದ ತೊಯ್ದಿರೆ
ಹೊರಳಲಾರದ ಹೆಂಟೆಯು,
ಒಂದೆ ಹುಸಿಸುಳಿಗಾಳಿ! ದಣಿವನು
ಕಳೆವ ಬಸವನ ಗಂಟೆಯು!

ಒಂದೆ ಮಿಡಿಜೆಯು ಹಾರಿ ಎರಗಿದೆ
ಅವನ ದಣಿದಿಹ ರಟ್ಟೆಗೆ—
ಒಂದೆ ಕಾಗೆಯು ರೆಪ್ಪೆಯಿಕ್ಕದೆ
ನೋಡುತಿದೆ ಆ ಚಿಟ್ಟೆಗೆ—
ಒಂದೆ ಮೋಡವು ಅಂಟಿಕೊಂಡಿದೆ
ನೀಲಬಾನಿನ ರಟ್ಟೆಗೆ.

ಪುಷ್ಪವತಿ ಭೂದೇವಿಯೆದೆಯಲಿ
ಫಲದ ಬೇಟವು ಮಾಗಿದೆ!
ಶ್ರಮವಳ ರುಕ್ಷಕಪೋಲದಲಿ ಆಭಿ-
ಲಾಷೆಗೊಂಚಲು ತೂಗಿದೆ!
ಕಸುಕು ಕನಸಿನ ಜೀನುಬೀಸರ-
ವಲ್ಲಿ ಮೈನುರೆವಾಗಿದೆ!

ಆವಳ ಕರಿಕಾಳಿಂಗ ಜಡೆಯನು
ಕೃಷಿಯ ಸೀತೆಯು ಬಾಚುತ
ಇರಲು, ಉಚ್ಛ್ವಾಂಖಲೆಯು ಮುಗಿಲೆಡೆ
ರೇಗುಹಸ್ತವ ಚಾಚುತ
ಪತಿಯ ಶೂನ್ಯಗಭೀರ ವೃತ್ತಿಗೆ
ಮರಳುವಳು ನಸು ನಾಚುತ!

ದೆಸೆಯ ದಂತಿಯು ಘೀಳುವಂದದಿ
ದೂರ ಎಲ್ಲಿಯೊ ಗುಡುಗಿತು!
ದಿಗ್ವಿಜೇತನ ಖಡ್ಗ ನಿಂಚಿತು,
ಚಣದಿ ಬಯಲಲಿ ಅಡಗಿತು!
ಕ್ಷಿತಿಜವಪ್ರದ ಮೇಲೆ ವಾಸವ-
ಸೇನೆ ಏರಲು ತೊಡಗಿತು!

ಯಾವ ದಿಙ್ನಿಣಭ್ಯದಲಿ ಅಡ-
ಗಿತ್ತು ಈ ನಟಮೇಳವೊ?—
ಯಾ ನಟೇಶನ ಡಮರು ಕದಕಿತೊ,
ಯಾವ ತಾಂಡವ ಕೇಳಿಯೋ?
ಯಾ ಶಿವಾನಿಯ ಮಿಲನ ಸಮಯದಿ
ಯಾವ ಮದನನ ಹೋಳಿಯೋ!

ಯಾವ ಮಾಯೆಯಿದೇನೊ, ಮುಸುಕಿತು
ಮುಗಿಲ ಮೇಘದ ಪಂಡಲ!
ಅಂತರಿಕ್ಷದ ಯಜ್ಞಕಾಯಿತು
ಆವನಿತಲವೇ ಸ್ಥಂಡಿಲ!
ಹವ್ಯ ದ್ರವಿಸುವ ಸವ್ಯ ಇಂದ್ರಗೆ
ಮಿಂಚುತೆನೆಗಳ ಕುಂಡಲ!

ತಿರೆಯ ಮಂಗಲ ಮಿಲನ ಸನುಯಕೆ
ಹಗಲು ಹಗಲೇ ಬೆಚ್ಚಿತು!
ಮುಗಿಲಜಗುಲಿಯ ಬೆಳಕು ಕೆಂಡಿಪು
ಮೇಘ ಜವನಿಕೆ ಮುಚ್ಚಿತು!
ವ್ರೀಡೆ-ವಾಂಛೆಗಳಾಟದಲಿ ಬುನಿ
ಕಣ್ಣು ತೆರೆಯದೆ ನೆಚ್ಚಿತು!

"ಸಾಕು ನನ್ನ ಪ್ರಯಾಣ! ಇದುನೇ
ನನ್ನ ಗುರಿ, ವಾರಾಣಸಿ!"
ಎಂದು ನುಡಿಯಿತು ಮೆಘೇಸಂಕುಲ
ಮಿಂಚುಟಕ್ಕೆಯ ಝಳಪಿಸಿ!
ಮುಗಿಲು ಘೋ ಘೋ ಎಂದು ಸುರಿಯಿತು
ತನ್ನ ಹಸಿಬೆಯ ಸಡಲಿಸಿ!

ಕೋಡಿಯೊಡೆಯುವ ಸೂರ ಬಂದಿತಿ-
ದಾವ ನಭಕಾಲಿಂದಿಗೆ?
ಯಾವ ದಿವಸನ್ನಿಕೆಯ ಕುಳ-
ದಲ್ಲಿ ಮೋಡದ ಬಿಂದಿಗೆ?
ಯಾರ ಐರಾವತ ಪ್ರಯಾಣಕೆ
ತೊನೆಯುತಿವೆ ತೋಳಂದುಗೆ?

ತೋರಮುತ್ತಿನ ಸೂರೆಯಾಡುವ
ವರುಣಲೋಕದ ತರುಣಿಯೇ,
ಗಂಧಮಾದನದಿಂದ ಉರುಳಿದ
ದೇವನದಿ ವೈತರಣಿಯೇ,
ಕೆಂಪುನೀರಲಿ ಮಿಂದ ಧರಣಿಯ
— ಎಲ್ಲವೂ ಪುಷ್ಕರಣಿಯೋ?

ಋತುವಿನಾ ನೃತಭಂಗವೆನುವೊಲು
ಹರಿದು ದಿವದಿಗ್ಬಂಧನಾ,
ಪ್ರಥಮದರ್ಶನವಾಯ್ತು ಬಾನಲಿ
ಭಾನು ರಜತಸ್ಯಂದನಾ!
ಹೊಳೆವ ಅಂಬರ ಮಣಿಯ ಜ್ವಲನಕೆ
ಮೋಡದಂಚಿನ ಇಂಧನಾ!

ಕುಡಿದು, ಎಚ್ಚರದಪ್ಪಿ, ಮನದಣಿ
ಕುಡಿದು ಮುಗಿಲಿನ ಆಸವ,
ಬಾನ್ಗೆ ತೋರಣಕಟ್ಟಿ ಸವ್ತ-
ಸುರಾಗಮಯ ಕಾಯಾಸವ,
ತಿರೆಯು ಘೂತ್ಕರಿಸಿದಳು ಕಮ್ಮನೆ
ಕವಿವ ತೃಪ್ತ್ಯಾ ಯಾಸವ!

ನೂತ್ನ ವರ್ಷಾಗಾನಸಭೆಯಲಿ
ಮಂಗಳದ ಆಲಾಪವೊ,
ಮನುಜನೆಸಗಿಹ ದಾಹ ಜನ್ನಕೆ
ವಿಶ್ವಗಳ ಉತ್ಪಾಪವೋ,
ಶಿವನ ಸೃಷ್ಟಿವಿಲಾಸ ಕೆರಳಿಸ-
ಲೆಂದ **ಮದನನ ಚಾಪವೋ?**

ಬಂತು! ಹೊಸ್ತಿಲದೊಳಗೆ ಬಲಅಡಿ-
ಯಿರಿಸಿತ್ತೈ ವರ್ಷಾಯತು!
ಮಗಳ ಪುಣ್ಯವ ಕಂಡು ಸಗ್ಗದಿ
ಹಿಗ್ಗಿ ನಲಿದನು ಪಿತ ಪೃಥು!
ಮುಗಿದು ಸತ್ತ್ವಪರೀಕ್ಷೆ ವರವನು
ಕರುಣಿಸಿದನೈ ಶತಕ್ರತು!

"ಮುಗಿಲ ಬೀಜವ ಬಿತ್ತಿ ಹೆನು, ನೀವ್
ನೆಲದ ಬೀಜವ ಬಿತ್ತಿರಿ!
'ಓಂ, ಬಹು ಸ್ಯಾಂ' ಎಂಬ ಮಂತ್ರವೆ
ನಿಮ್ಮ ಹುಲುಸಿನ ಹುತ್ತರಿ!
ನಿಮ್ಮ ದುಡಿಮೆಯೆ ನಿಮ್ಮ ಸಂಸದ!
ನಿಮ್ಮ ಎರೆನೆಲ ಕತ್ತುರಿ!"

ಆಚಾರ್ಯ ಶ್ರೀಶಾಂತಿಸಾಗರರು

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

★

ಪಂಚಮಹಾಪಾತಕಗಳು ವ್ಯಕ್ತಿಯ ಜೀವನವನ್ನೂ ಕೆಡಿಸುವುವು. ಸಮಾಜದ ಜೀವನವನ್ನೂ ಕೆಡಿಸುವುವು. ಇಂದು ಈ ಪಾತಕಗಳ ಪ್ರಭಾವ ಹೆಚ್ಚಾಗಿದೆ.
ಇವುಗಳಿಗೆ ತಡೆಯೊದಗಿದರೆಯೇ ಲೋಕಕ್ಕೆ ಶಾಂತಿ!

★

ವೈಚಾರಿಕಜೀವನ

ಆಚಾರ್ಯಶ್ರೀಯವರ ಬಾಹ್ಯಜೀವನಚಿತ್ರದ ರೂಪುರೇಖೆಗಳನ್ನು ಕಳೆದ ತಿಂಗಳ ಸಂಚಿಕೆಯಲ್ಲಿ ಎಳೆದಾಯಿತು. ಇಷ್ಟರಿಂದಲೇ ಆಧ್ಯಾತ್ಮಿಕ ಪ್ರಗತಿಸಾಧಿಸುವುಳ್ಳ ಸಾಧನಜೀವನವು ಸಮಾಧಾನಹೊಂದಬಹುದೆ? ಈ ವಿಹಾರ, ಈ ವ್ರತೋಪವಾಸಗಳು ಯಾವುದಕ್ಕಾಗಿ? ಯಾವ ಆತ್ಮಿಕಸುಖವನ್ನು ಪಡೆಯುವುದಕ್ಕಾಗಿ? ಯಾವ ಸಿದ್ಧಿಯನ್ನು ಹೊಂದುವುದಕ್ಕಾಗಿ? ಅದು ಆಚಾರ್ಯ ಶಾಂತಿಸಾಗರರಿಗೆ ದೊರೆಯಿತೆ? ಇಂತಹ ಸಾಫಲ್ಯಕ್ಕೆ ಅವಶ್ಯವಿರುವ ಅಂತರಂಗಸಾಧನೆಯ ರೀತಿ-ನೀತಿಗಳೇನು? ಕ್ಷಣಕ್ಷಣಕ್ಕೂ ಸಾಧಕನಿಗೆ ಬರುವ ಎಡರು-ತೊಡರುಗಳೇನಿತಿಹವು? ಪರೀಷಹಗಳೆಂತಿಹವು? ಮನಸ್ಸಾಗರವು ಯಾವ ಬಿರುಗಾಳಿಗೆ ಸಿಕ್ಕು ಯಾವ ಕ್ಷಣದಲ್ಲಿ ಹೇಗೆ ಏರಿಳುವುಗಳನ್ನು ಹೊಂದುವುದು? ಇವುಗಳನ್ನೆಲ್ಲ ನಾವು ನಿರೀಕ್ಷಿಸಬೇಕು, ಅರಿತುಕೊಳ್ಳಬೇಕು. ಎಂದರೆ ನಾವು ಸತ್ಪುರುಷರನ್ನು ಸ್ವಲ್ಪಮಟ್ಟಿಗಾದರೂ ತಿಳಿದುಕೊಂಡಂತೆ ಆಗುವುದು. ಆಗ ನಮ್ಮ ಬಾಳಿನಲ್ಲಿಯೂ ಬೆಳಕುಜಿಳುವುದು.

ಈ ಪ್ರಯತ್ನದಲ್ಲಿ ತೊಡಗಿ, ಈಗ ಕೆಲವು ದಿನಗಳ ಹಿಂದೊಮ್ಮೆ ಆಚಾರ್ಯಶ್ರೀಯವರ ಸಹವಾಸದಲ್ಲಿ ಒಂದು ದಿನವನ್ನು ಕಳೆದೆ. ಅವರ ಭಕ್ತರಿಂದ ಹಲವು ಸಂಗತಿಗಳನ್ನೂ ಕೇಳಿದ್ದೆ. ಹಾವು ಹೆಗಲ ಮೇಲೆ ಏರಿದರೂ ಧ್ಯಾನಾಸಕ್ತನಾಗಿರುವ ಜನರನ್ನೆ; ಇರುಳೆಲ್ಲ ಹುಚ್ಚುಹಿಡಿದ ಮನುಷ್ಯ ಹೀಡಿಸಿದರೂ ಯೋಗವನ್ನು ಬಿಡದೆ ಇರುವ ನಿಷ್ಠೆ; ಇಂತಹ ಪ್ರಸಂಗಗಳೆಲ್ಲವೂ ಆಚಾರ್ಯರ ನಿಶ್ಚಲಅನುಭ್ಯಾನನೈಪುಣ್ಯ, ಯೋಗಸಾಧನೆಯಲ್ಲಿನ ಪರಿಣತಾವಸ್ಥೆಗಳನ್ನು ಪ್ರದರ್ಶಿಸುತ್ತವೆ. ಆದರೆ ಅವರ ಅಂತರಂಗಜೀವನಚಿತ್ರಣಕ್ಕೆ ಇವು ಸಹಾಯಕಾರಿಯಾಗುವಂತಿಲ್ಲ.

ಮಾತುಗಳಲ್ಲಿ ಮನಸ್ಸುಮೂಡುವುದಂತೆ! ಆ ಮನಸ್ಸಿನ ಒಲವು ನಿಲುವುಗಳಿಂದ ಆ ವ್ಯಕ್ತಿಯ ಆತ್ಮವಿಕಾಸವನ್ನು ಗುರುತಿಸಬಹುದು. ಆದರೆ ಇಂತಹ ವಚನಗಳನ್ನು ಆಚಾರ್ಯ ಶ್ರೀ ಶಾಂತಿಸಾಗರರಿಂದ ನಾವು ಸಂಗ್ರಹಿಸಿಟ್ಟುಕೊಂಡುದೆಷ್ಟು? ಇಲ್ಲ! ಎಲ್ಲಿಯೋ ಸಂದರ್ಶಕರೊಡನೆ ಆಡಿದ ಒಂದೆರಡು ಮಾತುಗಳಿಂದಲೇ ಅವರ ವಿಚಾರಗಳನ್ನು ಅರಿಯಲು ನಾವು ಯತ್ನಿಸಬೇಕು. ಅದಕ್ಕಾಗಿ ಅವರ ಅಧಿಕೃತವಚನಗಳನ್ನು ಇಲ್ಲಿ ಮೊದಲು ಸಂಗ್ರಹಿಸಿ ಇಟ್ಟುಕೊಳ್ಳುವ:

೧. ತಾವು ತಮ್ಮ ಸ್ಥಾನ:

ಈ ಕಾಲದಲ್ಲಿ ಭಾರತದಲ್ಲಿರುವ ಎಲ್ಲ ದಿಗಂಬರ ಜೈನಮುನಿಗಳಲ್ಲಿ ಎಲ್ಲಕ್ಕೂ ಕೊನೆಯ ಕ್ರಮಾಂಕ ನನ್ನದು. ನಾನು ಅವರೆಲ್ಲರಿಗಿಂತ ಸಣ್ಣವ.

೨. ಬ್ರಹ್ಮಚರ್ಯ:

ಸ್ತ್ರೀ ಹಾಗೂ ಧನ ಇವುಗಳನ್ನು ಧರ್ಮಮಾರ್ಗದಲ್ಲಿ ಬಾಧಕವೆಂದು ತಿಳಿಯಲಾಗುತ್ತದೆ. ತಾಯಿ, ತಂದೆ, ಅಣ್ಣ-ತಮ್ಮಂದಿರು ಮುತ್ತು ಪುತ್ರರು ಮುಕ್ತಿಮಾರ್ಗದಲ್ಲಿ ಯಾವ ಬಾಧೆಯೆನ್ನು ಉಂಟು ಮಾಡುವದಿಲ್ಲವೋ ಆಂಥದನ್ನು ಸ್ತ್ರೀಯು ಮಾಡುತ್ತಾಳೆ. ಇಷ್ಟೆ ಕಾರಣದಿಂದ ಜೈನಧರ್ಮದಲ್ಲಿ ಮುಕ್ತಿಮಾರ್ಗಕ್ಕಾಗಿ ಸ್ತ್ರೀಯ ತ್ಯಾಗವನ್ನು ಆವಶ್ಯಕವೆಂದು ಮನ್ನಿಸಲಾಗಿದೆ. ಭೋಗವನ್ನು ಪರಿತ್ಯಜಿಸುವುದು ಅಥವಾ ತ್ಯಾಗವನ್ನು ಅನುಸರಿಸುವುದು ಮುಕ್ತಿಮಾರ್ಗಕ್ಕಾಗಿ ಅನಿವಾರ್ಯವಾಗಿದೆ. ಆದರೆ ಗೃಹಸ್ಥನಿಗೆ ಸ್ತ್ರೀಯ ಸಂಪೂರ್ಣ ತ್ಯಾಗವು ಅಸಂಭವವಾಗಿದೆ. ಉಚಿತವೂ ಇಲ್ಲ. ಧರ್ಮಕಾರ್ಯವು ನಿರಂತರವಾಗಿ ನಡೆಯುವುದಕ್ಕೆಂದು ಸಂತಾನದ ಆವಶ್ಯಕತೆಯಂತೂ ಇದೆಯೇ ಇದೆ. ಎಲ್ಲರೂ ಬ್ರಹ್ಮಚಾರಿಗಳಾದರೆ ಧರ್ಮದ ಕಾರ್ಯವು ನಡೆಯುವುದೆಂತು? ಈ ಕಾರಣಕ್ಕಾಗಿ ಗೃಹಸ್ಥನು ಸಂತಾನಪ್ರಾಪ್ತಿಯ ಇಚ್ಛೆಯಿಂದ ತನ್ನ ವಿವಾಹಿತ ಪತ್ನಿಯೊಡನೆ ಸಂಬಂಧಗೊಂಡಿರುವುದು ಅವಶ್ಯಕ. ಸಂತಾನೋತ್ಪತ್ತಿಯಾದ ಮೇಲೆ ಸ್ವಸ್ತ್ರೀಗಮನವನ್ನು ಕೂಡ ತ್ಯಜಿಸಬೇಕು. ಗೃಹಸ್ಥನು ಪರಸ್ತ್ರೀಗಮನವನ್ನು ಎಂತಹ ಪ್ರಸಂಗದಲ್ಲಿಯೂ ಮಾಡಬಾರದು. ಯಾವನು

ತರದ ನಿಯಮವನ್ನು ನಿಷ್ಠೆಯಿಂದ ಪಾಲಿಸುವನೋ, ಆ ಗೃಹಸ್ಥನು ಕೂಡ ಬ್ರಹ್ಮಚಾರಿಗೆ ಸಮಾನನು. ಇಲ್ಲಿ ಇನ್ನೊಂದು ಪ್ರಶ್ನೆ ಉದ್ಭವಿಸುವುದು. ಮನಸ್ಸಿನ ಅನುಚಿತ ಆಕಾಂಕ್ಷೆಗಳನ್ನು ಶಮನ ಮಾಡುವ ಉಪಾಯ ಯಾವುದು? ಅದಕ್ಕೆ ಉತ್ತರ ಇಷ್ಟೇ: ಮಾಂಸಾಹಾರವನ್ನು ತ್ಯಜಿಸುವುದು, ಹಾಗೂ ವ್ಯಭಿಚಾರಿಯೂ ವೇಶ್ಯೆಯೂ ಆದ ಸ್ತ್ರೀಯರೊಡನೆ ಸ್ನೇಹ ಮಾಡದೆ ಇರುವುದು. ಯಾವ ಗೃಹಸ್ಥನೂ ಕೂಡ ಆಹಾರದಲ್ಲಿ ಸಂಯಮವನ್ನು ಇಟ್ಟುಕೊಂಡು, ಚಾರಿತ್ರ್ಯಹೀನ ಸ್ತ್ರೀಯರ ಸಹವಾಸವನ್ನು ತ್ಯಾಗ ಮಾಡಿದಲ್ಲಿ, ಅವನು ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳಲು ಸಮರ್ಥನಾಗುವನು.

೬. ಇಂದಿನ ಸಮಸ್ಯೆಗೆ ಸಮಾಧಾನ :

ಜನರ ನೈತಿಕಮಟ್ಟವು ಈಗ ಬಹಳ ಕೆಳಗಿಳಿದಿದೆ. ನಾನು ಚಿಕ್ಕವನಿರುವಾಗ ಜನತೆಯಲ್ಲಿ ಎಷ್ಟು ಚಾರಿತ್ರ್ಯಬಲ, ಸಾಧುವೃತ್ತಿಗಳು ಕಂಡುಬರುತ್ತಿದ್ದುವೋ ಅದರಲ್ಲಿ ಎಳ್ಳಷ್ಟು ಮಾತ್ರವೂ ಈಗ ಕಾಣಲು ಸಿಕ್ಕುವುದಿಲ್ಲ. ಜನರು ಸನ್ಮಾರ್ಗವನ್ನು ಬಿಟ್ಟು ಕುಮಾರ್ಗದಲ್ಲಿ ನಡೆಯುತ್ತಿರುವುದೇ ಈ ನೈತಿಕ ಪತನಕ್ಕೆ ಕಾರಣವಾಗಿದೆ. ಸನ್ಮಾರ್ಗವೆಂದರೆ ಪಂಚಮಹಾಪಾಪಗಳ ತ್ಯಾಗವು. ಹಿಂಸೆ, ಸುಳ್ಳು, ಕಳವು, ಕುಶೀಲ, ಅತಿಲೋಭಗಳೇ ಪಂಚಮಹಾಪಾತಕಗಳು. ಇವುಗಳ ತ್ಯಾಗ ಮಾಡದ್ದಕ್ಕಾಗಿಯೇ ಜನತೆ ಅಧೋಗತಿಗೆ ಜಾರಿಯುತ್ತಿದೆ. ತಿರುಗಿ ಸನ್ಮಾರ್ಗದಲ್ಲಿ ನಿಲ್ಲುವುದರಿಂದ ಈ ಸ್ಥಿತಿಯು ಸುಧಾರಿಸುವುದು. ಇದು ಒಬ್ಬಿಬ್ಬರು ವ್ಯಕ್ತಿಗಳಿಂದ ಆಗುವುದು ಸಾಧ್ಯವಿಲ್ಲ. ಈ ದಿಶೆಯಲ್ಲಿ ಸರಕಾರವೇ ಸ್ವತಃ ಮುಂದಾಗಬೇಕು. ಹೇಗೆ ರಾಜನೋ ಹಾಗೆ ಪ್ರಜೆಗಳು! ಸರಕಾರವು ಕಾಯಿದೆಯಿಂದ ಸುಜಮಹಾಪಾಪಗಳನ್ನು, ಜನತೆಯು ಅನಿವಾರ್ಯವಾಗಿ ತ್ಯಾಗಮಾಡುವಂತೆ ಮಾಡಿದರೆ, ಮತ್ತು ಅಧಿಕಾರಿಗಳೆಲ್ಲ ಸನ್ಮಾರ್ಗಿಗಳಾದರೆ, ಸಾಮಾನ್ಯ ಜನತೆಯು ಕೂಡ ಕುಮಾರ್ಗವನ್ನು ತ್ಯಜಿಸಿ ಸನ್ಮಾರ್ಗದಲ್ಲಿ ಪ್ರವೃತ್ತವಾಗಬಹುದು. ಸರಕಾರ ಹೀಗೆ ಮಾಡಿದರೆ, ದೇಶದ ಎಲ್ಲ ಕಷ್ಟಗಳೂ ದೂರವಾಗಬಹುದೆಂದು ನನ್ನ ದೃಢ ವಿಶ್ವಾಸವಿದೆ. ಆಗ ಅನಾವೃಷ್ಟಿ, ಆಹಾರದ ಕೊರತೆ, ಪ್ರಾಕೃತಿಕ ಉತ್ಪಾತ ಮೊದಲಾದ ಯಾವ ಸಂಕಟಗಳೂ ಇರುವುದಿಲ್ಲ. ಮತ್ತು ಎಲ್ಲ ಪ್ರಜೆಗಳ ಕಲ್ಯಾಣವಾಗುವುದು.

೭. ಅಹಿಂಸೆಯ ಮಹತಿ :

ಗಾಂಧೀಜಿಯವರು ಅಹಿಂಸೆಯ ಒಂದಂಶವನ್ನು ಪಾಲಿಸಿದರು; ಮತ್ತು ಪಾಲನ ಮಾಡಲಿಕ್ಕೆ ಹಚ್ಚಿದರು. ಅರ್ಥಾತ್ ಮಾನವನು ಮಾನವನನ್ನು ಹಿಂಸಿಸಬಾರದೆಂದು ಗಾಂಧೀಜಿಯವರು ಹೇಳಿದರು. ಆಯಿತು; ಅಹಿಂಸೆಯ ಈ ಅಂಶವನ್ನು ಆಚರಿಸಿದುದರ ಫಲವೇ ಸ್ವರಾಜ್ಯವು. ಜೈನಧರ್ಮವಂತೂ ಸಮಸ್ತ ಜೀವರಾಶಿಯೊಡನೆ ದಯೆ, ಪ್ರೇಮ ಮತ್ತು ಅಹಿಂಸೆಯಿಂದ ವರ್ತಿಸಲು ಕಲಿಸುವುದು. ಎಂದಮೇಲೆ ಈ ಸಂಪೂರ್ಣ ಅಹಿಂಸೆಯನ್ನು ಪಾಲಿಸಿದರೆ ಏನು ಲಭಿಸಲಿಕ್ಕಿಲ್ಲ? ಮುಕ್ತಿಯು ದೊರೆಯುತ್ತದೆ, ಅದರ ಮುಂದೆ ಸರಕಾರವು ತುಚ್ಛವಸ್ತುವಾಗಿದೆ. ಇದೇ ಪ್ರಕಾರ ಪಂಚಮಹಾಪಾಪಗಳನ್ನು ಸಂಪೂರ್ಣ ತ್ಯಾಗ ಮಾಡಿದರೆ, ಮಾನವನ ಎಲ್ಲ ಕಷ್ಟಗಳು ದೂರವಾಗಿ ಸಂಪೂರ್ಣ ಸುಖವು ಸಿಗಲಿಕ್ಕಿಲ್ಲವೆ?

೮. ಸ್ತ್ರೀಶಿಕ್ಷಣ :

ಸ್ತ್ರೀಯರಿಗೆ ವಿದ್ಯೆಕಲಿಯುವ ಅಧಿಕಾರವಿದೆ. ಸ್ತ್ರೀಶಿಕ್ಷಣ ಅವಶ್ಯಕವಿದೆ. ಆದರೆ ಸ್ತ್ರೀಯರಿಗೆ ಮುಕ್ತಮಾರ್ಗದಲ್ಲಿ ಮುಂದರಿಯಲು ನೆರವಾಗುವ ಉದ್ದೇಶದಿಂದ ವಿದ್ಯಾಧ್ಯಯನವನ್ನು ಮಾಡಿಸಬೇಕು. ತನ್ನ ಉಪಜೀವನಕ್ಕಾಗಿ ಸ್ತ್ರೀಯು ಶಿಕ್ಷಕಿಯೂ ಡಾಕ್ಟರಳೂ ಆಗಬಹುದು. ಇಂತಹ ಸ್ಥಿತಿಯಲ್ಲಿಯೂ ಕೂಡ ಅವಳು ಪತಿಯನ್ನು ಆಶ್ರಯಿಸಿಯೇ ಇರಬೇಕು. ಅವಳು ಕೇವಲ ಹೆಣ್ಣುಮಕ್ಕಳಿಗೆ ಕಲಿಸುವುದನ್ನೂ ಸ್ತ್ರೀಯರಿಗೇನೇ ಚಿಕಿತ್ಸೆಮಾಡುವುದನ್ನೂ ಮಾಡಬೇಕು. ಪುರುಷರಿಗೆ ಕಲಿಸುವುದನ್ನೂ ಚಿಕಿತ್ಸೆಮಾಡುವುದನ್ನೂ ಸ್ತ್ರೀಯರು ಮಾಡಕೂಡದು. ಒಂದು ವೇಳೆ ವಿಧವೆಯರಿದ್ದರೂ ಕೂಡ ಅವರೂ ಮೇಲೆ ಹೇಳಿದಂತೆಯೇ ವರ್ತಿಸಬೇಕು. ಆದರೆ ಅವರೂ ಕೂಡ ತನ್ನ ತಂದೆ, ಅಣ್ಣ-ತಮ್ಮಂದಿರು, ಮಕ್ಕಳು ಮೊದಲಾದವರ ಆಶ್ರಯದಲ್ಲಿರಬೇಕು. ಇಂಥ ಆಶ್ರಯವಿಲ್ಲದಿದ್ದರೆ

ಕುಟಜಾರಿಷ್ಟ

ಆಮಾಂಶ-ಸಂಗ್ರಹಣೆಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ ಬರೆಯಿರಿ:

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ.

ಒಬ್ಬ ನೈಜ ಸ್ತ್ರೀಯನ್ನು ಆಶ್ರಯಿಸಿಯಾದರೂ ಇರಬೇಕು. ಎಂಥ ಸ್ಥಿತಿಯಲ್ಲಿಯೂ ಸ್ತ್ರೀಯು ಏಕಾಕಿಯಾಗಿ ಇರುವುದುಒಳ್ಳೆಯದಲ್ಲ.

೬. ವಿಶ್ವಕುಟುಂಬದ ಪಾರ್ಶ್ವಭೂಮಿ :

ಎಲ್ಲ ಮಾನವಜಾತಿಯು ಒಂದೇ ಇವೆ. ಆದರೆ ಅವರಲ್ಲಿ ಸಮಾನತೆಯಾಗುವುದಿಲ್ಲ. ಯಾವ ಪ್ರಕಾರ ಪಶುಗಳಲ್ಲಿಯೂ ಪಕ್ಷಿಗಳಲ್ಲಿಯೂ ವನಸ್ಪತಿಗಳಲ್ಲಿಯೂ ಲಕ್ಷಾವಧಿ ಪ್ರಕಾರಗಳೂ ಅಂತರವೂ ಇದೆಯೋ, ಅದೇ ಪ್ರಕಾರ ಮನುಷ್ಯರಲ್ಲಿಯೂ ಅಂತರವಿದೆ. ಅದರಿಂದ ಸಮಾನರೂಪದಲ್ಲಿ ವೈವಾಹಿಕ ಕೊಡಕೊಳ್ಳುವಿಕೆಯೂ ಆಹಾರ-ವಿಹಾರವೂ ಆಗುವುದಿಲ್ಲ. ಹಾಗೆ ಮಾಡುವುದರಿಂದ ವರ್ಣ-ಸಂಕರವಾಗುವುದು. ಇದು ವಿನಾಶ ಪೇತುವುಳ್ಳದ್ದಾಗುವುದು. ಆದರೆ ಎಲ್ಲಿಯ ವರೆಗೆ ನ್ಯಾಯಹಾರಿಕ ಸಂಬಂಧವಿರುವುದೋ ಅಲ್ಲಿಯ ವರೆಗೆ ಎಲ್ಲ ಮಾನವರೊಡನೆ ಸಮಾನನಾಗಿ ವ್ಯವಹರಿಸಲಿಕ್ಕೆ ಬೇಕು. ಯಾರೊಡನೆಯೂ ಘೃಣಾ, ದ್ವೇಷ ಮತ್ತು ಅವಹೇಲನ ಆಗಬಾರದು. ಈ ರೂಪದಲ್ಲಿ ಸಮಾನ ವ್ಯವಹಾರದ ತಳಹದಿಯ ಮೇಲೆ ವಿಶ್ವಸರಕಾರವು ನಿರ್ಮಾಣವಾದರೆ, ಅದರಲ್ಲಿ ಯಾವ ಆಪತ್ತಿಯೂ ಇಲ್ಲ. ಇಂಥ ಪ್ರಯತ್ನವನ್ನು ನಾನು ಸ್ವಾಗತಿಸುತ್ತೇನೆ.

೭. ಯುದ್ಧ ಮತ್ತು ನೀತಿ :

(ಈ ಯುದ್ಧಗಳೆಲ್ಲ) ಕುವಿದ್ಯೆಯಾಗಿವೆ; ಕಳ್ಳತನವಾಗಿವೆ. ಒಂದು ಬಾಂಬಿನಿಂದ ಅಕಸ್ಮಾತ್ ಸಾವಿರಾರು ಜನರ ಪ್ರಾಣ ತಕ್ಕೊಳ್ಳುವುದು ಯಾವ ವೀರತೆಯೂ ಅಲ್ಲ. ಇದರಲ್ಲಿ ಮೋಸವಿದೆ. ಮೊದಲೂ ನಮ್ಮ ರಾಜರು ಯುದ್ಧ ಮಾಡುತ್ತಿದ್ದರು. ಆದರೆ ಅವರು ಅದರಲ್ಲಿ ಕೆಲವೊಂದು ನಿಯಮಗಳನ್ನು ಪಾಲಿಸುತ್ತಿದ್ದರು. ನಿಶ್ಚಿತ ಸಮಯದಲ್ಲಿ, ಸಮಾನ ಶಕ್ತಿಯುಳ್ಳ ವಿಪಕ್ಷದವರೊಡನೆ ಎದುರಾಎದುರು ಯುದ್ಧ ನಡೆಯುತ್ತಿದ್ದಿತು. ಅದು ವೀರರ ರೀತಿಯಾಗಿತ್ತು. ಇಂದಿನ ಕ್ರಮವು ಅಕ್ರಮವಾಗಿದೆ. ಪಂಚಮಹಾಪಾಪಗಳೇ ಈ ಕುವಿದ್ಯೆಗೆ ಮೂಲವಾಗಿವೆ. ಅದರಿಂದ ಈ ಐದೂ ಪಾಪಗಳ ತ್ಯಾಗವೇ ಮಾನವಜಾತಿಯನ್ನು ರಕ್ಷಿಸುವ ಒಂದೇ ಉಪಾಯವಾಗಿದೆ. ಒಂದುವೇಳೆ ಒಂದು ರಾಷ್ಟ್ರದವರು ಸಹ ಪಂಚ-ಮಹಾಪಾಪಗಳನ್ನು ತ್ಯಜಿಸಿದರೆ, ಅವರಷ್ಟು ಮಾತ್ರ ಕುವಿದ್ಯೆಯ ಈ ಪ್ರಪಂಚದಿಂದ ಉಳಿದುಕೊಳ್ಳುವರು. ಇವರೆದುರಿಗೆ, ಜಗತ್ತಿನೊಳಗಿನ ಎಲ್ಲ ಬಾಂಬುಗಳೂ ಈ ಪಾಪಹೀನ ರಾಷ್ಟ್ರಕ್ಕೆ ಯಾವ ಹಾನಿಯೆನ್ನೂ ಒದಗಿಸಲಾರವು.

೮. ವಿಶ್ವಧರ್ಮದ ಕಲ್ಪನೆ :

ಜಗತ್ತಿನಲ್ಲಿ ಆರು ಮುಖ್ಯ ಧರ್ಮಗಳೂ ೩೬೩ ಉಪಧರ್ಮಗಳೂ ಪ್ರಚಲಿತವಾಗಿವೆ. ಇನ್ನು ಪ್ರತಿಯೊಂದು ಧರ್ಮಾವಲಂಬಿಯೂ ತನ್ನ ಧರ್ಮವೇ ಸರ್ವೋತ್ಕೃಷ್ಟವೆಂದು ಮನ್ನಿಸುತ್ತಾನೆ. ಇಂತಹ ಸಂದರ್ಭದಲ್ಲಿ ಒಕ್ಕುಸಾಲಿಗನು ಹೇಗೆ ಸುವರ್ಣವನ್ನು ಪರೀಕ್ಷಿಸುವನೋ ಹಾಗೆ ಎಲ್ಲ ಧರ್ಮಗಳನ್ನೂ ಪರೀಕ್ಷಿಸಿ, ಒಳ್ಳೆಯ ಧರ್ಮವನ್ನು ಆಯ್ದುಕೊಂಡು ಆಚಾರದಲ್ಲಿ ತರುವುದು, ಸರ್ವಮಾನ್ಯ ಧರ್ಮದ ಪ್ರಚಾರಮಾಡುವ ಉಪಾಯವಾಗಿದೆ. ಆದರೆ ಇಂತಹ ಪರೀಕ್ಷೆಯೆ ಆಳತೆಗೋಲಾವುದೆಂಬುದೇ ಇಂದಿನ ಮುಖ್ಯ ಪ್ರಶ್ನೆಯಾಗಿದೆ. ಇದಕ್ಕೆ ನಮ್ಮ ಉತ್ತರವಿದು : ವೀತರಾಗ, ಸರ್ವಜ್ಞ ಮತ್ತು ಹಿತೋಪದೇಶಿ ಈ ಮೂರು ಗುಣಗಳು ಯಾರಲ್ಲಿರುವುವೋ ಅವರೇ ಭಗವಾನರು; ಮತ್ತು ಅವರ ವಾಣಿಯೇ ಸತ್ಯವಾಣಿಯಾಗಿದೆ. ಈ ಮೂರು ಗುಣಗಳು ಯಾರಲ್ಲಿರುವವೋ ಅವರಿಗೆ ನೀವು ಬೇಕಾದರೆ ಅರ್ಹಂತನೆನ್ನಿರಿ, ಶಂಕರನೆನ್ನಿರಿ, ಬುದ್ಧನೆನ್ನಿರಿ, ವಿಷ್ಣುವೆನ್ನಿರಿ. ಅವರು ಪೂಜ್ಯರು, ವಂದನೀಯರು, ಭಗವಾನರು. ಈ ಗುಣದ ಪರೀಕ್ಷೆಯಲ್ಲಿ ಯಾವ ಧರ್ಮವೂ ಸತ್ಯಧರ್ಮವೆಂದು ತೇರ್ಗಡೆಹೊಂದಿದರೆ, ಅದೇ ಸರ್ವಮಾನ್ಯವಾದ ವಿಶ್ವಧರ್ಮವೆನಿಸುವುದು. ನಮ್ಮ ಮತಕ್ಕನುಸರಿಸಿ ಜೈನಧರ್ಮವು ಇಂತಹ ಧರ್ಮವೇ ಆಗಿದೆ.

೯. ಸಂನ್ಯಾಸಿಗಳೂ ಸಮಾಜವೂ :

ಯತಿಗಳು ಸಮಾಜವನ್ನು ಬಿಟ್ಟು ದೂರವಿರುವುದು ಆವಶ್ಯಕವಿಲ್ಲ. ಸಮಾಜದಲ್ಲಿ ಯತಿಗಳು ಭಾವುಕರೊಡನೆ ಇರುವುದಕ್ಕೆ ಅವರಿಗೆ ನಿಷೇಧವೂ ಇಲ್ಲ. ಆದರೆ ಅವರೆಲ್ಲಿಯೇ ಇರಲಿ; ಒಂಟಿಗರಾಗಿ ಇರತಕ್ಕದ್ದಲ್ಲ. ಉಳಿದ ಸಾಧುಗಳ ಸಹವಾಸದಲ್ಲಿಯೇ ಇರಲಿಕ್ಕೆ ಬೇಕು. ಇಲ್ಲವಾದರೆ ಅವರ ಬ್ರಹ್ಮಚರ್ಯವು ನಷ್ಟವಾಗುವ ಸಂಭವವಿರುತ್ತದೆ. ಇದೇ ಪ್ರಕಾರ ಆರ್ಯಿಕೆಯರು ಕೂಡ ಏಕಾಕಿನಿಯರಾಗಿ ಇರಕೂಡದು. ಅವರು ಇಬ್ಬರು ಮೂವರು ಕೂಡಿ ಸಂಘಮಾಡಿಕೊಂಡು ಇರಬೇಕು. ಶ್ರಾವಕರಲ್ಲಿ ಧರ್ಮದ ಪ್ರಭಾವನೆಯನ್ನು ಮಾಡುವುದು ಸಾಧುಗಳ ಕರ್ತವ್ಯವಾಗಿದೆ. ಆಗ ಕೇಳುವನರ ಭಾಗ್ಯೋದಯವಿದ್ದರೆ ಮಾತ್ರ ಉಪದೇಶದಿಂದ ಸುಧಾರಣೆಯಾಗುತ್ತದೆ; ಇಲ್ಲದಿದ್ದರೆ ಇಲ್ಲ. ಈ ಸಂಗತಿಯು ಉಪದೇಶಕನ ಕುಶಲತೆ, ವಾಕ್‌ಚಾತುರ್ಯಗಳನ್ನು ಅವಲಂಬಿಸಿಲ್ಲ. ಅದರೆ ಕೇಳುವನರ ಭಾಗ್ಯೋದಯವನ್ನು ಅವಲಂಬಿಸಿದೆ. ಆಕಾಶದಿಂದ ನೀರು ಸಮಾನರೂಪದಿಂದ ಸುರಿಯುತ್ತದೆ. ಅಂದರೂ ಸಿಂಪೆಯಲ್ಲಿ ಬಿದ್ದ ನೀರು ಮೌಕ್ತಿಕವಾಗುತ್ತದೆ; ಸರ್ಪದ ಮುಖವನ್ನು ಸೇರಿದ ನೀರು ವಿಷವಾಗುತ್ತದೆ. ಇದು ನೀರಿನ ದೋಷವಲ್ಲ.

೧೦. ದಿಗಂಬರ ಜೈನಮುನಿ :

ದಿಗಂಬರ ಜೈನಮುನಿಯಾಗುವದೇನೂ ಒಂದು ಆಟವಲ್ಲ; ಅದು ಖಡ್ಗದ ಮೇಲೆ ಧಾರೆಯ ನಡೆದಂತಿದೆ. ದಿಗಂಬರ ಜೈನಸಾಧುವು ಸ್ವೇಚ್ಛೆಯಿಂದ ಯಾವ ಯಾತನೆಯನ್ನು ಸಹಿಸುವನೋ ಅದರ ಸಾವಿರನೆಯ ಪಾಲಿನಷ್ಟು ಕೂಡ—ವೀರ ಒಡನರಲ್ಲಿ ಬಡವನಾದ, ಮೂಖಿಗಳಲ್ಲಿ ಮೂಖಿಯಾದ—ಯಾವ ಗೃಹಸ್ಥನಿಗೂ ಸಹಿಸಬೇಕಾಗುವುದಿಲ್ಲ. ಅದರಿಂದ ಸಂಸಾರದ ಕಷ್ಟಗಳನ್ನು ಎದುರಿಸಲಾಗದೆ ಹೆದರಿ ಸಾಧುವೃತ್ತಿಯನ್ನು ಸ್ವೀಕರಿಸುವರೆಂದು ಭಾವಿಸಬೇಕಾಗಿಲ್ಲ. ನಿಜವಾಗಿ ಹಾರ್ದಿಕ ವೈರಾಗ್ಯವೃತ್ತಿಯೂ ಇರದಿದ್ದರೆ ದಿಗಂಬರ ಜೈನ

ಸಾಧುವಾಗುವ ಸಾಹಸವನ್ನು ಯಾರೂ ಮಾಡಲು ಸಾಧ್ಯವಿಲ್ಲ. ನಾನು ಅನ್ಯ ಸಾಧುಗಳ ವಿಷಯದಲ್ಲಿ ಹೇಳಲಾರೆ. ಆದರೆ ದಿಗಂಬರ ಜೈನಸಾಧುಗಳು ಭವಬಂಧನಕ್ಕೆ ಹೆದರಿ ಮಾತ್ರ ಸಾಧುಗಳಾಗುತ್ತಾರೆ. ಆಹಾರ, ಭಯ, ಮೈಥುನ ಮತ್ತು ಪರಿಗ್ರಹ ಈ ನಾಲ್ಕು ತರದ ದುಃಖವನ್ನು ಕಳೆದುಕೊಳ್ಳುವುದಕ್ಕಾಗಿ ತ್ಯಾಗಜೀವನವನ್ನು ಸ್ವೀಕರಿಸುತ್ತಾರೆ. ನಾರಕೀಯ ಯಾತನೆಯಿಂದ ಉಳಿಯಲಿಕ್ಕೂ ಜೀವನ-ಮರಣ ಚಕ್ರದಿಂದ ಮುಕ್ತರಾಗಲಿಕ್ಕೂ ಮುನಿವ್ರತವನ್ನು ಧರಿಸುತ್ತಾರೆ. ಅವರು ಕರ್ಮವನ್ನು ನಾಶ ಮಾಡುವುದಕ್ಕಾಗಿ ತಪಸ್ಸು ಮಾಡುತ್ತಾರೆ; ಜೀವನದ ಕಷ್ಟಗಳಿಂದ ಉಳಿದುಕೊಳ್ಳಲಿಕ್ಕೆಂದಲ್ಲ. ನಮ್ಮ ತೀರ್ಥಂಕರರು ಸಮ್ರಾಟರಿದ್ದರು; ಚಕ್ರವರ್ತಿಗಳಿದ್ದರು. ಅವರಿಗೆ ಯಾವ ಸುಖವೂ ಕಡಿಮೆಯಿರಲಿಲ್ಲ.... ಅವರು ತ್ಯಾಗ-ಮಾರ್ಗವನ್ನು ಸ್ವೀಕರಿಸಿದರು....ಯಾಕೆಂದರೆ ಸಂನ್ಯಾಸದ ಹೊರತು ಮುಕ್ತಿಯು ಸಂಭವಿಸುವುದಿಲ್ಲ. ಒಂದು ದಿನದಲ್ಲಿ ಒಂದು ಪೇಳೆಯ ಹೊರತಾಗಿ ಅನ್ನ-ನೀರುಗಳನ್ನು ಸ್ವೀಕರಿಸುವ ದಿಗಂಬರ ಜೈನಸಾಧು ಒಬ್ಬನನ್ನು ಕೂಡ ಭಾರತದಲ್ಲಿ ನೀವು ಕಾಣಲಾರಿರಿ. ಉಪವಾಸ-ವಿದ್ದಾಗ ಮರಣ ಒದಗುವಂಥ ಪ್ರಸಂಗ ಬಂದರೂ ಕೂಡ ಒಂದು ಹನಿ ನೀರನ್ನೂ ಸಹ ಬಾಯಲ್ಲಿ ಹಾಕುವುದಿಲ್ಲ. ಪ್ರತಿದಿನ ಆಹಾರ ಸ್ವೀಕರಿಸುವಾಗ ಅಷ್ಟೇ ನೀರನ್ನೂ ಕುಡಿಯುವರು. ಭೋಜನ ಮಾಡಲಿಕ್ಕೆ ಳಿದ 'ಅಂತರಾಯ'ಗಳಿಂದ ಉಳಿದುಕೊಂಡು ಆಹಾರ ತೆಗೆದುಕೊಳ್ಳಬೇಕು. ಇವುಗಳಲ್ಲಿ ಒಂದು ತರದ 'ಅಂತರಾಯ' ಒದಗಿದರೂ ಜೈನಸಾಧುವು ಆಹಾರ ಗ್ರಹಣಮಾಡುವುದಿಲ್ಲ. ಎಂಥ ಚಳಿಗಾಲದಲ್ಲಿಯೂ ಸಹ ಮೈಮೇಲೆ ಒಂದು ತುಂಡು ವಸ್ತ್ರವನ್ನೂ ತೊಡೆಯುವುದಿಲ್ಲ. ಈ ಎಲ್ಲ ಯಾತನೆಯನ್ನು ಜೈನ ದಿಗಂಬರ ಸಾಧುಗಳು ಸ್ವೇಚ್ಛೆಯಿಂದ ಸ್ವೀಕರಿಸುತ್ತಾರೆ. ಇಂತಹ ಕಠಿಣ ತಪಸ್ಸಿನಿಂದಲೇ ಕರ್ಮಕ್ಷಯವಾಗುತ್ತದೆ; ಮತ್ತು ಜೀವ ಮುಕ್ತನಾಗುತ್ತದೆ.

ಇಲ್ಲಿ ಆಚಾರ್ಯಶ್ರೀಗಳವರ ಕೆಲವು ವಿಚಾರಗಳನ್ನು ಸಂಗ್ರಹಿಸಿಡಲಾಗಿದೆ. ಭೌತಿಕವಾದವನ್ನೂ ಸಮಾಜದಲ್ಲಿ ಸಂಪೂರ್ಣ-ಶಾಂತಿಯನ್ನೂ ನಂಬಿ ನಡೆಯುವವರಿಗೆ ಇದರಿಂದ ಸಮಾಧಾನ ದೊರೆಯಲಿಕ್ಕಿಲ್ಲ. ಆದರೆ ಶ್ರೀಶಾಂತಿಸಾಗರರು ಇಂದಿನ ಜಾಗತಿಕ ಸಮಸ್ಯೆಗಳಿಗೆ ಇರುವ ಮೂಲ ಕಾರಣಗಳನ್ನು ಬಹು ಚೆನ್ನಾಗಿ ತಿಳಿದುಕೊಂಡುದನ್ನು ನಾವು ಕಾಣುತ್ತೇವೆ. ಅಲ್ಲದೆ ಅವುಗಳನ್ನು ನಿವಾರಿಸುವ ಒಂದು ದೃಷ್ಟಿಯಿಂದ ತೂಗಿ ಇಟ್ಟಿದ್ದಾರೆ. ತಾವು ಅರಿತ ಮಾರ್ಗದಲ್ಲಿ ತನ್ನ ಚಾರಿತ್ರದಿಂದಲೂ ವಿಚಾರದಿಂದಲೂ ಜನತೆಗೆ ಎಷ್ಟು ಮಾರ್ಗದರ್ಶನಮಾಡಲು ಸಾಧ್ಯವಿದೆಯೋ ಅಷ್ಟೂ ಮಾಡುತ್ತಲಿದ್ದಾರೆ. ಅವರ ಪ್ರಯೋಜನವು ಇನ್ನೂ ಹೆಚ್ಚಾಗಿ ಆಗಬೇಕಾದರೆ, ಆಗಾಗ ನಡೆಯುವ ಅವರ ಪ್ರವಚನಗಳನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯ ನಡೆಯಬೇಕು. ಹಿಂದಿನ ಕಾಲದಲ್ಲಿ ನಮ್ಮ ಮಹಾಪುರುಷರ ಹಾಗೂ ತೀರ್ಥಂಕರರ ವಚನಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳದುದಕ್ಕೆ ನಾವು ಇಂದು ಅಪಾರ ಹಾನಿಗೆ ಒಳಗಾಗಿದ್ದೇವೆ. ಅಂತಹ ತಪ್ಪು ಮತ್ತೂ ಮತ್ತೂ ಆಗದಂತೆ ಎಚ್ಚರುಗೊಳ್ಳಬೇಕು.

ಅದೇನೇ ಇರಲಿ; ಶಾಂತಿಸಾಗರರ ಸಾನ್ನಿಧ್ಯ ಎಂಥ ಭಾವುಕ-ಮಾನವನಿಗೂ ಕೂಡ ಒಂದು ಶಾಂತಿಯನ್ನೂ ಅನುಪಮಸುಖ-ವನ್ನೂ ಒದಗಿಸಿಕೊಡುವುದು. ತೀರ ಕಡಿಮೆ ಶಿಕ್ಷಣವನ್ನು ಹೊಂದಿಯೂ ಸಹ ಅಪಾರ ಶಾಸ್ತ್ರಾಭ್ಯಾಸ, ನಿಶ್ಚಿತ ಧರ್ಮದೃಷ್ಟಿ, ಸಮತೋಲ ವಿಚಾರಗಳಿಂದ ನಮ್ಮನ್ನು ಮುಗ್ಧಗೊಳಿಸುವಂತಿದ್ದಾರೆ ಶಾಂತಿಸಾಗರರು. ಈ ಮಹಾತ್ಮರ ಜೀವನವು ನಮ್ಮ ಬಾಳಿಗೊಂದು ಬೆಳಕಾಗಿ ಬಹುದಿನವಿರಲೆಂದು ನಾವೆಲ್ಲರೂ ಹಾರೈಸೋಣ.

ಭಸ್ಮಗ್ರಸ್ತ ಆಯುರ್ವೇದದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಣ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚಪರ್ವಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

"ಗುರಂದಿ"

(ದೇಶಪರಿಚಯ)

ಶ್ರೀಮತಿ ಇಂದಿರಾ ಲಕ್ಷ್ಮೀನರಸಿಂಹರಾವ್, ಬಿ.ಎ. (ಆನರ್ಸ್)
ಜಬಲ್‌ಪುರ

卐

ಇದ್ದುದನ್ನು ನೋಡಿ ಆನಂದಿಸುವಂತೆ, ಅದನ್ನು ಬಣ್ಣಿಸಿ ಬರೆದುದನ್ನೋದಿ ನೋಡಿದ ಆನಂದವನ್ನೇ ಅನುಭವಿಸಬಹುದು. ಆದರೆ ಹಾಗೆ ಬರೆಯುವವರಲ್ಲಿ ಸೂಕ್ಷ್ಮ ನಿರೀಕ್ಷಕ ಶಕ್ತಿ ಬೇಕು; ಲೇಖನ ಕೌಶಲ ಬೇಕು ಅವೆರಡೂ ಗುಣಗಳನ್ನು ಇಲ್ಲಿ ನೋಡಬಹುದು. !

卐

ಗುರಂದಿ! ಇದೆಂತಹ ತಲೆಬರಹ? ಯಾವ ಭಾಷೆಯ ಶಬ್ದವಿದು?— ಎಂದು ಅಚ್ಚರಿಪಡಬೇಡಿ. ಇದೇನು ತಿಂಡಿಯಹೆಸರೇ? ಒಂದು ವ್ಯಕ್ತಿಯ ಹೆಸರೇ? ಒಂದು ಕಟ್ಟಡದ ಹೆಸರೇ? ಒಂದು ಪ್ರಾಣಿಯ ಹೆಸರೇ?—ಎಂದು ತರ್ಕದ ಕುಸುರೆಯನ್ನು ಓಡಿಸಬೇಡಿ. "ಗುರಂದಿ" ಇವಾವುದೂ ಅಲ್ಲ. "ಗುರಂದಿ"ಯ ಅರ್ಥ, "ಗುರಂದಿ"ಯ ಮಹತ್ತ್ವವನ್ನು ಜಬಲ್ಪುರದ ನಿವಾಸಿಗಳು ಮಾತ್ರ ಬಲ್ಲರು. "ಗುರಂದಿ" ಜಬಲ್ಪುರವಾಸಿಗಳ ಮನೆಮನೆಯ ಮಾತು. ಭಾನುವಾರನಂತೂ, ಧನವಂತರಿಂದ ದರಿದ್ರ ಮನುಷ್ಯನ ತನಕ, ಎಲ್ಲರ ಬಾಯಲ್ಲಿಯೂ "ಗುರಂದಿ"ಯ ಮಾತು! "ಗುರಂದಿ" ಇನ್ನೇನೂ ಅಲ್ಲ; ಜಬಲ್ಪುರದಲ್ಲಿ ಭಾನುವಾರದ ದಿನ ಸಂತೆ ನೆರೆಯುವ ಒಂದು ವಿಶಾಲವಾದ ಸ್ಥಳ. ಇದು ಸುಮಾರು ಒಂದು ಚೌರಸ ಮೈಲು ವಿಸ್ತಾರವಾಗಿದೆ. ಇದೊಂದು ಮಹಾ ಸಂತೆ: ಸಂಸಾರವನ್ನು ಸಾಗಿಸಲು ಒಂದು ಕುಟುಂಬಕ್ಕೆ ಯಾವ ಯಾವ ಸಾಮಾನುಗಳು ಬೇಕಾಗುವುವೋ ಅವೆಲ್ಲವುಗಳನ್ನೂ, ಇಲ್ಲಿ—ಭಾನುವಾರ ಬಂದರೆ—ಕೊಂಡುಕೊಳ್ಳಬಹುದು. ತರಕಾರಿ, ಹಣ್ಣು, ಬಟ್ಟೆ, ಪಾತ್ರೆ, ಮಡಕೆ-ಕುಡಿಕೆ, ಮರಬುಟ್ಟಿಗಳು, ಪುಸ್ತಕಗಳು, ಕಪ್ಪುಸಾಸಪುಗಳು, ಧಾನ್ಯಗಳು, ಅಡಿಗೆಗೆ ಹಾಕುವ ಹುಡಿಪುಡಿಗಳು, ಕಬ್ಬಿಣದ ಸಾಮಾನುಗಳು, ಫರ್ನಿಚರ್, Second hand ಸಾಮಾನುಗಳು, ಬಳೆಗಳು, ಮಣಿಗಳು— ಇನ್ನೂ ಅನೇಕ ವಿಧವಿಧವ ಸಾಮಾನುಗಳು ಇಲ್ಲಿ ದೊರೆಯುವುವು. ಇದೊಂದು ಮಾನವ ನಿರ್ಮಿತವಾದ ಮಹಾ ಪ್ರಪಂಚ! ಇಲ್ಲಿಯ ಭಾನುವಾರದ 'ಗುರಂದಿ' ಮೂರನೆಯ ಕಣ್ಣಿಗೊಂದು ಹಬ್ಬ!

'ಗುರಂದಿ' ಈ ಶಬ್ದದ ಮೂಲ 'ಗುರಂದಾ'. ಹಿಂದಿಯಲ್ಲಿ 'ಗುರಂದಾ' ಎಂದರೆ ಕೊಳಚೆಯ ಸ್ಥಳ ಇಲ್ಲವೆ ಗಲೀಜು ಜಾಗ. ಇಪ್ಪತ್ತೈದು ವರ್ಷಗಳ ಹಿಂದೆ ಇದು ಕೊಳಚೆಯ ಸ್ಥಳವಾಗಿತ್ತು. ಬಳಕೆಯ ಸ್ಥಳವಾಗಿರಲಿಲ್ಲ. ಊರು ಬೆಳೆದ ಹಾಗೆಲ್ಲಾ ಜಾಗ ಬೇಕಾಯಿತು. ಆಗ ಗಲೀಜು ಜಾಗ ಹೋಗಿ ಭಾನುವಾರದ ಸಂತೆ ಆಯಿತು. ಆದರೆ ಈ ಸಂತೆ 'ಗುರಂದಿ'ಯ ಹೆಸರನ್ನು ಅಂಟಿಸಿಕೊಂಡು ಬಂದಿತು. ಇಂದಿಗೂ ಈ ಸಂತೆ ಎಲ್ಲ ಭಾಷೆಗಳ ಜನರಿಗೆ 'ಗುರಂದಿ' ಆಗಿದೆ. ಹೆಸರಿನಿಂದಲೇ ಕಮನೀಯವಾದ ಕಮಲವು ಬೆಳೆದು ಬರುವಂತೆ, ಗುರಂದಿಯು ಕೊಳಚೆಯ ಸ್ಥಳವು ಹೋಗಿ ಲೋಕೋಪಕಾರಿಯಾದ ಸಂತೆಯ ಸ್ಥಳವಾಗಿದೆ. ಮಳೆಗಾಲವನ್ನು ಬಿಟ್ಟು ಉಳಿದೆಲ್ಲ ಕಾಲಗಳಲ್ಲಿ ನೀರು ನಿಂತು ಕೊಚ್ಚೆಯಾಗುವುದು. ಆಗ ಚಪ್ಪಲುಗಳನ್ನು ಹಾಕಿಕೊಂಡವರ ಹಿಂದೆ ನಡೆದರಂತೂ ದೇವರೇ ಗತಿ! ಬಟ್ಟೆಗೆಲ್ಲ ಮಣ್ಣಿನ ಬಣ್ಣ ಅನಾಯಾಸವಾಗಿ ಬರುವುದು. ನಾವೇ ಸಾದರ್ವಾಣಿ ಧಾರಿಗಳಾಗಿ "ಗುರಂದಿ"ಗೆ ಹೋದರೆ, ನಮ್ಮ ಹಿಂದಿನ ಬಟ್ಟೆಗೂ ಹಿಂದಿನವರಿಗೂ ಚೆನ್ನಾಗಿ ಮಣ್ಣಿನ ಬಣ್ಣವನ್ನು ಎರಚಬಹುದು. ಚಳಿಗಾಲ ಮತ್ತು ಬೇಸಗೆ ಕಾಲದಲ್ಲಿ ಇದು ಒಳ್ಳೆಯ ಸ್ಥಳ. ವಿಶೇಷವಾಗಿ ಚಳಿಗಾಲದಲ್ಲಿ ವಿಧವಿಧವಾದ ದೇಶೀಯ ವಿದೇಶೀಯ ಹಣ್ಣುಗಳನ್ನು ಮತ್ತು ತರಕಾರಿಗಳನ್ನು ನಾವಿಲ್ಲಿ ನೋಡಬಹುದು.

ಇಲ್ಲಿಯ ತರಕಾರಿಯ ವಿಭಾಗವೇ ಬಹು ದೊಡ್ಡದು. ಚಳಿಗಾಲದಲ್ಲಿಯ ಎಳಬಿಸಿಲನ್ನು ಅನುಭವಿಸುತ್ತಾ, ಅದೇ ತಾನೆ ಕುಯ್ದು ತಂದ ಹಸಿರು ತರಕಾರಿಗಳ ಮಧ್ಯದಲ್ಲಿ ನಡೆದಾಡುವುದೇ ಒಂದು ಸಂತಸವನ್ನಿಸುವುದು. ಬೇಗ ಬಂದಷ್ಟು ಒಳಿತು. ಬೆಳಗ್ಗೆ ೮ರಿಂದ ೯ರ ಒಳಗೆ ಬಂದರೆ ತುಂಬ ತಾಜಾ ತರಕಾರಿ ಸಿಕ್ಕುವುದು. ಕಡಿಮೆ ಬೆಲೆಗೂ ಸಿಕ್ಕುವುದು. ತರಕಾರಿಯವಳು "ಜೋಣೀ ಹೋನಾ ಬಾಬುಜೀ—ಜೋಣೀ ಕೇಲಿಯೇ ಬಾಯಿಜೀ..." ಎಂದ ಹೇಳಿ ಅಗ್ಗವಾದ ಬೆಲೆಗೆ ಕೊಡುವಳು. ಕೊಟ್ಟು ಡುಡ್ಡನ್ನು ಹಣೆಗೊತ್ತಿಕೊಂಡು "ಆಪಕೋ ಭಗವಾನ್ ಭಲಾ ಕರೇ" ಎಂದು ಹರಸುವಳು. ಸಾಯಂಕಾಲದ ವರೆಗೆ ಒಳ್ಳೆಯ ವ್ಯಾಪಾರವಾದರೆ ಇನ್ನಿಷ್ಟು ಹರಸುವಳು. ಇಲ್ಲವಾದರೆ ನಿಮ್ಮನ್ನು ಮನವಲ್ಲಿ ಚೆನ್ನಾಗಿ ಶಪಿಸುವಳು. ಚಳಿಗಾಲದಲ್ಲಿ ತರಕಾರಿಗಳನ್ನು ನೋಡುವುದಕ್ಕೆ ಎರಡು ಕಣ್ಣುಗಳೇನೂ ಸಾಲುವುದಿಲ್ಲ. ಗುರಂದಿಯುದ್ದಕ್ಕೂ ಎದುರು ಬದುರು, ವ್ಯಾಪಾರ ಮಾಡುವವರಿಗಾಗಿ ಕಟ್ಟಿಗೆಗಳನ್ನು ಕಟ್ಟಿದ್ದಾರೆ. ಅವುಗಳ ಮಧ್ಯೆ ನಾವುಗಳು ನಡೆದಾಡಬೇಕು. ತರಕಾರಿಗಳನ್ನು ರಾಶಿರಾಶಿಯಾಗಿ ಒಟ್ಟಗೆಕೊಂಡು ಕುಳಿತಿರುತ್ತಾರೆ. ಆಲೂಗಡ್ಡೆ, ಈರುಳ್ಳಿ, ಹಸಿಮೆಣಸಿನ ಕಾಯಿ, ಬದನೆಕಾಯಿ, ನನಲುಕೋಲ, ಕಾಲೀಫ್ಲಾವರ್, ಕ್ಯಾಬೇಜು, ಕ್ಯಾರಟ್ಟುಗಳು, ತರತರದ ಆಕಾ

ಕಾಯಿಗಳು, ಮೂಲಂಗಿಗಳು, ಟೊಮ್ಯಾಟೋ (ಹಸಿರು ಮತ್ತು ಕೆಂಪು), ಬೆಂಡೇಕಾಯಿ, ಗೋರಿಕಾಯಿ, ಹೀರೇಕಾಯಿ, ತರತರದ ಕುಂಬಳಕಾಯಿಗಳು(ಕರಿ, ಕೆಂಪು, ಬೂದು....ಇ ಇ). ನೆಂತೆಸೊಪ್ಪು, ದಂಟಿನಸೊಪ್ಪು, (ರಾಜಗಿರಿ), ಕೊತ್ತಂಬ್ರಿ ಸೊಪ್ಪು, ಪಾಲ್ಕನಸೊಪ್ಪು, ಕಡ್ಲೆಸೊಪ್ಪು, ಗೋಳೀ ಸೊಪ್ಪು, ಲ್ಯಾಟುಸ್ ಸೊಪ್ಪು, ಕಮಲದ ದಂಟು, ಹಸಿಶುಂಠಿ, ತೊಂಡೇಕಾಯಿ, ಹಾಗಲಕಾಯಿ, ನುಗ್ಗೇಕಾಯಿ, ಬಾಳೇಕಾಯಿ, ಹಸೀಬಟಾಣಿ, ಪಡುವಲ, ದಿಲ್‌ಪಸಂತ್ ಇತ್ಯಾದಿ.... ಇನ್ನೂ ಅನೇಕ ತರಕಾರಿಗಳ ರಾಶಿರಾಶಿಗಳನ್ನೇ ನೋಡಬಹುದು. ಒಂದೊಂದು ರಾಶಿಯು ಒಂದೊಂದು ಸಲ ೫-೬ಅಡಿ ಎತ್ತರ ಕೂಡ ಇರುವುದು. ಇನ್ನೂ ಹೆಚ್ಚಿನ ವಿವರಗಳನ್ನು ಹೇಳುವ ನೊದಲು, Ripley ಹೇಳಿದ ಹಾಗೆ "Believe it or not' ಎಂದು ಹೇಳಬೇಕಾಗುವುದು! ಚಳಿಗಾಲದಲ್ಲಿ ಇಲ್ಲಿಯ ಒಂದೊಂದು ಕಾಲಿಫ್ಲಾವರ್ ಎರಡು ಅಡಿ ವ್ಯಾಸವುಳ್ಳದ್ದಿರುತ್ತದೆ! ಒಂದೊಂದು ಬದನೆಕಾಯಿ ೬ರಿಂದ ೮ ಪೌಂಡು ತೂಕವುಳ್ಳದ್ದು! ಒಂದೊಂದು ಮೂಲಂಗಿ ೩ಅಡಿ ಉದ್ದ, ಅರ್ಧ ಅಡಿ ದಪ್ಪವಾಗಿ, ೧೦-೧೫ಪೌಂಡು ತೂಕವುಳ್ಳದ್ದು! ಇದೆಲ್ಲ ಅತಿಶಯೋಕ್ತಿ ಇಲ್ಲವೆ ಕಟ್ಟುಕಥೆ ಎಂದೆನ್ನಬೇಡಿ. ಪ್ರತಿ ಭಾನುವಾರವೂ, 'ಗುರಂದಿ'ಯಲ್ಲಿ ನೋಡಬೇಕಾದ ದೃಶ್ಯವಿದು. ಇದರ ಸತ್ಯತೆಯನ್ನು ಕಂಡುಕೊಳ್ಳಬೇಕಾಗಿದ್ದರೆ, ಚಳಿಗಾಲದಲ್ಲಿ "ಗುರಂದಿ"ಯಲ್ಲಿ ಬಂದೇ ನೋಡಬೇಕು. ಈ ತರಕಾರಿಗಳು ತಾಜಾ ಇರುವುನಲ್ಲದೆ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಇರಿಸಲ್ಪಟ್ಟಿರುತ್ತವೆ. ಹತ್ತಿರ ನೀರು ಇಟ್ಟುಕೊಂಡು ಆಗಾಗ ಚಿಮುಕಿಸುವರು. ನಗು-ನಗುವ ಹಸಿರು ಸೊಪ್ಪು, ಸುರಿಮಿರಿ ಮಿಂಚುವ ಕಪ್ಪು ಬದನೆಕಾಯಿಗಳು, ಕೆಂಪಾಗಿರುವ ಕ್ಯಾರಟ್ಟುಗಳು, ಬೆಣ್ಣೆಯ ಬಣ್ಣದ ಕಾಲಿಫ್ಲಾವರ್, ಇವೆಲ್ಲವುಗಳೂ ಯಾರ ಕಣ್ಣುಗಳಿಗೆ ಸಂತಸವನ್ನು ನೀಡಲಿಕ್ಕಿಲ್ಲ? ತರಕಾರಿಯ ವಿಭಾಗದಲ್ಲಿ ಎಲ್ಲಿ ನೋಡಿದಲ್ಲಿ ಹಸಿರೇ ಹಸಿರು! ಇಲ್ಲಿ ನಡೆದಾಡುವುದೇ ಒಂದು ಸ್ವರ್ಗಸುಖ!

ಜಬಲ್ಪುರದ ತರಕಾರಿ ಮಾರುವವರಲ್ಲಿ ಒಂದು ವೈಶಿಷ್ಟ್ಯವಿದೆ: ಒಬ್ಬೊಬ್ಬ ತರಕಾರಿಯವನೂ ಒಂದೊಂದು ರೀತಿಯಲ್ಲಿ ರಾಗತೆಗೆದು ಹಾಡುಹೇಳುತ್ತ ತನ್ನ ತರಕಾರಿಗಳನ್ನು ಕೊಂಡುಕೊಳ್ಳಲು ಗಿರಾಕಿಗಳಿಗೆ ಬಿನ್ನವಿಸಿಕೊಳ್ಳುವನು. ಬೆಂಡೇಕಾಯಿಯವನು "ಆವೋ ಬಾಬೂಜಿ,ಽಽ ಬಚ್ಚಾಭೇಂಡೀ, ಹರಾ ಭೇಂಡೀ, ಚಾರೈಯಾನ್ನಾಸೇರ್ಽ ಪಾಲೋ ಚಾರೈಯಾನಾ ಸೇರ್, ಬಾಬೂಜಿ.... (ಹಸಿರು ಎಳೇ ಬೆಂಡೀಕಾಯಿ, ನಾಲ್ಕಾಣೇ ಸೇರು ಕೊಳ್ಳಿ!) ಎಂದು ರಾಗ ತೆಗೆದು ಕರೆಯುವನು. ಇನ್ನೊಬ್ಬನು "ಭಟಾ ಟಮಾಟರ್, ತಾಜಾ ಆಲೂ ಮಟರ್.... ಪಾಚೈಯಾನಾ ಸೇರ್ಽಽ, ಸೇರ್‌ಸೇರ್.... ಬಾಬೂ, ಲೇಲೋ ಬಾಬೂ ಖಾಲೋ ಬಾಬೂ ಭಾಟಾ ಟಮಾಟರ್....ಆಲೂ ಮಟರ್...." ಎಂದು ಕೂಗುವನು. ಹೀಗೆ ಎಲ್ಲರೂ ಒಂದೊಂದು ವಿಧವಾಗಿ ಹಾಡು ಹೇಳಿಕೊಂಡು, ಗಿರಾಕಿಗಳನ್ನು ಸೆಳೆದುಕೊಳ್ಳುವರು. ಈ ಬಗೆಯಾಗಿ ಮಾರುವ ಇಲ್ಲಿಯವರ ರೀತಿಯು, ಈ ಜನರ ಉಲ್ಲಸಿತವೃತ್ತಿಯನ್ನು ವ್ಯಕ್ತಗೊಳಿಸುತ್ತದೆ. ಮಾರಾಟಗಾರರಲ್ಲಿ ಕೆಲವರು ಬಿಳಿಯ ಕೂದಲಿನವರೂ ಇರುತ್ತಾರೆ. ಈ ಮುದುಕ-ಮುದುಕಿಯರು, ಗಿರಾಕಿಗಳನ್ನು ನುಮತೆಯಿಂದ "ಲೇಲೋ ಬೇಟಾ! ಖಾಲೋ ಬೇಟಽಽ." ಎಂದೂ—ಭಯ್ಯಾ, ಬಹೆನ್ ಎಂದೂ—ವಾತ್ಸಲ್ಯಪೂರ್ಣವಾಗಿ ಹೇಳುತ್ತ, ಭಾವವೀಣೆಯ ತಂತಿಯನ್ನು ಮೀಟುವರು. ಇಲ್ಲಿಯ ಮಾರುವವರು ಬಡವರಾಗಿದ್ದರೂ ಸೌಜನ್ಯ ಶೀಲರು.

ಹಣ್ಣುಗಳ ವಿಭಾಗದಲ್ಲಿ ಸೀಬೆಹಣ್ಣು, (ಪೇರಲ) ಬಾಳೆಹಣ್ಣು, ತರತರದ ಸೇಬು, ದಾಳಿಂಬ, ಸಂತ್ರಿ, ಕಿತ್ತಳೆ, ಮೋಸಂಬಿ, ಬೋರೆಹಣ್ಣು, ನೀಲದಹಣ್ಣು, ರಸಬೇರಿ, ಪಪಾಯಿ, (ಪರಂಗಿ ಹಣ್ಣು), ದ್ರಾಕ್ಷಿ, ಚಿಕ್ಕು, ತರತರದ ಬೆರೀಕಾಯಿ (Pears), ಬೇಸಗೆಯಲ್ಲಿ ವಿಧವಿಧವಾದ ಮಾವಿನ ಹಣ್ಣುಗಳು, ಚಳಿಗಾಲದಲ್ಲಿ ಸೀತಾಫಲ.... ಇತ್ಯಾದಿ.... ಇನ್ನೂ ತರತರದ ಹಣ್ಣುಗಳನ್ನು ಕಾಣಬಹುದು. ವೀಳ್ಯದೆಲೆಗಳಿಗಾಗಿಯೇ ಒಂದು ಬೇರೆ ವಿಭಾಗವಿದೆ. ಉತ್ತರ ದೇಶದ ಜನರು (ಹೆಂಗುಸರು ಕೂಡ) ಹೆಚ್ಚಾಗಿ "ಬೀಡಾ" ತಿನ್ನುವುದರಿಂದ, ಎಲೆ ಮಾರಾಟಗಾರರ ಒಂದು ಸಾಲನ್ನೇ ಇಲ್ಲಿ ಕಾಣಬಹುದು. ಇಲ್ಲಿಯ ಸೀಬೆಯ ಹಣ್ಣು ಪ್ರಸಿದ್ಧವಾದುದು. ಒಂದೊಂದು ಹಣ್ಣು ಒಂದು ಪೌಂಡು ತೂಕ! ಹೊರಗಿನ ಬಣ್ಣ ಬಂಗಾರ, ಒಳಗೆ ಕೆಂಪು ಇಲ್ಲವೇ ಬಿಳಿಯ ಬಣ್ಣ. ಒಳಗೆ

ಅವಶ್ಯ ಸಂಗ್ರಹಿಸಲೇ ಬೇಕಾದ ಪುಸ್ತಕ

ನಮ್ಮ ರಾಜ್ಯಘಟನೆ

(ಲೇಖಕ: ಶೀ. ಗಲಗಲಿ)

ಬೆಲೆ: ೧೫ ಆಣೆಗಳು

ಇಂದಿನ ಪರೀಕ್ಷೆಯ ಹೊಸ ಧೋರಣೆಯಂತೆ ಪುಸ್ತಕ ರಚಿಸಲಾಗಿದೆ. ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಎಲ್ಲ ವಿಷಯಗಳನ್ನು, ಮಕ್ಕಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ವಿವೇಚಿಸಲಾಗಿದೆ. ಪ್ರತಿ ಪ್ರಕರಣದ ಕೊನೆಗೆ ಉಪಯುಕ್ತ ಹಾಗೂ ಮಹತ್ತ್ವವ ಪ್ರಶ್ನೆಗಳನ್ನೂ ಕೊಟ್ಟಿದೆ. ಕಾರಣ ಈ ಪುಸ್ತಕವನ್ನು ಪ್ರಾ. ಶಾ. ಪ್ರ. ಪ. ಮತ್ತು ಎಸ್. ಎಸ್. ಸಿ. ಪರೀಕ್ಷೆಯ ವಿದ್ಯಾರ್ಥಿಗಳು ಕೂಡಲೆ ಸಂಗ್ರಹಿಸುವುದು ಒಳ್ಳೆಯದೆಂದು ಬೇರೆ ಹೇಳಬೇಕಿಲ್ಲ.

ಇಂದೇ ನಿಮ್ಮ ಪ್ರತಿ ತರಿಸಿಕೊಂಡು ಯಶವನ್ನು ಗಳಿಸಿರಿ!

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಸಿಕ್ಕುವುದು.

ಆಕಳವಾಡಿ ಬುಕ್‌ಡಿಪೋ, ಧಾರವಾಡ

ಮಾಡಿದ್ದಾಗಿ ಅವರು ಹೇಳಿದರು. ಅವರು ಹೇಳಿದ್ದು ಸರಿಯಾಗಿತ್ತ

ಬಿಡಿ ಇಷ್ಟು ಬೇಗ ಹೊರಟುಬಿಟ್ಟರೆ ಹೇಗೆ? ಇನ್ನೂ ಸ್ವಲ್ಪ ಹೊತ್ತು ಇರಿ. ಮಾತನಾಡೋಣ. ನಾನು ಒಬ್ಬಳೇ ಇದ್ದೇನೆ. ಬೋರಾಗುತ್ತದೆ. ಇನ್ನೂ ಸ್ವಲ್ಪ ಹೊತ್ತು ಇರಿ. ಮಾತನಾಡೋಣ. ನಾನು ಒಬ್ಬಳೇ ಇದ್ದೇನೆ. ಬೋರಾಗುತ್ತದೆ.

ಅವಳ ಮೊದಲ ಮಾತಿಗೇ ಮನಸ್ಸು ಚಂಚಲವಾಯಿತು. ಅವಳ ಮಾತಿನಲ್ಲಿ ಅಡಗಿದ್ದ ಆಹ್ವಾನ ಅವನಿಗೆ ಅರ್ಥವಾಗಿತ್ತು. ಅವಳ ಕಣ್ಣುಗಳಲ್ಲಿ ಅವನು ಕಂಡಿದ್ದ ಭಾವನೆಗಳು ಅವನಿಗೆ ಅರ್ಥವಾಗಿದ್ದವ

ಶ್ರೀಮತಿ ಅಮಲಾ ಕೇತಕರ

(ಆತ್ಮಕಥೆ)*

(ಆಫ್ರಿಕೆಯಲ್ಲಿ ಹುಟ್ಟಿಬೆಳೆದು, ಪುಣೆಯ ಶ್ರೀ. ಜಿ. ವಿ. ಕೇತಕರ (ಲೋಕಮಾನ್ಯ ಟಿಳಕರ ಮೊಮ್ಮಗ) ಅವರನ್ನು ಮದುವೆಮಾಡಿಕೊಂಡ ಶ್ರೀಮತಿ ಅಮಲಾ ಎಂಬವರು, ತಾವು ಹಿಂದೂಧರ್ಮವನ್ನೇಕೆ ಸ್ವೀಕರಿಸಿದರೆಂಬ ಬಗ್ಗೆಯೂ ಶ್ರೀ. ಕೇತಕರ ಇವರನ್ನು ಏಕೆ ಮದುವೆ ಮಾಡಿಕೊಂಡರೆಂಬ ಬಗ್ಗೆಯೂ ಜನತೆಯಲ್ಲಾಂಟಾದ ವಿಪರೀತ ಸುದ್ದಿಗಳನ್ನು ಶಾಂತಗೊಳಿಸುವುದಕ್ಕಾಗಿ, ತಮ್ಮ ಸ್ವಂತ ಹೇಳಿಕೆಯನ್ನು ಕೊಟ್ಟಿರುವರು. ಇಲ್ಲಿ ಕೊಟ್ಟಿರುವುದು ಅವರ ಹೇಳಿಕೆಯ ಸಾರಾಂಶ ಮಾತ್ರ.)

★

"ನಾನು ದಕ್ಷಿಣ ಆಫ್ರಿಕೆಯ ಗ್ರಾಹ್ಯಾಮ್ ಎಂಬ ಪಟ್ಟಣದಲ್ಲಿ, 'ಬೋರ್' ಕುಲದಲ್ಲಿ, ೧೯೦೫ ರಲ್ಲಿ ಹುಟ್ಟಿದೆನು. ನನ್ನ ತಾಯಿ 'ಬೋರ್' ಯುದ್ಧದಲ್ಲಿ 'ಕ್ರೂಗರ್' ಮಂತ್ರಿಮಂಡಳದಲ್ಲಿ ಒಬ್ಬ ಮಂತ್ರಿಯಾಗಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಡಾ. ಗುಸ್ತವ ಪ್ರೆಲರ್ ಎಂಬವರ ಸಹೋದರಿ. ಸ್ವತಃ ನನ್ನ ತಾಯಿಯೂ ಬಹಳ ಪ್ರಸಿದ್ಧಳಾದ ಹೆಣ್ಣುಮಗಳಾಗಿದ್ದಳು. ಅವಳು ಇಂಗ್ಲೆಂಡಿನಲ್ಲಿ "ತೋಟಶಾಸ್ತ್ರ" (Horticulture) ದ ಕಾಲೇಜಿನಲ್ಲಿ ಆರುವರ್ಷ ಅಭ್ಯಾಸ ಮಾಡಿ, ಆ ಶಾಸ್ತ್ರದಲ್ಲಿಯೂ ಜೇನುಸಾಕುವ ಕಲೆಯಲ್ಲಿಯೂ ನಿಪುಣಳಾದವಳು. ಮತ್ತು ಸರಕಾರದಿಂದ ಅವುಗಳನ್ನು ಕಲಿಸುವುದಕ್ಕೆ ನೇಮಿಸಲ್ಪಟ್ಟ ಅಧಿಕಾರಿಯು ನನ್ನ ತಂದೆ. ಅವರು ಅಸ್ಟ್ರೇಲಿಯಾದವರು. ಬ್ರಿಟಿಶರ ಸೇನೆಯಲ್ಲಿ ಸೇರಿ, 'ಲಾರ್ಡ್ ಕಿಚನರ್' ರ ಎ. ಡಿ. ಸಿ. ಅಂದರೆ 'ದೇಹ-ಸಂರಕ್ಷಕ' ರಾಗಿ ಆಫ್ರಿಕೆಗೆ ಬಂದಾಗ, ನನ್ನ ತಾಯಿಯವರನ್ನು ಲಗ್ನಮಾಡಿಕೊಂಡರು. ಆದರೆ ಅವರಿಬ್ಬರ ಮದುವೆ ಸುಖಕರವಾಗಿದ್ದಿಲ್ಲ. ಮೇಲಿಂದಮೇಲೆ 'ಬೋರ್' ಯುದ್ಧದ ಬಗ್ಗೆ ಅವರಿಬ್ಬರಲ್ಲಿ ಮತಭೇದವುಂಟಾಗಿ, ಪದೇಪದೇ ಜಗಳಗಳಾಗುತ್ತಿದ್ದುವು.

ನಾನು ೧೮ ತಿಂಗಳ ಕೂಸು ಇರುವಾಗಲೇ ನನ್ನ ತಾಯಿ ತನ್ನ ಅಭ್ಯಾಸವನ್ನು ಮುಂದುವರಿಸುವುದಕ್ಕಾಗಿ ಇಂಗ್ಲೆಂಡಿಗೆ ಬಂದುಬಿಟ್ಟಳು. ಅಲ್ಲಿ ನಾವು, ನನಗೆ ಎಂಟು ವರ್ಷಗಳಾಗುವ ವರೆಗೆ ಇದ್ದೆವು. ಆ ಕಾಲದಲ್ಲಿ ಚಿಕ್ಕ ಮಕ್ಕಳ ಸಾಹಿತ್ಯದಲ್ಲಿ ಅತ್ಯಂತ ಪ್ರಸಿದ್ಧರಾದ 'ಆರ್ಥರ್ ಮೀ' ಇವರ ಮಗಳು ನಮ್ಮ ತಾಯಿಯ ಮಿತ್ರಳಾಗಿದ್ದಳು. ಇಂಗ್ಲೆಂಡಿನ ಪ್ರಸಿದ್ಧ ಲಾರ್ಡರಾಗಿದ್ದ ಲಾರ್ಡ್ ಹ್ಯಾಲೀ ಲೇ ಎಂಬವರ ಪತ್ನಿಯವರೂ ನನ್ನ ತಾಯಿಯವರೂ ಜೀವದ ಗೆಳತಿಯರು. ನಾನೂ ನನ್ನ ತಾಯಿಯವರೂ ಮರಳಿ ದಕ್ಷಿಣ ಆಫ್ರಿಕೆಗೆ ಬರುವ ವರೆಗೆ ಅವರಲ್ಲಿ ಇದ್ದೆವು.

ದಕ್ಷಿಣ ಆಫ್ರಿಕೆಗೆ ನಾವಿಬ್ಬರೂ ಬಂದಬಳಿಕ, ನನ್ನ ತಾಯಿಯು ನನ್ನನ್ನು ಒಂದು ಪ್ರೊಟಿಸ್ಟಂಟ್ ಸ್ಕೂಲಿಗೆ ಹಾಕಿದಳು. ನನಗೆ ಅಲ್ಲಿ ಧಾರ್ಮಿಕ ಶಿಕ್ಷಣವೂ ಚೆನ್ನಾಗಿಯೇ ದೊರೆಯಿತು. ನನ್ನ ಮನಸ್ಸಿನ ಒಳಭಾಗ ಕೂಡ ಧರ್ಮದ ಕಡೆಗೇ ಇದೆ. ಆದರೆ ನನ್ನ ಧರ್ಮದ ಕಲ್ಪನೆಗೂ ಆ ಮತದವರ ಆಚಾರ-ವಿಚಾರಗಳಿಗೂ ಹೊಂದಿಕೆಯಾಗಲಿಲ್ಲ ಧರ್ಮದ ಒಳತಿರುಳನ್ನು ತಿಳಿಯುವುದರ ಕಡೆಗೆ ನನ್ನ ಪ್ರವೃತ್ತಿ. ಆದಕಾರಣ, ನನ್ನ ಮನಸ್ಸಿನಲ್ಲಿ ಅನೇಕ ಸಂದೇಹಗಳು ಉದ್ಭವಿಸುತ್ತಿದ್ದುವು. ಆ ಬಗ್ಗೆ ಧೈರ್ಯದಿಂದ ಪ್ರಶ್ನೆಗಳನ್ನು ಕೇಳುವ ದೊಂದು ಚಟವೇ ನನಗೆ ಬಿದ್ದಿತ್ತು. ಒಮ್ಮೆ ನಾನು ಹೀಗೊಂದು ಪ್ರಶ್ನೆ ಕೇಳಿದೆ: "ಪೃಥ್ವಿಯ ಮೇಲೆ ಹೇಗೆ ನಾವು ಇರುವೆವೋ ಹಾಗೆ ಅನೇಕ ಗ್ರಹ ಮುಂತಾದವುಗಳಲ್ಲಿಯೂ ಮನುಷ್ಯರು ಇರಬಹುದೆಂದು ಕೇಳುತ್ತೇನೆ. ಆ ಅನ್ಯಲೋಕಗಳಲ್ಲಿರುವ ಜನರು ಕೂಡ ಸ್ವರ್ಗಾದಿ ಲೋಕಗಳಿಗೆ ಹೋಗುವುದಕ್ಕೆ ಕ್ರೈಸ್ತಿಯನ್ನರೇ ಆಗುವುದು ಅಗತ್ಯವೇ? ಹೇಗೆ?" ಆಗ, ಇಂತಹ ಹುಚ್ಚುಚ್ಚು ಪ್ರಶ್ನೆ ಕೇಳಬಾರದು ಎಂದು ಉತ್ತರ ಬಂದಿತು! ೧೯೧೪ ರ ಸುಮಾರಿಗೆ ನಾನು ಕೊನೆಗೆ ಆ ಪ್ರೊಟಿಸ್ಟಂಟ್ ಪಂಥದ ವಿರುದ್ಧ ಬಹಿರಂಗವಾಗಿ ಎದ್ದುನಿಂತೆ. ಆಗ ಒಂದು ಚರ್ಚಿನಲ್ಲಿ ಉಪದೇಶ ನಡೆದಿರುವಾಗ, ಜರ್ಮನ್ ಜನರ ವಿರುದ್ಧ ಸಿಕ್ಕುಸಿಕ್ಕಂತೆ ಉಪದೇಶ ನಡೆಯಿತು. ನಾನು ಆಗ ಕೇಳಿದೆ: "ಜರ್ಮನಿಯಲ್ಲಿ ಕೂಡ, ಸಜ್ಜನರು ಇರುವರಲ್ಲವೆ? ಅವರೆಲ್ಲರನ್ನೂ ನಾಶ ಮಾಡಬೇಕೆಂದು ನೀವು ಉಪದೇಶಿಸುವುದು ಹೇಗೆ ಸರಿಯಾದೀತು? ಅಲ್ಲಿ ಚಿಕ್ಕಚಿಕ್ಕ ಎಳೆಯ ಮಕ್ಕಳನ್ನೂ ಕೊಲ್ಲಬೇಕೆಂದು ಉಪದೇಶಿಸುವುದು ಯಾವ ನ್ಯಾಯ?" ಅರ್ಥಾತ್, ಆಗಿನಿಂದ ಆ ಪಂಥದ ವಿರುದ್ಧ ನನ್ನ ವಿಚಾರಗಳು ಪಕ್ವವಾಗಿ ನಾನು ಆ ಪಂಥವನ್ನು ಬಿಟ್ಟು ರೋಮನ್ ಕ್ಯಾಥೋಲಿಕ್ ಪಂಥವನ್ನು ಸ್ವೀಕರಿಸಿದೆ. ಆಗ, ನನಗೆ ೧೨ವರ್ಷ ಮಾತ್ರ. ಆ ಪಂಥದ ತತ್ತ್ವಗಳಿಂದ ನನಗೆ ಸಮಾಧಾನವಾಗಬಹುದೆಂದು ತಿಳಿದಿದ್ದೆ. 'ರಾಜಕಾರಣ'ವನ್ನೂ 'ಧರ್ಮ'ವನ್ನೂ ಅದರಲ್ಲಿ ಬೆರಸಿರಲಿಕ್ಕಿಲ್ಲವೆಂದು ನನ್ನ ಭಾವನೆಯಾಗಿತ್ತು. ನಾನು ಚರ್ಚಿಗೆ ಹೋಗುವ ಕಾರಣವು 'ಪರಮಾತ್ಮ'ನನ್ನು ಕುರಿತು ತಿಳಿದುಕೊಳ್ಳುವುದಕ್ಕಲ್ಲದೆ, ಆ ಜನರ ರಾಜಕೀಯ ಭಾವನೆಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಅಲ್ಲವೇ

---

* ಈ ಕತೆಯನ್ನು ಕನ್ನಡಿಸಿ ಜಯಂತಿಗೆ ಒದಗಿಸಿಕೊಟ್ಟವರು ಪ್ರೊ. ರಂ. ಶ್ರೀ. ಮುಗಳಿಯವರು.

ಸಂ. ಜ.

ಲ್ಲ. ಇದೇ ಕಾಲದ ಸುಮಾರಿಗೆ 'ಪೌರ್ವಾತ್ಯ ತತ್ತ್ವಜ್ಞಾನ'ವೆಂಬು ದೊಂದು ಎಲ್ಲಿಯೋ ಇದೆಯೆಂದು ಕಿವಿಗೆ ಬಿತ್ತು. ಆದಕ್ಕೂ ಮುಂಚೆ ಕೂಡ, ನಾನು ಚಿಕ್ಕವಳಿದ್ದಾಗ, "ಉಸುರ್ ಖಯೂಮ್" ಎಂಬ ಕವಿಯ ಕವನಗಳನ್ನೋದುತ್ತಿದ್ದಾಗ, ನನ್ನ ತಾಯಿಯು ನನ್ನ ಕೈಯೊಳಗಿಂದ ಆ ಪುಸ್ತಕವನ್ನು ಸೆಳೆದುಕೊಂಡು 'ಪೌರ್ವಾತ್ಯ ಪುಸ್ತಕವನ್ನೋದಬೇಡ. ಹಾಗೆ ಮಾಡಿದರೆ ದೇವರೊಳಗಿನ ನಂಬಿಕೆಯನ್ನು ಕಳೆದುಕೊಳ್ಳುವೆ" ಎಂದು ಎಚ್ಚರಿಕೆ ಕೊಟ್ಟದ್ದು ನನ್ನ ನೆನಪಿಗೆ ಬರುತ್ತದೆ. ಅನಳ ಎಚ್ಚರಿಕೆಯ ಪರಿಣಾಮ ನನ್ನ ಮೇಲೆ ವಿಪರೀತವೇ ಆಯಿತು. ಆ ಪೌರ್ವಾತ್ಯ ತತ್ತ್ವಜ್ಞಾನವನ್ನು ತಿಳಿಲೇಬೇಕೆಂಬ ನನ್ನ ಲವಲವಿಕೆ ಹೆಚ್ಚಿತು.

ನನ್ನ ಮೊದಲನೆಯ ಲಗ್ನವಾದಾಗ, ನಾನು ಇನ್ನೂ ರೋಮನ್ ಕ್ಯಾಥೊಲಿಕ್‌ಳೇ ಆಗಿದ್ದೆ. ಇಬ್ಬರು ಗಂಡುಮಕ್ಕಳೂ ಒಬ್ಬ ಹೆಣ್ಣು ಮಗಳೂ ಹುಟ್ಟಿದ್ದರು. ನನ್ನ ಚಿಕ್ಕಮಗಳು ಕೇವಲ ಎರಡು ವರ್ಷದವಳಿರುವಾಗ ಒಂದು ಘಟನೆ ಸಂಭವಿಸಿತು; ಅಂದಿನಿಂದ ನಾನು ಪಥದೊಳಗಿನ ನನ್ನ ವಿಶ್ವಾಸ ಪೂರಾ ಹಾರಿ ಹೋಯಿತು! ಮತ್ತು ನಿಕ್ಕಿ ಆಯುಷ್ಯವನ್ನೆಲ್ಲ ದೇವರ ಮತ್ತು ಧರ್ಮದ ಬಗ್ಗೆ ಜ್ಞಾನಗಳಿಸುವುದರಲ್ಲಿ ಕಳೆಯಬೇಕೆಂಬ ಬುದ್ಧಿ ನನ್ನಲ್ಲಿ ಉತ್ಪಟವಾಯಿತು. ಆಗ, ಕುರಾಣವನ್ನೂ ಬೌದ್ಧ ತತ್ತ್ವಜ್ಞಾನವನ್ನೂ ಮಿಶ್ರ; ಕೊನೆಗೆ ಹಿಂದೂ ತತ್ತ್ವಜ್ಞಾನದ ತತ್ತ್ವಗಳನ್ನೂ ನಿಷ್ಕಾಗಿ ತಿಳಿಕೊಂಡೆ. ಅನೇಕ ಧಾರ್ಮಿಕ ಪುಸ್ತಕಗಳು ನನ್ನ ಪುಸ್ತಕಾಲಯದಲ್ಲಿ ಸಂಗ್ರಹಿಸಲ್ಪಟ್ಟುವು. ಧಾರ್ಮಿಕ ಉಪನ್ಯಾಸಗಳು ಎಲ್ಲಿಯೇ ಇರಲಿ, ಅವನ್ನು ತಪ್ಪದೆ ಕೇಳುತ್ತಿದ್ದೆ. ಆಗ ಶಿಷ್ಯನ ಯೋಗ್ಯತೆಗೆ ತಕ್ಕುಷ್ಟೇ ಗುರುವು ತಿಳಿಸುವನು' ಎಂಬ ಮಾತಿನ ಮರ್ಮ ಹೊಳೆಯಿತು. ಇದೇ ತತ್ತ್ವವು ನನ್ನನ್ನು ಮುಂದೆ ಮುಂದಕ್ಕೆ ಕರೆದೊಯ್ದಿತು. ಹೀಗಿರುವಾಗ ಒಂದು ದಿನ, ಒಂದು ಪುಸ್ತಕದ ಅಂಗಡಿಯಲ್ಲಿ ಪುಸ್ತಕಗಳನ್ನು ಹುಡುಕುತ್ತಿರುವಾಗ 'ಗೀತೆ'ಯು ನನ್ನ ಕಣ್ಣಿಗೆ ಬಿದ್ದಿತು. ಅದನ್ನು ಕೊಂಡು ತಂದೆ. ಓದಿ ಓದಿದಂತೆ, ಅದು ನನ್ನ ಆಯುಷ್ಯದ ದಿಶೆಯನ್ನೇ ಬದಲುಮಾಡಿತು. ಅದರಲ್ಲಿ ನನಗೆ ಬೇಕಾದ ಪ್ರಶ್ನೆಗಳಿಗೆಲ್ಲಕ್ಕೂ ಉತ್ತರಗಳು ದೊರೆತುವು. ಇದೇ ಸುಮಾರಿಗೆ, ನನಗೆ 'ಥಿಯಸಫಿ'ಯ ಹಿಂದೀ ಜನರ ಪರಿಚಯವಾಯಿತು. ಆ ಜನರು ಇಬ್ಬರು ಥಿಯಾಸಫಿಸರ ಹೆಸರುಗಳನ್ನು ಕೊಟ್ಟರು. ಅನಂತರೊಡನೆ ನನ್ನ ಉತ್ಸಾಹವು ಬೆಳೆಯಿತು. ಅವರು ನನಗೆ ಅನೇಕ ತತ್ತ್ವಗಳನ್ನು ತಿಳಿಸಿಕೊಟ್ಟರು. ಅವರಿಬ್ಬರೂ ಈಗಲೂ ನನ್ನ ಮಿತ್ರರೇ ಆಗಿದ್ದಾರೆ. ಅವರ ಸಹವಾಸದ ಮೂಲಕ, ಗೀತೆಯು ಹೆಚ್ಚಿಚ್ಚು ತಿಳಿಯಿತು. ವಿಶೇಷತಃ ಕೆಳಿಗಿನವೆರಡು ಅವತರಣಿಕೆಗಳು ನನ್ನ ಮನಸ್ಸನ್ನು ಬಹಳೇ ಆಕರ್ಷಿಸಿವೆ. ಅವು ಯಾವುವೆಂದರೆ:—

"ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ""

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ"

ಹೀಗೆ ದಕ್ಷಿಣ ಆಫ್ರಿಕೆಯಲ್ಲಿದ್ದಾಗ ಗೀತೆಯನ್ನು ಅಭ್ಯಾಸಮಾಡಿದ ಬಳಿಕ, ಬಲ್ಲಿ ನಾನು ನನ್ನ ಮಕ್ಕಳುಗಳಿಗಾಗಿ ಮಾಡತಕ್ಕ ಅನರ ವಿದ್ಯಾಭ್ಯಾಸ ಮುಂತಾದ ನನ್ನ ಕರ್ತವ್ಯವನ್ನು ಮುಗಿಸಿದ ಕೂಡಲೆ (ಆಗ ನಾನು ವಿಧವೆ), ಹಿಂದುಸ್ಥಾನಕ್ಕೆ ಹೋಗಬೇಕೆಂದು ನಿಶ್ಚಯಿಸಿದೆನು. ಮಕ್ಕಳ ಸಂಬಂಧವಾಗಿ ನಾವು ಮಾಡತಕ್ಕ ಕರ್ತವ್ಯವನ್ನು ಮುಗಿಸಿದ ಮೇಲೆ ವಾನಪ್ರಸ್ಥವನ್ನು ಸ್ವೀಕರಿಸಬೇಕು ಎಂಬುದನ್ನು ಓದಿದ್ದೆನು. ಅದಕಾರಣ, ಆ ಮುಂದೆ ಸಾಧನ ಮಾರ್ಗಕ್ಕೆ ಹತ್ತಬೇಕೆಂದು ಗೊತ್ತುಮಾಡಿದೆ. ಈಗ ನನ್ನ ಮಕ್ಕಳೆಲ್ಲರ ವಿದ್ಯಾಭ್ಯಾಸವೆಲ್ಲವೂ ಮುಗಿದಿರುವುದಲ್ಲದೆ, ಅವರು ಆಫ್ರಿಕೆಯಲ್ಲಿ ಒಳ್ಳೇ ಸುಸ್ಥಿತಿಯಲ್ಲಿ ಇರುವರು. ಅನಕಾರಣ, ೧೯೪೪ನೆಯ ದಿಶಂಬರಿನಲ್ಲಿ, ನಾನು ನನ್ನ ಬಲ್ಲಿಯ ನವಕರಿಗೆ ರಾಜೀನಾಮೆ ಕೊಟ್ಟುಬಿಟ್ಟೆ. ಅದೇ ಸುಮಾರಿಗೆ 'ನರ್ಬಾನ್‌ದಂಗೆ'ಗಳೆದ್ದುವು. ಅವೂ ನನಗೆ ಅನೇಕ ತರದ ಪಾಠಗಳನ್ನು ಕಲಿಸಿದುವು. ದಕ್ಷಿಣ ಆಫ್ರಿಕೆಯಲ್ಲಿರುವ ನಿಷ್ಕಾಪ ಹಿಂದೂಜನರಿಗಾದ ಅನ್ಯಾಯಗಳು ನನ್ನ ಮನಸ್ಸನ್ನು ಕರಗಿಸಿದುವು.

೧೯೪೫ನೆಯ ಇಸ್ವಿಯ ಪ್ರಾರಂಭಕ್ಕೆ ನಾನು ಹಿಂದುಸ್ಥಾನಕ್ಕೆ ಬಂದೆ. ಅಲ್ಲಿಂದ ಬಂದಾಗ, ನನ್ನ ಮನಸ್ಸಿನಲ್ಲಿ ಒಂದು ತರದ ಎದೆ-

ತಾಯಂದಿರೆ,

ನಿಮ್ಮ ಮಗುವಿಗೆ

ಸಾಕಷ್ಟು ತಾಯಿ ಹಾಲು ಬೇಕಲ್ಲವೆ?

ಹಾಗಾದರೆ ನೀವು ಈ ದಿನದಿಂದಲೇ

ಜೆನ್-ಓ ಮಿಲ್ಕ್

(GEN-O MILK)

ತೆಗೆದುಕೊಳ್ಳಲು ಪ್ರಾರಂಭಮಾಡಿರಿ!

ನಿಮ್ಮ ಊರಿನ ಕೆಮಿಸ್ಟರಲ್ಲಿ ದೊರೆಯದೆ ಹೋದರೆ
ಕೆಳಗಿನ ವಿಳಾಸಕ್ಕೆ ಬರೆಯಿರಿ.

ಅಜಿತ ಲ್ಯಾಬ್ಸ್. ಲಿ. ಮಿರಜ

ನಾನು ಕುಮಾರಿಯಾಗಿಯೇ ಉಳಿಯುವೆ

(ಸಣ್ಣ ಕತೆ)

ಕು. ಎ. ಜಿ ಪದ್ಮಾ, ಧಾರವಾಡ

●

ಹೆಣ್ಣಿನ ಮದುವೆ ಮಾಡಲೇಬೇಕೆಂಬುದು ಸಮಾಜದ ಒತ್ತಾಯದ ಕಟ್ಟಳೆ; ಆದರೆ ಮದುವೆಗಾದ
ಹೆಣ್ಣುಗಳನ್ನು ಮೆಚ್ಚಿ ಮದುವೆ ಮಾಡಿಕೊಳ್ಳುವ ಗಂಡುಗಳ ಅಭಾವ ಎಲ್ಲೆಲ್ಲಿಯೂ.
ಇಂತಹ ಪರಿಸ್ಥಿತಿಯಲ್ಲಿ, ಮದುವೆಯಾಗದ ಹೆಣ್ಣುಗಳ ಮನಸ್ಸು
ವನಮಾಲೆಯ ಮನಸ್ಸಿನಂತೆ ಕ್ರಾಂತಿಗೆ ಸಿದ್ಧವಾಗಬಹುದಲ್ಲವೆ ?

★

ಹೊರಗಿನಿಂದ ಬಂದ ಗೋಪೀನಾಥರಾಯರು ದಿವಾಣಖಾನೆಯ ಶಿಸ್ತು ನೋಡುತ್ತಲೇ ತಲೆದೂಗಿ, ಆಡಿಗೆಮನೆಯಲ್ಲಿ ಇಣುಕಿ ನೋಡಿ "ಮಾಲಾ, ನಿನ್ನ ಶಿಸ್ತು ಎಲ್ಲಾ ಆಗೇದ ಹೌದಲ್ಲವಾ ? ನೋಡು ಸುತ್ತ ಇನತ್ತ ಬರೋ ವಿದ್ಯಾಧರರಾಯರು Foreign returned (ಪರದೇಶಕ್ಕೆ ಹೋಗಿ ಬಂದವರು) ಇದ್ದಾರ. ಅವರಿಗೆ ಬಹಳ ಫ್ಯಾಶನೇಬಲ್ ಹುಡುಗಿ ಬೇಕಂತ. ಅವರು ನಿನ್ನ ಕೂಡ ಎಲ್ಲಾ ಇಂಗ್ಲೀಷಿನಾಗ ಮಾತಾಡಬಹುದು. ಮತ್ತ ಹೇದರಬೇಡಾಕ ಹಕ. ಸರಿಯಾಗಿ ಉತ್ತರ ಕೊಡು ಅತು" ಎಂದರು. "ಆಗಲಿ, ಅಪ್ಪಾ ಆಗಲಿ. ನೂರಾಕೊಂಬತ್ತೊಂಭತ್ತು ಸಾರೆ ಇಂಥ ಪರೀಕ್ಷಾಕ್ಕೆ ಕೂತು ಕೂತು ಪಡ್ಡುಬಿದ್ದು ಹೋಗೇದ ನನಗ. ಏನೇನು ಶಿಸ್ತು ಮಾಡಬೇಕು ? ನೂರೀ ತೊಳಕೊಂಡು ಸ್ನೋ, ಪೌಡರು ಎಲ್ಲಾ ಹಚ್ಚಿಗೊಂಡು, ಡ್ರೌಲಾಗಿ ಹೆರಳು ಹಕ್ಕೊಂಡು, ಸೀರೀ ಉಟಕೋಬೇಕು ಪ್ರೌದಲ್ಲೂ ? ಏನು, ಎರಡು ಹೆರಳು ಹಕ್ಕೊಂಡು, ಕವ್ಯಾಗ ಡೂಲು ಹಕ್ಕೊಂಡು, ಫ್ರಾಕ್ ತೊಟಗೊಂಡು ನುಡ್ಡಮ್ಮನ ಹಾಂಗ ಆಗಲೇನು ಮತ್ತಕ ? ಹೇಳು." ಎಂದು ಕೇಳಿದಳು ವನಮಾಲೆ. ಅಷ್ಟರಲ್ಲಿ "ಹಾದು ಬಡಕ ಸುಳ್ಳೀ ! ನಿಂದೂ ಭಾಳ ಆಗೇದ, ನಾಲ್ಕು ಅಕ್ಷರ ಕಲಿತಾಳೋ ಇಲ್ಲೋ ಪಾಚಾಳ ಹಾಂಗ ಮಾಡತಾಳ ! ಲಗ್ನ ಆಗೋತನಕಾ ನಾಲ್ಕು ಮಂದಿಗೆ ತೋರಿಸೋದಕ ! ಅದು ಎಲ್ಲೂ ನಡೆಯೋದಕ". ಎಂದು ಕೂಗಿದರು ದೇವರ ಮನೆಯಲ್ಲಿ ಬತ್ತಿಯಿಸ್ತುನ್ನ ಹೊಸೆಯುತ್ತಿದ್ದ ಅಜ್ಜಿ. "ನಾನಾರೆ ಎಲ್ಲಿ ಇಲ್ಲಂದೇನಿ ಅಜ್ಜೀ. ಅಪ್ಪ ಹ್ಯಾಂಗ ಹೇಳತಾನ ಹಾಂಗ ಪಾಟಿರ್ಸಿ ಹಕ್ಕೊಂಡು ೧೯೯ ಸಾರೆ ನಾಟಕಾ ಮಾಡಿಲ್ಲಕ ಈ ಎರಡು ವರ್ಷದಾಗ ?" ಎಂದು ಉತ್ತರಿಸಿದಳು ಮಾಲಾ ನಿರ್ವಿಕಾರ ಮುದ್ರೆಯಿಂದ.

* * * *

ವನಮಾಲಾ ಮ್ಯಾಟ್ರಿಕ್ ಆಗಿ ೨ ವರ್ಷಗಳಾಗಿದ್ದುವು. ಅವಳ ಪರೀಕ್ಷೆ ಮುಗಿದಂದಿನಿಂದ ಇಂದಿನ ವರೆಗೆ ಅವ್ಯಾಹತವಾಗಿ ಸಂಶೋಧನೆಯ ಕೆಲಸವನ್ನು ನಡಿಸಿಯೇ ಇದ್ದರು ಗೋಪೀನಾಥರಾಯರು. ಪ್ರಕೃತಿಯಿಂದ ಸುದೃಢಳೂ, ತೀಕ್ಷ್ಣಬುದ್ಧಿಯವಳೂ ಆದ ವನಮಾಲೆಯ ಒಂದೇ ಒಂದು ತಪ್ಪು ಎಂದರೆ ಆಕೆಯ ಕಪ್ಪು ಬಣ್ಣ. ಮದುವೆಯ ಪೇಟೆಯಲ್ಲಿ ಮಾಲು ಖರ್ಚಾಗಬೇಕಾದ ಎರಡು ಮಹತ್ತ್ವದ ಗುಣಗಳು ಅವಳಲ್ಲಿ ಇರಲಿಲ್ಲ. ಒಂದು ಬಳಿಯ ಬಣ್ಣ; ಎರಡನೆಯದೆಂದರೆ ಕಪ್ಪು ಇದ್ದರೂ ಆ ಕಪ್ಪು ಬಣ್ಣವನ್ನು ಮುಚ್ಚುವ ಶಕ್ತಿಯಿದ್ದ ಹಣ. ಉಳಿದ ಗುಣಗಳಿದ್ದರೂ ಅವುಗಳಿಗೆ ಸಿಗುವ ಬೆಲೆ ತೀರ ಕಡಿಮೆ. ಹೀಗಾಗಿ ಪ್ರತಿಸಲ ಹುಡುಗಿ ಕಪ್ಪು ಎನಿಸಿಕೊಂಡು, ಅವಳ ಮನಸ್ಸು ಬಹಳ ಉದಾಸೀನವಾಗಿತ್ತು. ಜನ್ಮದಿಂದ ಇಂದು ಮುಂಜಾನೆಯಿಂದ ಎಲ್ಲರ ಬಾಯಿಂದ ವಿದ್ಯಾಧರನ ಹೊಗಳಿಕೆಯನ್ನು ಕೇಳುತ್ತಿದ್ದರೂ ಅವಳ ಮನಸ್ಸು ಆ ಕಡೆಗೆ ತಿರುಗಲೇ ಇಲ್ಲ. ಯಾಂತ್ರಿಕವಾಗಿಯೇ ತನ್ನ ಎಲ್ಲ ಕೆಲಸವನ್ನು ಸಾಗಿಸಿದ್ದಳು.

ನಿತ್ಯದಂತೆ ಇಂದು ಕೂಡ ಫಲಾಹಾರದ ವ್ಯವಸ್ಥೆಯನ್ನು ಮಾಡಿ, ಯಾಂತ್ರಿಕವಾಗಿಯೇ ತನ್ನ ಅಲಂಕಾರವನ್ನು ಮಾಡಿಕೊಂಡು, ಯಾವುದೋ ವಿಚಾರದಲ್ಲಿ ಮಾಲಾ ಕುಳಿತಿದ್ದಳು. ಅಷ್ಟರಲ್ಲಿ ಅವಳ ತಮ್ಮ ಮಾಧು ಬಂದು "ಅಕ್ಕಾ, ಅಕ್ಕಾ ಅವರೆಲ್ಲಾ ಬಂದರಕ ! ಇನ್ನೂ ಏನು ಮಾಡಲಿಕ್ಕೆ ಹತ್ತೀದಿ ನೀನು ? ಚಹಾಕ್ಕ ಎಸರು ಬಂದು ಹೊಯ್ದಾಡಲಿಕ್ಕೆ ಹತ್ತೇದ. ನೀವಿನ್ ತಪನ್ ಮಾಡಲಿಕ್ಕೆ ಹತ್ತೀದ್ಯೋ ಏನು ? ಎಷ್ಟು ಕಪ್ಪು ಎಸರು ಇಟ್ಟೀದಿಗ್ಹೇಳ್ಯಾರೆ ಹೇಳು. ನಾನಾರೆ ಮುಂದಿನ ಕೆಲಸಾ ಮಾಡ್ತೇನಿ" ಒಂದೇ ಉಸುರಿನಲ್ಲಿ ನುಡಿದ. "ಐದು ಕಪ್ಪು ಎಸರು ಇಟ್ಟೀನಿ ನೋಡು" ಇಷ್ಟೇ ಹೇಳಿ ಮತ್ತೆ ವಿಚಾರದಲ್ಲಿ ಮುಳುಗಿದಳು ಮಾಲಾ

ಅಷ್ಟರಲ್ಲಿ ಎಲ್ಲರೂ ಬಂದರು. ವಿದ್ಯಾಧರನು ಒಳ್ಳೇ up-to-date ಡ್ರೆಸ್ಸಿನಲ್ಲಿ ತನ್ನ ಗೆಳೆಯನ ಸಂಗಡ ಬಂದನು. ತಂದೆಯ ಕೈಗೆ ಒ ಕೊಟ್ಟು, ವನಮಾಲೆಯು ಕೂಡ ತನಗಾಗಿ ಕಾದಿರಿಸಿದ ಸನದ ಮೇಲೆ ಬಂದು ಕುಳಿತಳು. ಸಭೂಪರೀಕ್ಷೆಗೆ ಸುರುವಾಯಿತು. ವಿದ್ಯಾಧರನು Foreign returned ಇದ್ದುದರಿಂದ, ಇಂಗ್ಲೀಷಿನಲ್ಲಿಯೇ ಪರೀಕ್ಷೆಯನ್ನು ನಡೆಯಿಸಿದನು. "May I know your name please? (ದಯವಿಟ್ಟು, ನನಗೆ ನಿಮ್ಮ ಹೆಸರನ್ನು ತಿಳಿಸುವಿರಾ?" "May I know your qualifications? (ನಿಮ್ಮ ಶಿಕ್ಷಣ ಎಷ್ಟು ಆಗಿದೆ ತಿಳಿಸುವಿರಾ). " "May I know the number of languages you know? (ನಿಮಗೆ ಎಷ್ಟು ಭಾಷೆಗಳು ಬರುವವೆಂಬುದನ್ನು ತಿಳಿಸುವಿರಾ?" "May I know whether you know music? (ನಿಮಗೆ ಸಂಗೀತ ಬರುತ್ತಿದೆಯೋ)". "May I know whether you know dancing? (ತಮಗೆ ನೃತ್ಯಕಲೆಯು ಬರುತ್ತಿದೆಯೋ)." "May I know your philosophy about married life? (ವೈವಾಹಿಕ ಜೀವನದ ಬಗ್ಗೆ ತಮ್ಮ ವಿಚಾರಗಳೇನು" ಇವೇ ಮೊದಲಾದ ನಿರಾರು ಪ್ರಶ್ನೆಗಳು ಬಿಲ್ಲಿನಿಂದ ಬಿಟ್ಟ ಬಾಣದಂತೆ ಬಂದು ಅವನ್ನು ಗಾಸಿ ಮಾಡುತ್ತಿದ್ದುವು. " I will not let you know anything (ನಿಮಗೆ ಏನನ್ನೂ ಹೇಳುವ ಇಚ್ಛೆಯಿಲ್ಲ)" ಎಂದು ಳೆ ಎದ್ದು ಬಿಡಬೇಕೆಂದೆನಿಸಿತು ವನಮಾಲೆಗೆ; ಆದರೂ ಅದೆಲ್ಲವನ್ನೂ ಹೇಗೋ ತಡೆದುಕೊಂಡು, ತನ್ನ ಪರೀಕ್ಷೆಯ ಎಲ್ಲ ಪ್ರಶ್ನೆಗಳಿಗೂ ಸರಿಯಾಗಿ ಉತ್ತರ ಕೊಟ್ಟಳು. ಆದರೆ ಎಂದಿನಂತೆ ಹುಡುಗಿಯ ಬಣ್ಣ ಕಪ್ಪು' ಎಂದು ಹೇಳಿ, ಅವರು ತಮ್ಮ ಹಾದಿಯನ್ನು ಹಿಡಿದರು.

ಇಂದು ಗೋಪೀನಾಥರಾಯರು ಬಹಳ ನೊಂದುಕೊಂಡಿದ್ದರು. ಲ್ಲಿ ನೋಡಿದರೂ ಇದೊಂದೇ ಕುಂದು ಅವಳ ಮದುವೆಗೆ ಅಡ್ಡ ಬರುತ್ತಿತ್ತು. ಇಷ್ಟು ದಿವಸ ಎಲ್ಲ ಶ್ರಮವೂ ವ್ಯರ್ಥವೇ ಆಗಿತ್ತು. ಷ್ಟರಲ್ಲಿ ವನಮಾಲೆಯು ಹೊರಗೆ ಬಂದಳು. ಅವಳ ಮುಖವನ್ನು ೋಡುತ್ತಲೇ ಗಾಬರಿಯಾದರು ರಾಯರು. "ಅಪ್ಪಾ, ಇನ್ನು ಮೇಲೆ Show-business ಸಾಕು ಮಾಡು. ನಿನಗೂ ತ್ರಾಸ ಬೇಡ. ನಗೂ ಮನಸ್ತಾಪ ಬೇಡ. ನಾಳಿನ ಜೂನ್ ತಿಂಗಳಿಂದ ನಾನು ಲೇಜಿಗೆ ಹೋಗ್ತೇನಿ, ಮತ್ತು B. A. ಆಗಿ ಎಲ್ಲಾ ಯರೇ ಒಂದು ಕರೀ ಮಾಡಿಕೊಂಡು ಹೊಟ್ಟೇ ತುಂಬಿಕೊಂಡು ಇರತೇನಿ. ದಕ್ಷಿಣೆ ರೊಕ್ಕಾನಾ ಕಲೀಲಿಕ್ಕೆ ಕೊಟ್ಟುಬಿಡು ಅತು." ಎಂದಳು ವನಮಾಲೆ ನಿರ್ಧಾರದಿಂದ. ರಾಯರ ಮನಸ್ಸು ಎಷ್ಟೇ ಹಿಂಜರಿದರೂ, ಕಡೆಗೆ ಅವಳ ನಿರ್ಧಾರಕ್ಕೇನೇ ಒಪ್ಪಿತು. ಯಾಕೆಂದರೆ ಈ ವರ್ಷಗಳಲ್ಲಿ ಅವಳ ಸಲುವಾಗಿ ೨೦೦ ಕಡೆಗೆ ನೋಡಿದ್ದರು, ೦ ಕಡೆಗೆ ಕೇಳಿದ್ದರು. ಎಲ್ಲರೂ ಒಂದೇ ಕಾರಣದ ಸಲುವಾಗಿ ಳನ್ನು ನಿರಾಕರಿಸಿದ್ದರು. ಅದೆಂದರೆ ಅವಳ ಬಣ್ಣ. ಅಜ್ಜಿ ಕೂಡ ಮೊದಲು ಸ್ವಲ್ಪ ತಕರಾರು ಮಾಡಿದರೂ, ಕಡೆಗೆ ತಮ್ಮ ಸಮ್ಮತಿಯನ್ನು ಕೊಟ್ಟರು.

* * * *

ವನಮಾಲೆಯ ಶಿಕ್ಷಣ ಭರದಿಂದ ಸಾಗಿದೆ. ಎಲ್ಲವನ್ನೂ ಮರೆತು ಮನಸ್ಸನ್ನು ಅಭ್ಯಾಸದಲ್ಲಿಯೇ ತೊಡಗಿಸಿದ್ದಾಳೆ ವನಮಾಲೆ. ಮೊದಮೊದಲು ಕಾಲೇಜಿನಲ್ಲಿ ಕೂಡ ಅವಳ ಬಣ್ಣದ ಟೀಕೆಗಳು ಆಗಾಗ ಕೇಳಬರುತ್ತಿದ್ದರೂ, ಮುಂದೆ ಒಬ್ಬ Scholar (ಜಾಣ ವಿದ್ಯಾರ್ಥಿನಿ) ಎನಿಸಿಕೊಂಡುದರಿಂದ, ಈ ಕುತ್ಸಿತ ಟೀಕಾಕಾರರು ಅವಳ ಸಮೀಪ ಹಾಯಲು ಕೂಡ ಹೆದರಹತ್ತಿದರು.

* * * *

ಇಂದು ವನಮಾಲೆಗೆ ಎಂದೂ ಇಲ್ಲದ ಆನಂದ. ಯಾಕೆಂದರೆ ಇಂದು ಅವಳ B. A. ಫಲಿತಾಂಶ ತಿಳಿದಿದೆ. ಅವಳು B. A. ಪರೀಕ್ಷೆಯಲ್ಲಿ ಗಣಿತ ವಿಷಯವನ್ನು ತೆಗೆದುಕೊಂಡು, ವಿಶ್ವವಿದ್ಯಾಲಯಕ್ಕೆ ಮೊದಲನೆಯ ವರ್ಗದಲ್ಲಿ ಮೊದಲಿಗಳಾಗಿ ಪಾಸಾಗಿದ್ದಾಳೆ. ಅವಳಿಗೆ Fellow ship (ಶಿಷ್ಯವೃತ್ತಿ) ಸಿಗುತ್ತಿದ್ದುದರಿಂದ, ಮುಂದಿನ ವಿದ್ಯಾಭ್ಯಾಸಕ್ಕೆ ಯಾವ ತೊಂದರೆಯೂ ಇರಲಿಲ್ಲ. ಆದರೆ ಅಜ್ಜಿಯ ತಕರಾರು ಮಾತ್ರ ನಡೆದೇ ಇತ್ತು.

ಕುಡಿಮಿಂಚು

(ದೃಶ್ಯಸಂಕಲನ)

ಬರೆದವರು :

ಶ್ರೀ. ಎನ್. ಎಸ್. ಗದಗಕರ, ಬಿ. ಎ.

ಧಾರವಾಡ

ಇದರಲ್ಲಿ

- ಒಂದು ಏಕಾಂಕ ದೃಶ್ಯ.
- ಮೂರು ಚುಟುಕು ದೃಶ್ಯ.
- ಐದು ನಾಟ್ಯಛಟಾ.

ಸಂಕಲನಗೊಂಡಿವೆ.

ಶ್ರೀರಂಗರ

ವಿಸ್ತೃತವಾದ ಮುನ್ನುಡಿಯನ್ನೊಡಗೊಂಡಿದೆ.

ಕ್ರೌ.ಅ. ೬೪ ಪುಟಗಳು **ಬೆಲೆ ೦-೧೪-೦**

ಮುಖ್ಯ ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ

ಮಧ್ಯಾಹ್ನ, ರವಿವಾರವಾದುದರಿಂದ ಕಾಲೇಜಿಗೆ ಬಿಡುವು. ತಾಯಿ ಮಗ ಮಾತಾಡುತ್ತಿರುವಾಗ "ಅಲ್ಲೋ ಗೋಪು, ಇನ್ನೂ ೨ ವರ್ಷ ಈಕೆ ಕಲಿತರ, ಈಕೀ ಲಗ್ನದ ವಿಚಾರ ಯಾವಾಗ ಮಾಡೋದು?" ಎಂದರು ಅಜ್ಜಿ. "ಅಂವ್ರೆ ನೋಡು ಅವ್ವಾ, ಆ ವಿಚಾರ ಮಾಡೋ ಹಾಂಗs ಇಲ್ಲಾ ಅಂತಾಳ ಆಕಿ!" ಎಂದರು ರಾಯರು. "ಹೌದೋ, ಆಕಿ ಅಂದರ ನೀನೂ ಹಾಂಗs ಮಾಡೋವ ಏನು? ನೋಡು. ಮಧೂನೂ ದೊಡ್ಡವ ಆಗ್ಯಾನ. ನಾಳೆ ಮನ್ಯಾಗ ಬೆಳೆದ ಹುಡಗಿನ್ನ ಇಟಕೊಂಡು, ಅವನದರೇ ಲಗ್ನ ಮಾಡೋದು ಹ್ಯಾಂಗ?" ಎಂದು ಮರುಸವಾಲು ಹಾಕಿದರು ಅಜ್ಜಿ. "ಹ್ಯಾಂಗ ಅಂದರೇನು, ಜೆಲೋತ್ನಾಂಗ ಮಾಡೋದು! ಅಲ್ಲs ಅವ್ವಾ, ನೀನs ನೋಡಲಿಲ್ಲs ಆಕೀ ಸಲುವಾಗಿ ನಾನೂ ಎಷ್ಟು ಪ್ರಯತ್ನ ಪಟ್ಟೆ ಅನ್ನೋದನ್ನ? 'ಹುಡುಗಿ ಕಪ್ಪು-ಹುಡುಗಿ ಕಪ್ಪು' ಅಂತ ಎಲ್ಲಾರೂ ಅಂದರು. ಬಣ್ಣ ಕಪ್ಪು ಆದರ, ಹುಡಗನ್ನೆೀನು ಅರಿವೀ ಗಂಜೀ ಮಾಡತಾರಲ್ಲಾ ಹಾಂಗ, ಆಕನ್ನೇನ ಭಟ್ಟೀ ಒಳಗ ಹಾಕಿ ತರಲ್ಯಾ ಏನು ಮಾಡಲಿ? ಕಲೀತೇನಿ ಅಂತಾಳ. ಇನ್ನೂ ೨ ವರ್ಷ ಕಲೀಲಿ. M. A. ಆದಳಂದರ, ಜೆಲೋ ನೌಕರಿ ಸಿಗತದ. ದೊಡ್ಡ ಸರಕಾರ ಬಂಲಕ್ಕೆ ಹತ್ತತದ. ಅಂದರ ನನ್ನ ಈ ದೊಡ್ಡ ಸಂಸಾರದ ರಥಾನೂ ಸಾಗಿಸಲಿಕ್ಕೆ ಸಹಾಯ ಆಗತದ." ಎಂದರು ರಾಯರು ತಾತ್ಪರ್ಯಸಿನಿಂದ. ಈ ಸಂವಾದವನ್ನು ಕೇಳುತ್ತಿದ್ದ ವನಮಾಲೆಗೆ ಹಿಂದಿನದೆಲ್ಲ ಮತ್ತೆ ನೆನಪು ಆಗಿ, ಹೇಗೆಹೇಗೋ ಆಯಿತು. ಹೀಗೆಯೇ ಮತ್ತೆ ಎರಡು ವರ್ಷಗಳ ಕಾಲ ಸಂದಿತು.

* * *

ಈಗ ವನಮಾಲೆಯು ಸಂಖ್ಯಾಶಾಸ್ತ್ರವನ್ನು (Statistics) ತೆಗೆದುಕೊಂಡು M. A. ಆಗಿದ್ದಾಳೆ. ನೌಕರಿಗೆ ಅರ್ಜಿ ಹಾಕಲಾಗಿ ದಿಲ್ಲಿಯಲ್ಲಿ Asst. Statistician ಎಂದು ಅವಳ ನೇಮಣೂಕು ಆಯಿತು. ಅವಳು ಕೂಡ ಅಷ್ಟು ದೂರ ಹೇಗೆ ಹೋಗಬೇಕು ಎಂದು ಹೆದರದೆ— ಹೋದಳು; ಮತ್ತು ಅಲ್ಲಿಯೇ ಪುಟ್ಟದಾದ ತನ್ನ ಒಂದು ಸಂಸಾರವನ್ನು ಹೂಡಿ ಇರಹತ್ತಿದಳು.

* * *

ವನಮಾಲೆಯು ದಿಲ್ಲಿಗೆ ಬಂದು ಆರು ತಿಂಗಳುಗಳಾದುವು. ಸುಖವಾಗಿ ಇದ್ದಾಳೆ. ಇಲ್ಲಿ ಅವಳ ಊರಿನಲ್ಲಿಯಂತೆ 'ಲಗ್ನವೇಕೆ ಆಗಲಿಲ್ಲ?' ಆಗದಿದ್ದರೆ 'ಏಕೆ? ಏನು?' ಎಂದು ವಿಚಾರಿಸುವವರೇ ಇಲ್ಲ. ಎಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾದವರೇ. ಇನ್ನೊಬ್ಬರ ಗೊಡವೆಗೆ ಹೋಗುವವರೇ ಇಲ್ಲ; ಆದುದರಿಂದ ಈ ಆರು ತಿಂಗಳಿನಲ್ಲಿ, ಒಮ್ಮೆ ಆದರೂ ಅವಳಿಗೆ ತನ್ನ ಊರಿಗೆ ಹೋಗಬೇಕೆಂದೆನಿಸಿರಲಿಲ್ಲ. ತಾನು ಹುಟ್ಟಿದ ಊರು, ತನ್ನ ತಂದೆ, ಅಜ್ಜಿ, ತಮ್ಮ, ತಂಗಿಯಂದಿರನ್ನು ನೋಡಬೇಕೆಂದು ಒಮ್ಮೊಮ್ಮೆ ಎನಿಸಿದರೂ, ಮತ್ತೆ ಅಲ್ಲಿಯ ಸಮಾಜವನ್ನು ನೆನಸಿದರೆ 'ದೇವರೇ, ಅಲ್ಲಿಗೆ ಇನ್ನು ಹೋಗುವುದೇ ಬೇಡ!' ಎಂದೆನಿಸುತ್ತಿತ್ತು. ಅವಳು ಚಿಕ್ಕದಾದ ಒಂದು ಮನೆಯನ್ನು ಬಾಡಿಗೆಗೆ ಹಿಡಿದಿದ್ದಾಳೆ. ಒಂದು ಜೀವಕ್ಕೆ ಬೇಕಾಗುವಷ್ಟು ಸಾಮಾನನ್ನು ಕೊಂಡಿದ್ದಾಳೆ. ಬೆಳಿಗ್ಗೆ ೬ ಗಂಟೆಗೆ ಏಳುವುದು. ಚಹ, ಸ್ನಾನ, ಅಡಿಗೆ, ಊಟ ಎಲ್ಲವನ್ನೂ ಮುಗಿಸಿ ೯ ಗಂಟೆಗೆ ಸರಿಯಾಗಿ ಆಫೀಸಿಗೆ ಹೋದರೆ, ತಿರುಗಿ ಮನೆಗೆ ಬರುವುದು ರಾತ್ರಿ ೮ ಗಂಟೆಗೆ. ಮತ್ತೆ ಅಡಿಗೆ, ಊಟ ಅಲ್ಲದೆ ಬೇರೆ ಕೆಲಸವಿದ್ದರೆ ಮಾಡಿ, ೧೦ ಗಂಟೆಗೆ ಮಲಗುವುದು. ಹೀಗಿತ್ತು ಅವಳ ದಿನಚರಿ. ಇತ್ತೀಚೆಗೆ Ph. D. ಮಾಡಬೇಕೆಂಬ ವಿಚಾರವು ಬರಹತ್ತಿತ್ತು. ಕೊನೆಗೆ ನಿರ್ಧಾರವೂ ಆಯಿತು. ೨ ವರ್ಷಗಳು ಸಂಖ್ಯಾಶಾಸ್ತ್ರವನ್ನು ತೆಗೆದುಕೊಂಡು ಅಭ್ಯಾಸಮಾಡಿ, Ph. D. ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ಪಾಸು ಆದಳು. ಮತ್ತೆ ಆರು ತಿಂಗಳು ಉರುಳಿದುವು.

* * *

ಇಂದು ಅವಳ ಮೇಲಧಿಕಾರಿಗಳಾದ ಶ್ರೀ. ತೆಲಂಗರವರು ನಿವೃತ್ತರಾದರು. ಕಾರಣ ವನಮಾಲೆ ಉದಾಸೀನಳಾಗಿದ್ದಾಳೆ. ದಿಲ್ಲಿಯಲ್ಲಿಯ ಈ ೨ ವರುಷದ ಜೀವನದಲ್ಲಿ ಅವರು ಅವಳಿಗೆ ಬಹಳ ಸಹಾಯ ಮಾಡಿದ್ದರು. ಕೆಲಸದಲ್ಲಿ ಎಷ್ಟೋ ತಪ್ಪು ಆದರೂ ಹಿರಿಯರಂತೆ ತಿಳಿಸಿ ಹೇಳುತ್ತಿದ್ದರು. ಆದರೆ ಅದೇ ಮನಸ್ಸಿನ ಮತ್ತೊಂದು ಮೂಲೆಯಲ್ಲಿ ಮಣಿಕ ಇಣಿಕಿ ಹಾಕುತ್ತಿದೆ. ಯಾಕೆಂದರೆ ನಿವೃತ್ತರಾದ ತೆಲಂಗರವರ ಸ್ಥಾನದಲ್ಲಿ ಶ್ರೀಮಾನ ವಿದ್ಯಾಧರ ರಾಯರು ಬರುವವರಿದ್ದಾರೆ. ಅಂತೂ ಈ ಮಿಶ್ರ ವಿಚಾರಗಳಲ್ಲಿಯೆ ಅವಳು ಶ್ರೀ. ತೆಲಂಗರವರನ್ನು ಬೀಳ್ಕೊಡುವ ಸಮಾರಂಭದ ಗಡಬಿಡಿಯಲ್ಲಿದ್ದಳು. ಅಷ್ಟರಲ್ಲಿ ಶ್ರೀ. ತೆಲಂಗರವರು ವಿದ್ಯಾಧರನನ್ನು ಕರೆದುಕೊಂಡು ಅಲ್ಲಿಗೆ ಬಂದರು. ಮತ್ತು ಇವಳನ್ನು ಕರೆದು "Here is your Assistant statician, Dr. Miss Kulkarni (ಇವರು ಡಾ. ಕುಮಾರಿ ಕುಲಕರ್ಣಿಯವರು; ನಿಮ್ಮ ಸಹಾಯಕ ಸಂಖ್ಯಾಶಾಸ್ತ್ರಜ್ಞರು) ಎಂದು ಅವಳ ಪರಿಚಯವನ್ನು ಮಾಡಿಕೊಟ್ಟರು. 'ಈಗ ೯ ವರ್ಷಗಳ ಹಿಂದೆ ತನ್ನ ಮುಂದೆ ತಲೆಬಾಗಿ ಕೆಳಗೆ ಮಾಡಿಕೊಂಡು ಕುಳಿತುಕೊಂಡು, ಕೇಳಿದ ಪ್ರಶ್ನೆಗಳಿಗೆ Sanacle ನಲ್ಲಿ ನಿಂತ ಕೈದಿಯಂತೆ ನಮ್ರಳಾಗಿ ಉತ್ತರ ಕೊಟ್ಟ ವನಮಾಲೆ ಇವಳೇನೆ? ಎಂದು ಆಶ್ಚರ್ಯದಿಂದ ನೋಡುತ್ತ ನಿಂತ ವಿದ್ಯಾಧರ. ಮತ್ತೆ ಶ್ರೀ ತೆಲಂಗರವರು "He is Mr. Vidydhararao Deshpande, the senior statician of this Office. (ಇವರು ವಿದ್ಯಾಧರ ದೇಶಪಾಂಡೆಯವರು. ಈ ಆಫೀಸಿನ ಮುಖ್ಯ ಸಂಖ್ಯಾಶಾಸ್ತ್ರಜ್ಞರು.)" ಎಂದು ಅವನ ಪರಿಚಯ ಮಾಡಿಕೊಟ್ಟರು. ವನಮಾಲೆಯು ರೂಢಿಯಂತೆ ನಮಸ್ಕರಿಸಿ ತನ್ನ ಕೆಲಸದಲ್ಲಿ ತೊಡಗಿದಳು.

* * *

ಇಂದಿಗೆ ವಿದ್ಯಾಧರನು ಈ ಆಫೀಸಿಗೆ ಬಂದು ೧ ವರ್ಷವಾಯಿತು. ಒಮ್ಮೆಯೂ ಅವರಿಬ್ಬರ ನಡುವೆ ಹಿಂದಿನ ಸಂಗತಿಯ ವಿಷಯ

ಥವಾ ಅವರವರ ಮನೆಯ ಸುಖ-ದುಃಖದ ವಿಷಯ ಮಾತು
ಗಲ್ಲ. ವಿದ್ಯಾಧರನಿಗೆ—ಅವಳು ಹೇಗೆ ಕಲಿತಳು? ಎಲ್ಲಿ ಕಲಿತಳು?
ಂದು ಕೇಳಬೇಕೆಂದು ಎಷ್ಟು ಸಲ ಅನಿಸಿದರೂ, ಅವಳ ಮುಖವನ್ನು
ೋಡುತ್ತಲೇ ಆ ಕುತೂಹಲವೆಲ್ಲ ಓಡಿಹೋಗುತ್ತಿತ್ತು. ಇತ್ತೀಚೆಗೆ
ಒಡಸಿನ ಕೂಡ ಅವಳ ವರ್ತನೆಯೂ ಹಾಗೇ ಆಗಿತ್ತು. ಆದರೆ
ಸಾಲು ಆಫೀಸಿಗೆ ಬರುವಾಗ, ಕೆಲಸ ಮಾಡುವಾಗ, ವಿದ್ಯಾಧರನ
ಮುಖದಲ್ಲಿ ಕಾಣುತ್ತಿದ್ದ ಚಿಂತೆಯ ರೇಖೆಗಳು ಮಾತ್ರ ವನಮಾಲೆಯ
ಕ್ಷ್ಮ ದೃಷ್ಟಿಯಿಂದ ಪಾರಾಗಿ ಹೋಗಲಿಲ್ಲ.

* * * *

ಂದು ಶುಕ್ರವಾರ. ಎಂದಿನಂತೆ ವನಮಾಲೆಯು ಬಂದು ತನ್ನ
ಸನದ ಮೇಲೆ ಕುಳಿತು ಕೆಲಸವನ್ನು ಸುರು ಮಾಡಿದಳು. ಅಷ್ಟರಲ್ಲಿ
ವ್ಯಾಧರನು ಬಂದನು. ಅವನು ಬರುತ್ತಲೇ, ನಿತ್ಯದಂತೆ ನಮಸ್ಕಾರ
ಾಡಿ, ತನ್ನ ಕೆಲಸದಲ್ಲಿ ತೊಡಗಿದಳು. ಸುಮಾರು ೧ ಗಂಟೆಯಾಗಿರ
ಹುದು. ಮೇಲೆ ಕಣ್ಣೆತ್ತಿ ನೋಡುತ್ತಾಳೆ; ಏನನ್ನೋ ಶೂನ್ಯ
ಷ್ಟಿಯಿಂದ ನೋಡುತ್ತ ಕಂಗಾಲಾಗಿ ಕುಳಿತಿದ್ದಾನೆ ವಿದ್ಯಾಧರ.
ಾರೆಯ ಮೇಲೆ ಚಿಂತೆಯ ರೇಖೆಗಳು ಎದ್ದು ಕಾಣುತ್ತಿವೆ.
ಾಟ್ಸೆಯೊಳಗಿನ ಹಸಿವೆ ಮುಖದ ಮೇಲೆ ಎದ್ದು ಕುಣಿಯುತ್ತಿದೆ.
ೋ ಇಂದು ಅವನನ್ನು ನೋಡುತ್ತಲೇ ವನಮಾಲೆಯ ಹೃದಯ
ಗಿತು. ಅಳನ್ನು ಕರೆದು ೨ ಕಪ್ಪು ಚಹ ಮತ್ತು ಫಲಾಹಾರವನ್ನು
ಲು ಹೇಳಿದಳು. ಚಹವು ಬರುತ್ತಲೇ ವಿದ್ಯಾಧರನು ವನ-
ಾಲೆಯ ಆಮಂತ್ರಣಕ್ಕೆ ಒಪ್ಪಿ, ತಂದ ಪದಾರ್ಥಗಳನ್ನೆಲ್ಲ ತಿಂದು
ಗಿಸಿದನು. ಆದರೆ ಅವನ ತಲೆಯಲ್ಲಿಯ ವಿಚಾರಚಕ್ರಕ್ಕೆ ಮಾತ್ರ
ಪೆಯೇ ಇರಲಿಲ್ಲ. ಅಂದಿನ ಘಟನೆಯ ನಂತರ ಎಷ್ಟೋ ದಿನಗಳು
ುಳಿದವು. ನಿತ್ಯದಂತೆ ವಿದ್ಯಾಧರನು ಬಂದು ತನ್ನ ಕೆಲಸವನ್ನು
ಾಡುತ್ತಿದ್ದನು. ಆದರೆ ಒಟ್ಟಿನ ಮೇಲೆ ಅವನ ವರ್ತನೆಯಿಂದ
ನಿಗೆ ಮನೆಯಲ್ಲಿ ಸ್ವಲ್ಪ ಕೂಡ ಸುಖ-ಶಾಂತಿ ಇರಲಿಲ್ಲ—ಎಂಬುದು
ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಇವನ್ನೆಲ್ಲ ನೋಡುತ್ತಿದ್ದ ವನಮಾಲೆಗೆ ಎಷ್ಟೋ ಸಲ ಅವನ
ಷ್ಟಪ, ಚಿಂತೆಯ ಕಾರಣವನ್ನು ಕೇಳಬೇಕು— ಎಂದು ಎನಿಸು-
ತ್ತು; ಆದರೆ ಪುರುಷಸಮಾಜದ ವಿರುದ್ಧ ಬಂಡು ಹೂಡಿದ ಅವಳ
ನ್ನೊಂ ಮನಸ್ಸು, ಸ್ತ್ರೀಸಹಜವಾದ ಈ ವಿಚಾರವನ್ನು
ಮೂಡಿಬಿಡುತ್ತಿತ್ತು. ಕಡೆಗೆ ಕಂಗಾಲಾದ ವಿದ್ಯಾಧರನೇ ಒಂದು
ಾ ಅವಳ ಕೂಡ ಹೃದಯ ಬಿಚ್ಚಿ ಮಾತನಾಡಬೇಕೆಂದು ನಿರ್ಧರಿಸಿ-
ನು. ಯಾಕೆಂದರೆ ದಿಲ್ಲಿಯು ಅವನಿಗೆ ಹೊಸ ಊರು. ಅಲ್ಲಿ ಅವನ
ಸ್ತ-ಮಿತ್ರರಾರೂ ಇರಲಿಲ್ಲ. ತನ್ನ ದುಃಖವನ್ನು ಅನ್ಯರ ಮುಂದೆ
ಾಡಿಕೊಂಡಾಗಲೇ ಅದು ಶಮನವಾಗುವುದಲ್ಲವೇ?

ಂದು ರವಿವಾರ. ಆಫೀಸಿಗೆ ಬಿಡುವು ಇದ್ದರೂ, ಮೇಲಧಿಕಾರಿ-
ಾದ ವಿದ್ಯಾಧರನ ಕರೆ ಬಂದ ಕಾರಣ, ವನಮಾಲೆಯು ಮಧ್ಯಾ-
ಿ ಉರಿಬಿಸಿಲಿನಲ್ಲಿ ಆಫೀಸಿಗೆ ಬಂದಳು. ೨ ತಾಸಿನಲ್ಲಿ ಮಾಡ-
ಬೇಕಾದ ಕೆಲಸವು ಮುಗಿಯಿತು. ಕೆಲಸ ಮುಗಿಯುತ್ತಲೇ, ವನ-
ಮಾಲೆಯು ಹೊರಟುನಿಂತಳು. ಅಷ್ಟರಲ್ಲಿ ವಿದ್ಯಾಧರನು "ಕುಳಿತು
ಕೊಳ್ಳಿರಿ ಮಿಸ್ ಕುಲಕರ್ಣಿ, ಇಷ್ಟೇಕೆ ಅವಸರ? ಸ್ವಲ್ಪ ಹೊತ್ತು
ನಸಬಿಚ್ಚಿ ಮಾತಾಡೋಣ!" ಎಂದನು. "ಇಲ್ಲ, ನನಗೆ ಬೇರೆ
ಕೆಲಸವಿದೆ. ಹೋಗಬೇಕು!" ಎಂದಳು ಬಿಗುವಿನಿಂದ ವನಮಾಲೆ.
"ಕೆಲಸವೇನು ದಿನಾಲು ಇದ್ದದ್ದೇ. ಇಂದು ನಾನು ನಿಮಗೆ ಎಷ್ಟೋ
ಸಂಗತಿಗಳ ವಿಷಯ ಕೇಳಬೇಕಾಗಿದೆ— ಹೇಳಬೇಕಾಗಿದೆ. ಕುಳಿತು-
ಕೊಳ್ಳಿರಿ!" ಎಂದು ಒಳ್ಳೇ ಜುಲುಮೆಮಾಡಿ ಅವಳನ್ನು ಕುಳ್ಳಿರಿಸಿ-
ಕೊಂಡು ಬಿಟ್ಟ ವಿದ್ಯಾಧರ.

ಸ್ವಲ್ಪ ಹೊತ್ತು ಹರಟೆಯಾದ ನಂತರ ವಿದ್ಯಾಧರನು "ಏನು
ನಿಮ್ಮ ಮದುವೆಯ ವಿಚಾರ ಅಲ್ಲಿಯೇ ನಿಂತುಬಿಟ್ಟಿತೋ ಹೇಗೆ?
ನೀವು ಇಷ್ಟು ಕಲಿತುದು ಯಾವಾಗ? ಹೇಗೆ? ಎಲ್ಲಿ?" ಎಂದನು.
"ಇದೇನು? ವಿಪರೀತ ಹಾದಿ ಹಿಡಿಯಿತಲ್ಲಾ ಹರಟೆ!" ಎಂದು-
ಕೊಂಡಳು ವನಮಾಲೆ. ಆದರೂ ತನ್ನ ವಿಚಾರವನ್ನೆಲ್ಲ ಒಮ್ಮೆ
ಹೇಳಿಬಿಡಬೇಕೆಂದೆನಿಸಿತು. ಆಗಲೇ ಈ ಸಮಾಜ ಎಚ್ಚರಗೊಳ್ಳು-
ವುದು ಎಂದು ವಿಚಾರ ಮಾಡಿ, ಹರಟೆಯನ್ನು ಮುಂದುವರಿಸಿದಳು:
"ಅದಿರಲಿ, ಪೇಟೆಯಲ್ಲಿಯ ಹಣ್ಣಿನಕಿಂತ ೧೦೦೦ ಪಟ್ಟು ಹೆಚ್ಚಾಗಿ
ಅರಿಸಿ ನಿಮಗೆ ಬೇಕಾದ ಕನ್ಯೆಯನ್ನೇ ಲಗ್ನವಾದ ನಿಮ್ಮ ಮೋರೆಯ
ಮೇಲೆ ಚಿಂತಾದೇವಿಯೇಕೆ ಸುಳಿದಾಡುವಳು?" ಎಂದು ಸುರು-
ಸವಾಲು ಹಾಕಿದಳು ವನಮಾಲೆ. "ಅದೊಂದು ದೊಡ್ಡ ಕತೆ"
ಎಂದನು ವಿದ್ಯಾಧರ. ಒಂದು ದೀರ್ಘ ನಿಟ್ಟುಸಿರಿನೊಂದಿಗೆ: "ನೀವು
ಕೇಳಲೇಬೇಕಾಗಿದ್ದರೆ ಹೇಳುತ್ತೇನೆ ಕೇಳಿರಿ. ನಿಮ್ಮಂತಹ ಎಷ್ಟೋ
ಹುಡುಗಿಯರನ್ನು ನಿರಾಕರಿಸಿ, ಕಡೆಗೆ ರೂಪಕ್ಕೆ ನಾನು, ದುಡ್ಡಿಗೆ
ನನ್ನ ತಂದೆ ಸುರುಳಾಗಿ, ಒಬ್ಬ ಶ್ರೀಮಂತ ಸುಂದರ ಕನ್ಯೆಯನ್ನೇ
ಲಗ್ನವಾದೆನು. ಅವಳ ಶಿಕ್ಷಣ ಕೂಡ ಸಾಕಷ್ಟು ಆಗಿತ್ತು. ಲಗ್ನ
ಮಂಟಪದಲ್ಲಿ ನನ್ನ ಬಳಿಯಲ್ಲಿ ನಿಂತ ಸರೋಜಳನ್ನು ನೋಡಿದಾಗ,
ಈ ಜಗತ್ತಿನಲ್ಲಿ ನಾನೇ ಧನ್ಯನೆಂದು ತಿಳಿದಿದ್ದೆನು. ಮುಂದಿನ ನನ್ನ
ಆಯುಷ್ಯದಲ್ಲಿ ಇಂತಹ ಕಟು ಅನುಭವಗಳು ಬರಬಹುದೆಂದು ಅಂದು
ನನಗೆ ಕನಸು-ಮನಸಿನಲ್ಲಿಯೂ ಎನಿಸಿರಲಿಲ್ಲ. ಕೋಮಲೆ-ಸುಂದರ-
ಳಾದ ನನ್ನ ಸರೋಜಳು, ಮುರಹಂಕಾರದ—ತನ್ನ ರೂಪ, ಧನದ
ಮದದಿಂದ ಮತ್ತವಾದ ಮೂರ್ತಿ ಎಂದು ಆಗ ನನಗೆ ಎನಿಸಿರಲಿಲ್ಲ.
ಸೌಂದರ್ಯದ ಮತ್ತು ಧನದ ನಿಶೆಯು ಬಹಳ ಕಾಲದ ವರೆಗೆ
ಉಳಿಯಲಿಲ್ಲ. ಆಗಬೇಕಾದುದು ಆಯಿತು. ನಮ್ಮದು ಸಿರಿವಂತ
ಮನೆತನ ಅಲ್ಲ. ಆದರೂ ನನ್ನ ತಾಯಿಯು, ಅವಳಿಗೆ ರೂಢಿ ಇಲ್ಲ-
ವೆಂದು ಎಂದೂ ಯಾವ ಕೆಲಸವನ್ನೂ ಹೇಳುತ್ತಿರಲಿಲ್ಲ. ಎಲ್ಲ
ಮನೆಗೆಲಸಗಳನ್ನೂ ತಾನೇ ಮಾಡುತ್ತಿದ್ದಳು. ಆಗ ನನ್ನ ತಾಯಿಯ
ಕೂಡ ಇವಳ-ಕಲಹ ತಪ್ಪಲಿಲ್ಲ. ಹೋಗಲಿ, ನನ್ನ ಸಲುವಾಗಿ
ಅವರಿಗೇಕೆ ತ್ರಾಸು—ಎಂದು ತಿಳಿದು, ಪ್ರೀತಿಯ ತಂದೆ-ತಾಯಿ-
ಗಳನ್ನು ಬಿಟ್ಟು ಅವಳೊಂದಿಗೆ ಬೇರೆ ಇರಹತ್ತಿದೆ. ಆದರೆ ಈಗ
ಕೆಲಸದವರ ಕೂಡ ಜಗಳ ಸುರು ಆಯಿತು. ಸ್ವಲ್ಪದರಲ್ಲಿ ಹೇಳುವು-

ಜಯಂತಿಗೆ ಚಂದಾದಾರರಾಗಿರಿ!

●

ಮುಂಬಯಿ, ಮೈಸೂರು, ಮದರಾಸು,

ಹೈದರಾಬಾದ್— ಎಲ್ಲ ಸರಕಾರದ ವಿದ್ಯಾಶಾಖೆಯ

ಮುಖ್ಯಾಧಿಕಾರಿಗಳಿಂದ ಮನ್ನಣೆ ಪಡೆದಿರುವ

ಜಯಂತಿಯನ್ನು

ಎಲ್ಲ ಮಿಡಲ್‌ಸ್ಕೂಲ್, ಹೈಸ್ಕೂಲ್, ಕಾಲೇಜುಗಳಿಗೂ

ತರಿಸಿಕೊಳ್ಳಬೇಕು.

ವ್ಯ. ಜ. ಥಾ.

ದೆಂದರೆ, ಅವಳೊಬ್ಬ ಹುಟ್ಟಾರನ ಮಗಳು. ಜಗತ್ತಿನಲ್ಲಿ ತಾನೇ ಶ್ರೇಷ್ಠಳು ಮತ್ತು ಸುಖವಾಗಿ ಇರಲು ಯೋಗ್ಯಳು— ಎಂದು ಅವಳ ವಿಚಾರ. ಅವಳ ಮುಂದೆ ನಾನೂ ಕೂಡ ಕಸವ ಕಡ್ಡಿ. ಇಂಥ ಹೆಣ್ಣಾನ್ನು ಕಟ್ಟಿಕೊಂಡು ಈಗ ೫ ವರ್ಷ ತೊಳಲಾಡಿದ್ದೇನೆ. ನನ್ನ ದಾಂಪತ್ಯ ಜೀವನದ ಈ ೫ ವರ್ಷಗಳ ಅವಧಿಯಲ್ಲಿ, ಸುಖವಾಗಿ ಉಂಡು ಆನಂದದಿಂದ ಆಫೀಸಿಗೆ ಬಂದ ದಿನಗಳು ತೀರ ಕಡಿಮೆ. ರೂಪವಲ್ಲ, ಧನವಲ್ಲ; ಅದರೆ ಸದ್ಗುಣವೊಂದೇ ದಾಂಪತ್ಯಜೀವನದಲ್ಲಿ ಸುಖವನ್ನು ಕೊಡಬಲ್ಲ ಸಂಜೀವಿನಿ....ಎಂದು ಈಗ ನನಗೆ ತಿಳಿದಿದೆ" ಎಂದು ತನ್ನ ಕಥೆ ಮುಗಿಸಿದನು ವಿದ್ಯಾಧರ ಖಿನ್ನವದನನಾಗಿ.

ಸ್ವಲ್ಪ ಹೊತ್ತಿನ ನಂತರ ಮತ್ತೆ ಚೇತರಿಸಿಕೊಂಡು ಸುರು ಮಾಡಿದ: "ಇರಲಿ, ನನ್ನ ಪ್ರಶ್ನೆಗಳಿಗೆ ಉತ್ತರವನ್ನೇ ಕೊಡಲಿಲ್ಲವಲ್ಲ ನೀವು?" ಎಂದು.

ಆಗ ವನಮಾಲೆಯು ತನ್ನ ಉಪನ್ಯಾಸವನ್ನು ಪ್ರಾರಂಭ ಮಾಡಿದಳು: "ನಾನು ನನ್ನ ಜೀವನದ ಜೊತೆಗಾರನನ್ನು ಹುಡುಕುವುದರ ಸಲುವಾಗಿ, ನನ್ನ ಎಲ್ಲ ಸ್ವಾಭಿಮಾನವನ್ನೂ ಬದಿಗಿಟ್ಟು ೨೦೦ ಸಲ, ನಂಬಿಗೆಯ ನಾಯಿಯಂತೆ, ಹೇಳಿದವರ ಮುಂದೆ ಕುಳಿತು, ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟು ಕಡೆಗೆ 'ಹುಡುಗಿ ಕಪ್ಪು' ಎಂಬ ಟೀಕೆಗಳನ್ನು ಕೇಳಿ ಸಹನೆ ಮಾಡಿದ್ದೇನೆ. ಆ ಟೀಕಾಕಾರರ್ನಾಲ್ಕನೆಯದು. ನಿಮ್ಮ ಅಭಿಪ್ರಾಯವನ್ನು ಕೇಳುತ್ತಲೇ ನಾನು ನನ್ನ ವಿಚಾರವನ್ನು ಸ್ಥಿರಪಡಿಸಿದೆ. ಇನ್ನು ಯಾರ ಮುಂದೆಯೂ ಈ ನಾಟಕದ ಸಲುವಾಗಿ ಅಭಿನಯ ಮಾಡುವುದಿಲ್ಲ. ಕಲಿತು ನನ್ನ ಹೊಟ್ಟೆಯನ್ನು ನಾನು ತುಂಬಿಕೊಳ್ಳಬೇಕು ಎಂದು ನಿಶ್ಚಯಿಸಿದೆನು. ಅದರಂತೆಯೇ ಕಲಿತು M. A., Ph. D. ಆದೆನು. ಅಂದಿನಿಂದ ನಾನು— ಪುರುಷಜಾತಿಯನ್ನೇ ನಂಬಬಾರದು. ಅದೊಂದು ಸಮಾಜದಲ್ಲಿಯ ಭಯಂಕರ ವಿಷವುಳ್ಳ ಪ್ರಾಣಿಯೆಂದು ತಿಳಿದೆ. ಅಂದಿನಿಂದ ಇಂದಿನವರೆಗೆ ನಾನು ಯಾವ ಪುರುಷನ ಕೂಡ ಆತ್ಮೀಯ ಭಾವನೆಯಿಂದ ಮಾತಾಡಿಲ್ಲ. 'ಮದುವೆಯ ಆಲಂಕಾರವಿಲ್ಲದ ಸ್ತ್ರೀಗೆ ಸಮಾಜವಲ್ಲಿ ಸ್ಥಾನವಿಲ್ಲ. ಅವಳು ಮದುವೆ ಇಲ್ಲದೇ ಇರುವುದು ಶಕ್ಯವೇ ಇಲ್ಲ. ಸ್ತ್ರೀ ಜನ್ಮಕ್ಕೊಂದು ಮದುವೆ ಬೇಕೇ ಬೇಕು'! ಎಂಬ ವಿಚಾರಗಳನ್ನು ಮೊದಲಿನಿಂದ ಅವಳ ತಲೆಯಲ್ಲಿ ತುಂಬಿ ಬಿಡುವರು. ಈ ಎಲ್ಲ ರೂಢಿಗಳ ವಿರುದ್ಧ ಬಂಡು ಹೂಡುವವಳಿದ್ದೇನೆ ನಾನು. 'ಸ್ತ್ರೀ ಜನ್ಮಕ್ಕೊಂದು ಮದುವೆ ಅನಿವಾರ್ಯ!' ಎಂದು ನೋದಲು ಅಂದು, ಆಮೇಲೆ ಅವಳು ಮದುವೆಯ ಪೇಟೆಯಲ್ಲಿ ನಿಂತಾಗ, ಹಲವಾರು ಜನರು ಬಂದು ಹಲವಾರು ಕಾರಣಗಳಿಗಾಗಿ ಅವಳನ್ನು ತಿರಸ್ಕರಿಸಿ ಹೋಗುವುದು ಇಂದಿನ ಸಮಾಜದ ರೂಢಿ. ಇಂಥ ಅಪಮಾನದ ಬೆಂಕಿಯಲ್ಲಿ ಸುಟ್ಟುಕೊಂಡ ಸ್ತ್ರೀಯರೆಷ್ಟೋ ಜನವಿದ್ದಾರೆ. ಅಂಥವರಲ್ಲಿ ನಾನೂ ಒಬ್ಬಳು. ಆದುದರಿಂದ ಸ್ತ್ರೀ ಸಮಾಜವನ್ನು ಎಚ್ಚರಿಸಿ ಈ ಎಲ್ಲ ವಿಚಾರಗಳ ವಿರುದ್ಧ ಬಂಡು ಹೂಡುವವಳಿದ್ದೇನೆ. ಈ ಎಲ್ಲ ದುಷ್ಟ ರೂಢಿಗಳು ಹೋಗಿ, ಸ್ತ್ರೀಯು ಒಂದು ಪೇಟೆಯಲ್ಲಿ ನೂರಲು ಸಿಗುವ ಹಣ್ಣು ಹೂವು ಅಲ್ಲ, ತನಗೂ ಒಂದು ವ್ಯಕ್ತಿತ್ವ, ಸ್ವತಂತ್ರವಿಚಾರಶಕ್ತಿ ಇವೆ ಎಂದು ತಿಳಿದು, ಸಮಾಜವು ಅವಳನ್ನು ಆದರದಿಂದ ನಡೆಯಿಸಿಕೊಳ್ಳುವವರೆಗೆ ನನ್ನಂಥ ಸಾವಿರಾರು ಸ್ತ್ರೀಯರು ಕುಮಾರಿಯರಾಗಿಯೇ ಉಳಿಯಬೇಕೆಂಬುದೇ ನನ್ನ ವಿಚಾರ. ನಮ್ಮ ಈ ಧ್ಯೇಯಸಾಧನೆಗಾಗಿ ಬೇಕಾಗುವ ತ್ಯಾಗ ಮಾಡಲು ನಾವೆಲ್ಲರೂ ಸಿದ್ಧರಾಗಬೇಕು. ಹೀಗೆ ಎಲ್ಲ ಸ್ತ್ರೀಯರೂ ನಿರ್ಧರಿಸಿದುದರ ಪರಿಣಾಮವಾಗಿ ಸಮಾಜದ ಬೆಳವಣಿಗೆಯೇ ನಿಂತರೆ! ಆಗ ಸಮಾಜದ ಕಣ್ಣು ತೆರೆಯಬಹುದು" ಎಂದು ಹೇಳಿ, ತನ್ನ ವಾಕ್ಪ್ರವಾಹವನ್ನು ನಿಲ್ಲಿಸಿದಳು ವನಮಾಲೆ.

ಅವಳ ಈ ಕ್ರಾಂತಿಕಾರಕ ವಿಚಾರಗಳನ್ನು ಕೇಳಿ, ಎಲ್ಲವನ್ನು ಮರೆತು ಆಶ್ಚರ್ಯಚಕಿತನಾಗಿ ಅವಳನ್ನು ನೋಡುತ್ತ ಕುಳಿತನು ವಿದ್ಯಾಧರ.



ಲೋಕಪರಿಚಯ

(ಸಂಜಯನ)

ಶ್ರೀ. ದ. ಲ. ಕೆತೂರ ಬಿ. ಎ., ಹುಬ್ಬಳ್ಳಿ

ಯಾವುದೇ ವಿಷಯದಲ್ಲಿಯೂ ಮನಸ್ಸು ಹಾಕಿ, ಪ್ರಮಾಣಿಕ ಅಂಕಿ-ಸಂಖ್ಯೆಗಳಿಂದ ಸಂಶೋಧಿಸುತ್ತ ಹೋಗುವುದರಿಂದ, ಪ್ರಕೃತಿಯ ಹಲವು ಸತ್ಯಗಳು ಬಯಲಿಗೆ ಬರುವುವು. ಈ ಸತ್ಯಸಂಶೋಧನೆಯಿಂದ, ಮಾನವರಿಗೆ ತಮಗೆ ಬೇಡವಾದುದನ್ನು ತಡೆಹಿಡಿದು ಬೇಕಾದುದನ್ನು ಹೆಚ್ಚಿಸಿಕೊಳ್ಳಲಿಕ್ಕೆ ಅನುಕೂಲವಾಗುವುದು.

★

ಜಗತ್ತಿನಲ್ಲಿಯ ವಿವಾಹಗಳು, ಶಿಶುಗಳು ಮತ್ತು ಹೆಚ್ಚುತ್ತಿರುವ ಜನಸಂಖ್ಯೆಯನ್ನು ಕುರಿತು ಜಾಗತಿಕ ಆರೋಗ್ಯಸಂಸ್ಥೆಯವರು ೭೦೦ ಪುಟಗಳ "ಮಹತ್ತ್ವದ ಅಂಕಿ-ಸಂಖ್ಯೆಗಳು ಮತ್ತು ಸುರಣದ ಕಾರಣಗಳು" ಎಂಬ ಗ್ರಂಥವನ್ನು ಪ್ರಸಿದ್ಧ ಮಾಡಿದ್ದಾರೆ. ಆ ಉದ್ಗ್ರಂಥದಲ್ಲಿಯ ಕೆಲವು ಮಹತ್ತ್ವದ ವಿಷಯವನ್ನು ಈ ಕೆಳಗೆ ಕೊಡಲಾಗಿದೆ.

ದ್ವಿತೀಯ ಜಾಗತಿಕಯುದ್ಧವು ಮುಗಿದ ಕೂಡಲೇ, ವಿವಾಹಗಳ ಸಂಖ್ಯೆಯು ಒಮ್ಮೆಲೇ ಏರಿತು. ಯುದ್ಧಕಾರಣದಿಂದ ತಡೆದಿದ್ದ ವಿವಾಹಗಳು ನೇರವೇರಿದ್ದರಿಂದ, ಮತ್ತು ಯುದ್ಧದಿಂದ ಹಿಂತಿರುಗಿದ ಸೈನಿಕರು ನೆಮ್ಮದಿಯಿಂದ ಗೃಹಸ್ಥಧರ್ಮ ಸ್ವೀಕರಿಸುವ ಆತುರ ತೋರಿಸಿದ್ದರಿಂದ, ಈ ಕಾಲದಲ್ಲಿ ವಿವಾಹಗಳ ಸಂಖ್ಯೆಯು ಮೇಲಕ್ಕೇರಿತು.

ಅಮೇರಿಕೆಯಲ್ಲಿ ಅತ್ಯಧಿಕ ವಿವಾಹಗಳು ನೆರವೇರಿದ ವರ್ಷವೆಂದರೆ ೧೯೪೬. ಈ ಮೊದಲು ೧೯೩೬-೪೦ರ ಅವಧಿಯಲ್ಲಿ ಸಾವಿರಕ್ಕೆ ೧೦ ಜನರು ಮದುವೆ ಮಾಡಿಕೊಂಡರೆ, ೧೯೪೬ ರಲ್ಲಿ ಸಾವಿರಕ್ಕೆ ೧೬ ಜನರು ಮದುವೆ ಮಾಡಿಕೊಂಡರು. ಅನಂತರದ ವರ್ಷಗಳಲ್ಲಿ ವಿವಾಹದ ಸಂಖ್ಯೆಯು ಇಳಿಯುತ್ತ ಹೋದರೂ, ಅದು ೧೯೩೬-೪೦ರ ವಿವಾಹಗಳ ಮಟ್ಟಕ್ಕಿಂತ ಉನ್ನತದಲ್ಲಿಯೆ ಇತ್ತು.

ವಿವಾಹಗಳ ಸಂಖ್ಯೆಯು ಹೆಚ್ಚಿದ್ದರಿಂದ, ಶಿಶುಗಳ ಜನನಸಂಖ್ಯೆಯಾದರೂ ಸ್ವಾಭಾವಿಕವಾಗಿ ಹೆಚ್ಚಿತು. ೧೯೪೭ರಲ್ಲಿ ಈ ಜನನ ಸಂಖ್ಯೆಯು ಅಮೇರಿಕೆಯಲ್ಲಿ ಸಾವಿರಕ್ಕೆ ೨೫ ಹಾಗೂ ಇಂಗ್ಲೆಂಡ್ ಮತ್ತು ವೇಲ್ಸಗಳಲ್ಲಿ ಸಾವಿರಕ್ಕೆ ೨೦!! ಯ ಅಂಕಿಯನ್ನು ಮುಟ್ಟಿತು. ೧೯೩೬-೪೦ರ ಅವಧಿಯಲ್ಲಿ ಜನನದ ಅಂಕಿಯು ಅನುಕ್ರಮವಾಗಿ ಅಮೇರಿಕೆಯಲ್ಲಿ ಸಾವಿರಕ್ಕೆ ೧೭ ಹಾಗೂ ಬ್ರಿಟನ್ನಿನಲ್ಲಿ ಸಾವಿರಕ್ಕೆ ೧೪ರಷ್ಟಿತ್ತು.

ಗಂಡುಮಕ್ಕಳೇ ಹೆಚ್ಚು

ಯುದ್ಧ ಮುಗಿದ ನಂತರದ ವರ್ಷಗಳಲ್ಲಿ ಗಂಡುಮಕ್ಕಳು ಹುಟ್ಟುವುದೇ ಹೆಚ್ಚು— ಎಂಬ ರೂಢಿಗೆ ದ್ವಿತೀಯ ಜಾಗತಿಕ ಯುದ್ಧದ ನಂತರದ ವರ್ಷವೂ ಅಪವಾದವಾಗಲಿಲ್ಲ. ಇಟಲಿಯಲ್ಲಿ ೧೯೩೬-೪೦ರಲ್ಲಿ ಬಾಲ-ಬಾಲಿಕೆಯ ಜನನ ಸಂಖ್ಯೆಯು ೧೦೫೪-೧೦೦೦ ಇದ್ದದ್ದು ಅನಂತರ ೧೯೪೬-೪೮ರಲ್ಲಿ ೧೦೬೦-೧೦೦೦ಕ್ಕೇರಿತು. ಅದೇ ಅವಧಿಯಲ್ಲಿ ಫ್ರಾನ್ಸಿನಲ್ಲಿ ಬಾಲಕರ ಜನನ ಸಂಖ್ಯೆಯು ಸಾವಿರಕ್ಕೆ ೧೦೩೫ ಇದ್ದದ್ದು ೧೦೫೮ಕ್ಕೇರಿತು. ಇಂಗ್ಲೆಂಡಿನಲ್ಲಿ ೧೦೫೪ ಇದ್ದದ್ದು ೧೦೬೧ಕ್ಕೇರಿತು.

ಮಕ್ಕಳನ್ನು ಹೆರುವ ಶಕ್ತಿಯು ಸ್ತ್ರೀಯರಲ್ಲಿ ಅವರ ವಯಸ್ಸಿನ ಪ್ರಕಾರ ೯೯ ವಯಸ್ಸಿನಲ್ಲಿ ವಿಶೇಷವಾಗಿರುತ್ತದೆ. ನಿಸರ್ಗದ ಈ ನಿಯಮವು ಅಬಾಧಿತವಾಗಿ ಉಳಿದಿದೆಯಾದರೂ, ೨೦ ವರ್ಷಕ್ಕಿಂತ ಕಡಿಮೆ ವಯಸ್ಸಿನ ಹಾಗೂ ೩೦ ರಿಂದ ೩೪ ವರ್ಷದ ವಯಸ್ಸಿನ ಸ್ತ್ರೀಯರಲ್ಲಿಯೂ ಪ್ರಜನನ ಶಕ್ತಿಯು ವಿಶೇಷವಾಗಿ ಬೆಳೆಯಹತ್ತಿದ್ದು ಈಗಿನ ಅಂಕಿ-ಸಂಖ್ಯೆಗಳಿಂದ ಕಂಡುಬರುತ್ತದೆ. ಯಾವತೊಬ್ಬ ಮಹಿಳೆಯು ವಯಸ್ಸಿನ ೩೫ ವರ್ಷದ ನಂತರ, ಅದಕ್ಕೂ ವಿಶೇಷವಾಗಿ ೪೦ ವರ್ಷದ ನಂತರ ಆಕೆಯಲ್ಲಿ ಪ್ರಜನನ ಶಕ್ತಿಯು ಕಡಿಮೆಯಾಗುತ್ತದೆಂಬ ಸಾಮಾನ್ಯ ನಿಯಮವೂ ಅಬಾಧಿತವಾಗಿರುತ್ತದೆ.

ಮಹಿಳೆಯರು ಗರ್ಭಧಾರಣೆಗೆ ಅತ್ಯಂತ ಸಮರ್ಥರಾಗಿರುವ ವಯಸ್ಸಿನಲ್ಲಿಯೆ ಕೆಲವೊಂದು ವೈಶಿಷ್ಟ್ಯವೂ ಕಂಡುಬರುತ್ತದೆ. ಉದಾಹರಣೆಗಾಗಿ ಫ್ರಾನ್ಸಿನಲ್ಲಿ ೩೦ರಿಂದ ೩೪ ವರ್ಷದ ಮಹಿಳೆಯರು ೧೯೩೬ರಲ್ಲಿ ೧೫೧ ಮಕ್ಕಳನ್ನು ಹೆತ್ತರು. ಆದರೆ ೧೯೪೮ರಲ್ಲಿ ಇದೇ ವಯಸ್ಸಿನ ಅಂದರೆ ೩೦ರಿಂದ ೩೪ ವರ್ಷದೊಳಗಿನ ನಾರಿಯರು ೧೭೩ ಮಕ್ಕಳನ್ನು ಹೆತ್ತರು. ಅದೇ ದೇಶದಲ್ಲಿ ೩೫ರಿಂದ ೩೯ರೊಳಗಿನ ಸ್ತ್ರೀಯರಲ್ಲಿ ಪ್ರತಿ ಸಾವಿರಕ್ಕೆ ೧೩೦ ಪ್ರೌಢೆಯರು ಹೆತ್ತರು. ಆದರೆ ೧೯೪೮ರಲ್ಲಿ ಇದೇ ವಯೋಮಾನದ ಸ್ತ್ರೀಯರಲ್ಲಿ ಪ್ರತಿಸಾವಿರಕ್ಕೆ ೧೪೩ ಮಹಿಳೆಯರು ಅಪತ್ಯಲಾಭ ಪಡೆದರು.

ಜನಸಂಖ್ಯೆಯಲ್ಲಿ ಹೆಚ್ಚಳ

ಹೀಗೆ ಜನನಸಂಖ್ಯೆಯು ಹೆಚ್ಚಾಗುತ್ತ ಹೋಗಹತ್ತಿದ್ದರಿಂದ ಜಗತ್ತಿನ ಜನಸಂಖ್ಯೆಯಾವರೂ ಏರಹತ್ತಿತು. ಯುದ್ಧಪೂರ್ವಕಾಲದಲ್ಲಿ ಜನಸಂಖ್ಯೆಯು ಇಳಿಮುಖವಾಗಿದೆಯೆಂದು ಹೇಳಿಕೊಳ್ಳುತ್ತಿದ್ದ ದೇಶಗಳಲ್ಲಿಯೂ ಜನಸಂಖ್ಯೆಯು ಹೆಚ್ಚತೊಡಗಿತು.

೧೯೩೬-೪೦ರಲ್ಲಿ ಫ್ರಾನ್ಸಿನಲ್ಲಿ ಜನನ ಪ್ರಮಾಣವು ೧೭೦ ಇತ್ತು. ಎಂದರೆ ೧೫ರಿಂದ ೪೯ ವರ್ಷದೊಳಗಿನ ಮಹಿಳೆಯರಲ್ಲಿ ಪ್ರತಿ ಸಾವಿ-

ಜಯಂತಿಗೆ ಚಂದಾದಾರರಾಗಿರಿ!

●

ಮುಂಬಯಿ, ಮೈಸೂರು, ಮದರಾಸು,
ಹೈದರಾಬಾದ್— ಎಲ್ಲ ಸರಕಾರದ ವಿದ್ಯಾಶಾಖೆಯ
ಮುಖ್ಯಾಧಿಕಾರಿಗಳಿಂದ ಮನ್ನಣೆ ಪಡೆದಿರುವ
ಜಯಂತಿಯನ್ನು
ಎಲ್ಲ ಮಿಡಲ್‌ಸ್ಕೂಲ್, ಹೈಸ್ಕೂಲ್, ಕಾಲೇಜುಗಳಿಗೂ
ತರಿಸಿಕೊಳ್ಳಬೇಕು.

ವ್ಯ. ಜ. ಧಾ.

ದೆಂದರೆ, ಅವಳೊಬ್ಬ ಹುಟ್ಟಲರನ ಮಗಳು. ಜಗತ್ತಿನಲ್ಲಿ ತಾನೇ ಶ್ರೇಷ್ಠಳು ಮತ್ತು ಸುಖವಾಗಿ ಇರಲು ಯೋಗ್ಯಳು— ಎಂದು ಅವಳ ವಿಚಾರ. ಅವಳ ಮುಂದೆ ನಾನೂ ಕೂಡ ಕಸದ ಕಡ್ಡಿ. ಇಂಥ ಹೆಣ್ಣನ್ನು ಕಟ್ಟಿಕೊಂಡು ಈಗ ೫ ವರ್ಷ ತೊಳಲಾಡಿದ್ದೇನೆ. ನನ್ನ ದಾಂಪತ್ಯ ಜೀವನದ ಈ ೫ ವರ್ಷಗಳ ಅವಧಿಯಲ್ಲಿ, ಸುಖವಾಗಿ ಉಂಡು ಆನಂದದಿಂದ ಆಫೀಸಿಗೆ ಬಂದ ದಿನಗಳು ತೀರ ಕಡಿಮೆ. ರೂಪವಲ್ಲ, ಧನವಲ್ಲ; ಆದರೆ ಸದ್ಗುಣವೊಂದೇ ದಾಂಪತ್ಯಜೀವನವಲ್ಲಿ ಸುಖವನ್ನು ಕೊಡಬಲ್ಲ ಸಂಜೀವಿನಿ....ಎಂದು. ಈಗ ನನಗೆ ತಿಳಿದಿದೆ" ಎಂದು ತನ್ನ ಕಥೆ ಮುಗಿಸಿದನು ವಿದ್ಯಾಧರ ಖಿನ್ನವದನನಾಗಿ.

ಸ್ವಲ್ಪ ಹೊತ್ತಿನ ನಂತರ ಮತ್ತೆ ಜೀತರಿಸಿಕೊಂಡು ಸುರು ಮಾಡಿದ: "ಇರಲಿ, ನನ್ನ ಪ್ರಶ್ನೆಗಳಿಗೆ ಉತ್ತರವನ್ನೇ ಕೊಡಲಿಲ್ಲವಲ್ಲ ನೀವು?" ಎಂದು.

ಆಗ ವನಮಾಲೆಯು ತನ್ನ ಉಪನ್ಯಾಸವನ್ನು ಪ್ರಾರಂಭ ಮಾಡಿದಳು: "ನಾನು ನನ್ನ ಜೀವನದ ಜೊತೆಗಾರನನ್ನು ಹುಡುಕುವುದರ ಸಲುವಾಗಿ, ನನ್ನ ಎಲ್ಲ ಸ್ವಾಭಿಮಾನವನ್ನೂ ಬದಿಗಿಟ್ಟು ೨೦೦ ಸಲ, ನಂಬಿಗೆಯ ನಾಯಿಯಂತೆ, ಹೇಳಿದವರ ಮುಂದೆ ಕುಳಿತು, ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟು ಕಡೆಗೆ 'ಹುಡುಗಿ ಕಪ್ಪು' ಎಂಬ ಟೀಕೆಗಳನ್ನು ಕೇಳಿ ಸಹನೆ ಮಾಡಿದ್ದೇನೆ. ಆ ಟೀಕಾಕಾರರ ಸಾಲಿನಲ್ಲಿ ನಿಮ್ಮ ನಂಬರು ೨೦೦ನೆಯದು. ನಿಮ್ಮ ಅಭಿಪ್ರಾಯವನ್ನು ಕೇಳುತ್ತಲೇ ನಾನು ನನ್ನ ವಿಚಾರವನ್ನು ಸ್ಥಿರಪಡಿಸಿದೆ. ಇನ್ನು ಯಾರ ಮುಂದೆಯೂ ಈ ನಾಟಕದ ಸಲುವಾಗಿ ಅಭಿನಯ ಮಾಡುವುದಿಲ್ಲ. ಕಲಿತು ನನ್ನ ಹೊಟ್ಟೆಯನ್ನು ನಾನು ತುಂಬಿಕೊಳ್ಳಬೇಕು ಎಂದು ನಿಶ್ಚಯಿಸಿದೆನು. ಅದರಂತೆಯೇ ಕಲಿತು M. A., Ph. D. ಆದೆನು. ಅಂದಿನಿಂದ ನಾನು— ಪುರುಷಜಾತಿಯನ್ನೇ ನಂಬಬಾರದು. ಅದೊಂದು ಸಮಾಜದಲ್ಲಿಯ ಭಯಂಕರ ವಿಷವುಳ್ಳ ಪ್ರಾಣಿಯೆಂದು ತಿಳಿದೆ. ಅಂದಿನಿಂದ ಇಂದಿನವರೆಗೆ ನಾನು ಯಾವ ಪುರುಷನ ಕೂಡ ಆತ್ಮೀಯ ಭಾವನೆಯಿಂದ ಮಾತಾಡಿಲ್ಲ. 'ಮದುವೆಯ ಆಲಂಕಾರವಿಲ್ಲದ ಸ್ತ್ರೀಗೆ ಸಮಾಜದಲ್ಲಿ ಸ್ಥಾನವಿಲ್ಲ. ಅವಳು ಮದುವೆ ಇಲ್ಲದೇ ಇರುವುದು ಶಕ್ಯನೇ ಇಲ್ಲ. ಸ್ತ್ರೀ ಜನ್ಮಕ್ಕೊಂದು ಮದುವೆ ಬೇಕೇ ಬೇಕು'! ಎಂಬ ವಿಚಾರಗಳನ್ನು ಮೊದಲಿನಿಂದ ಅವಳ ತಲೆಯಲ್ಲಿ ತುಂಬಿ ಬಿಡುವರು. ಈ ಎಲ್ಲ ರೂಢಿಗಳ ವಿರುದ್ಧ ಬಂಡು ಹೂಡುವವಳಿದ್ದೇನೆ ನಾನು. 'ಸ್ತ್ರೀ ಜನ್ಮಕ್ಕೊಂದು ಮದುವೆ ಜನಿ ನಾರ್ಯ!' ಎಂದು ಮೊದಲು ಅಂದು, ಆಮೇಲೆ ಅವಳು ಮದುವೆಯ ಸೇಟೆಯಲ್ಲಿ ನಿಂತಾಗ, ಹಲವಾರು ಜನರು ಬಂದು ಹಲವಾರು ಕಾರಣಗಳಿಗಾಗಿ ಅವಳನ್ನು ತಿರಸ್ಕರಿಸಿ ಹೋಗುವುದು ಇಂದಿನ ಸಮಾಜದ ರೂಢಿ. ಇಂಥ ಅಪಮಾನದ ಬೆಂಕಿಯಲ್ಲಿ ಸುಟ್ಟುಕೊಂಡ ಸ್ತ್ರೀಯರೆಷ್ಟೋ ಜನರಿದ್ದಾರೆ. ಅಂಥವರಲ್ಲಿ ನಾನೂ ಒಬ್ಬಳು. ಆದುದರಿಂದ ಸ್ತ್ರೀ ಸಮಾಜವನ್ನು ಎಚ್ಚರಿಸಿ ಈ ಎಲ್ಲ ವಿಚಾರಗಳ ವಿರುದ್ಧ ಬಂಡು ಹೂಡುವವಳಿದ್ದೇನೆ. ಈ ಎಲ್ಲ ದುಷ್ಟ ರೂಢಿಗಳು ಹೋಗಿ, ಸ್ತ್ರೀಯು ಒಂದು ಪೇಟೆಯಲ್ಲಿ ಮಾರಲು ಸಿಗುವ ಹಣ್ಣು ಹೂವು ಅಲ್ಲ, ಅವಳಿಗೂ ಒಂದು ವ್ಯಕ್ತಿತ್ವ, ಸ್ವತಂತ್ರವಿಚಾರಶಕ್ತಿ ಇವೆ ಎಂದು ತಿಳಿದು, ಸಮಾಜವು ಅವಳನ್ನು ಆದರದಿಂದ ನಡೆಯಿಸಿಕೊಳ್ಳುವವರೆಗೆ ನನ್ನಂಥ ಸಾವಿರಾರು ಸ್ತ್ರೀಯರು ಕುಮಾರಿಯರಾಗಿಯೇ ಉಳಿಯಬೇಕೆಂಬುದೇ ನನ್ನ ವಿಚಾರ. ನಮ್ಮ ಈ ಧ್ಯೇಯಸಾಧನೆಗಾಗಿ ಬೇಕಾಗುವ ತ್ಯಾಗ ಮಾಡಲು ನಾವೆಲ್ಲರೂ ಸಿದ್ಧರಾಗಬೇಕು. ಹೀಗೆ ಎಲ್ಲ ಸ್ತ್ರೀಯರೂ ನಿರ್ಧರಿಸಿದುದರ ಪರಿಣಾಮವಾಗಿ ಸಮಾಜವು ಬೆಳಿನಣಿಗೆಯೇ ನಿಂತರೆ! ಆಗ ಸಮಾಜದ ಕಣ್ಣು ತೆರೆಯಬಹುದು." ಎಂದು ಹೇಳಿ, ತನ್ನ ವಾಕ್ಪ್ರವಾಹವನ್ನು ನಿಲ್ಲಿಸಿದಳು ವನಮಾಲೆ.

ಅವಳ ಈ ಕ್ರಾಂತಿಕಾರಕ ವಿಚಾರಗಳನ್ನು ಕೇಳಿ, ಎಲ್ಲವನ್ನೂ ಮರೆತು ಆಶ್ಚರ್ಯಚಕಿತನಾಗಿ ಅವಳನ್ನು ನೋಡುತ್ತ ಕುಳಿತನು ವಿದ್ಯಾಧರ.

ಲೋಕಪರಿಚಯ

(ಸಂಜಯನ)

ಶ್ರೀ. ದ. ಲ. ಕೆತೂರ ಬಿ. ಎ., ಹುಬ್ಬಳ್ಳಿ

ಯಾವುದೇ ವಿಷಯದಲ್ಲಿಯೂ ಮನಸ್ಸು ಹಾಕಿ, ಪ್ರಮಾಣಿಕ ಅಂಕಿ-ಸಂಖ್ಯೆಗಳಿಂದ ಸಂಶೋಧಿಸುತ್ತ ಹೋಗುವುದರಿಂದ, ಪ್ರಕೃತಿಯ ಹಲವು ಸತ್ಯಗಳು ಬಯಲಿಗೆ ಬರುವುವು. ಈ ಸತ್ಯಸಂಶೋಧನೆಯಿಂದ, ಮಾನವರಿಗೆ ತಮಗೆ ಬೇಡವಾದುದನ್ನು ತಡೆಹಿಡಿಯು ಬೇಕಾದುದನ್ನು ಹೆಚ್ಚಿಸಿಕೊಳ್ಳಲಿಕ್ಕೆ ಅನುಕೂಲವಾಗುವುದು.

★

ಜಗತ್ತಿನಲ್ಲಿಯ ವಿವಾಹಗಳು, ಶಿಶುಗಳು ಮತ್ತು ಹೆಚ್ಚುತ್ತಿರುವ ಜನಸಂಖ್ಯೆಯನ್ನು ಕುರಿತು ಜಾಗತಿಕ ಆರೋಗ್ಯಸಂಸ್ಥೆಯವರು ೭೦೦ ಪುಟಗಳ "ಮಹತ್ತ್ವದ ಅಂಕಿ-ಸಂಖ್ಯೆಗಳು ಮತ್ತು ಮರಣದ ಕಾರಣಗಳು" ಎಂಬ ಗ್ರಂಥವನ್ನು ಪ್ರಸಿದ್ಧ ಮಾಡಿದ್ದಾರೆ. ಆ ಉದ್ಗ್ರಂಥದಲ್ಲಿಯ ಕೆಲವು ಮಹತ್ತ್ವದ ವಿಷಯವನ್ನು ಈ ಕೆಳಗೆ ಕೊಡಲಾಗಿದೆ.

ದ್ವಿತೀಯ ಜಾಗತಿಕಯುದ್ಧವು ಮುಗಿದ ಕೂಡಲೇ, ವಿವಾಹಗಳ ಸಂಖ್ಯೆಯು ಒಮ್ಮೆಲೇ ಏರಿತು. ಯುದ್ಧಕಾರಣದಿಂದ ತಡೆದಿದ್ದ ವಿವಾಹಗಳು ನೇರವೇರಿದ್ದರಿಂದ, ಮತ್ತು ಯುದ್ಧದಿಂದ ಹಿಂತಿರುಗಿದ ಸೈನಿಕರು ನೆಮ್ಮದಿಯಿಂದ ಗೃಹಸ್ಥಧರ್ಮ ಸ್ಥಿಕರಿಸುವ ಆತುರ ತೋರಿಸಿದ್ದರಿಂದ, ಈ ಕಾಲದಲ್ಲಿ ವಿವಾಹಗಳ ಸಂಖ್ಯೆಯು ಮೇಲಕ್ಕೇರಿತು.

ಅಮೇರಿಕೆಯಲ್ಲಿ ಅತ್ಯಧಿಕ ವಿವಾಹಗಳು ನೆರವೇರಿದ ವರ್ಷವೆಂದರೆ ೧೯೪೬. ಈ ಮೊದಲು ೧೯೩೬-೩೮ರ ಅವಧಿಯಲ್ಲಿ ಸಾವಿರಕ್ಕೆ ೧೦ ಜನರು ಮದುವೆ ಮಾಡಿಕೊಂಡರೆ, ೧೯೪೬ ರಲ್ಲಿ ಸಾವಿರಕ್ಕೆ ೧೬ ಜನರು ಮದುವೆ ಮಾಡಿಕೊಂಡರು. ಅನಂತರದ ವರ್ಷಗಳಲ್ಲಿ ವಿವಾಹದ ಸಂಖ್ಯೆಯು ಇಳಿಯುತ್ತ ಹೋದರೂ, ಅದು ೧೯೩೬-೩೮ರ ವಿವಾಹಗಳ ಮಟ್ಟಕ್ಕಿಂತ ಉನ್ನತದಲ್ಲಿಯೆ ಇತ್ತು.

ವಿವಾಹಗಳ ಸಂಖ್ಯೆಯು ಹೆಚ್ಚಿದ್ದರಿಂದ, ಶಿಶುಗಳ ಜನನಸಂಖ್ಯೆಯಾದರೂ ಸ್ವಾಭಾವಿಕವಾಗಿ ಹೆಚ್ಚಿತು. ೧೯೪೬ರಲ್ಲಿ ಈ ಜನನಸಂಖ್ಯೆಯು ಅಮೇರಿಕೆಯಲ್ಲಿ ಸಾವಿರಕ್ಕೆ ೨೫ ಹಾಗೂ ಇಂಗ್ಲಂಡ್ ಮತ್ತು ವೇಲ್ಸಗಳಲ್ಲಿ ಸಾವಿರಕ್ಕೆ ೨೦|| ಯ ಅಂಕೆಯನ್ನು ಮುಟ್ಟಿತು. ೧೯೩೬-೩೮ರ ಅವಧಿಯಲ್ಲಿ ಜನನದ ಅಂಕೆಯು ಅನುಕ್ರಮವಾಗಿ ಅಮೇರಿಕೆಯಲ್ಲಿ ಸಾವಿರಕ್ಕೆ ೧೭ ಹಾಗೂ ಬ್ರಿಟನ್ನಿನಲ್ಲಿ ಸಾವಿರಕ್ಕೆ ೧೪ರಷ್ಟಿತ್ತು.

ಗಂಡುಮಕ್ಕಳೇ ಹೆಚ್ಚು

ಯುದ್ಧ ಮುಗಿದ ನಂತರದ ವರ್ಷಗಳಲ್ಲಿ ಗಂಡುಮಕ್ಕಳು ಹುಟ್ಟುವುದೇ ಹೆಚ್ಚು— ಎಂಬ ರೂಢಿಗೆ ದ್ವಿತೀಯ ಜಾಗತಿಕ ಯುದ್ಧದ ನಂತರದ ವರ್ಷವೂ ಅಪವಾದವಾಗಲಿಲ್ಲ. ಇಟಲಿಯಲ್ಲಿ ೧೯೩೬-೩೮ರಲ್ಲಿ ಬಾಲ-ಬಾಲಿಕೆಯರ ಜನನ ಸಂಖ್ಯೆಯು ೧೦೫ಕ್ಕೆ-೧೦೦೦ ಇದ್ದದ್ದು ಅನಂತರ ೧೯೪೬-೪೮ರಲ್ಲಿ ೧೦೬-೧೦೦೦ಕ್ಕೇರಿತು. ಅದೇ ಅವಧಿಯಲ್ಲಿ ಫ್ರಾನ್ಸದಲ್ಲಿ ಬಾಲಕರ ಜನನ ಸಂಖ್ಯೆಯು ಸಾವಿರಕ್ಕೆ ೧೦೫೫ ಇದ್ದದ್ದು ೧೦೫೮ಕ್ಕೇರಿತು. ಇಂಗ್ಲಂಡಿನಲ್ಲಿ ೧೦೫೪ ಇದ್ದದ್ದು ೧೦೬೧ಕ್ಕೇರಿತು.

ಮಕ್ಕಳನ್ನು ಹೆರುವ ಶಕ್ತಿಯು ಸ್ತ್ರೀಯರಲ್ಲಿ ಅವರ ವಯಸ್ಸಿನ ೨೫ರಿಂದ ೨೯ ವಯಸ್ಸಿನಲ್ಲಿ ವಿಶೇಷವಾಗಿರುತ್ತದೆ. ನಿಸರ್ಗದ ಈ ನಿಯಮವು ಅಬಾಧಿತವಾಗಿ ಉಳಿದಿದೆಯಾದರೂ, ೩೦ ವರ್ಷಕ್ಕಿಂತ ಕಡಿಮೆ ವಯಸ್ಸಿನ ಹಾಗೂ ೩೦ ರಿಂದ ೩೪ ವರ್ಷದ ವಯಸ್ಸಿನ ಸ್ತ್ರೀಯರಲ್ಲಿಯೂ ಪ್ರಜನನ ಶಕ್ತಿಯು ವಿಶೇಷವಾಗಿ ಬೆಳೆಯಹತ್ತಿದ್ದು ಈಗಿನ ಅಂಕಿ-ಸಂಖ್ಯೆಗಳಿಂದ ಕಂಡುಬರುತ್ತದೆ. ಯಾವಳೊಬ್ಬ ಮಹಿಳೆಯ ವಯಸ್ಸಿನ ೩೫ ವರ್ಷದ ನಂತರ, ಅದಕ್ಕೂ ವಿಶೇಷವಾಗಿ ೪೦ ವರ್ಷದ ನಂತರ ಆಕೆಯಲ್ಲಿ ಪ್ರಜನನ ಶಕ್ತಿಯು ಕಡಿಮೆಯಾಗುತ್ತದೆಂಬ ಸಾಮಾನ್ಯ ನಿಯಮವೂ ಅಬಾಧಿತವಾಗಿರುತ್ತದೆ.

ಮಹಿಳೆಯರು ಗರ್ಭಧಾರಣೆಗೆ ಅತ್ಯಂತ ಸಮರ್ಥರಾಗಿರುವ ವಯಸ್ಸಿನಲ್ಲಿಯೆ ಕೆಲವೊಂದು ವೈಪರೀತ್ಯವೂ ಕಂಡುಬರುತ್ತದೆ. ಉದಾಹರಣೆಗಾಗಿ ಫ್ರಾನ್ಸದಲ್ಲಿ ೨೦ರಿಂದ ೨೪ ವರ್ಷದ ಮಹಿಳೆಯರು ೧೯೩೮ರಲ್ಲಿ ೧೩೧ ಮಕ್ಕಳನ್ನು ಹೆತ್ತರು. ಆದರೆ ೧೯೪೮ರಲ್ಲಿ ಇದೇ ವಯಸ್ಸಿನ ಅಂದರೆ ೨೦ರಿಂದ ೨೪ ವರ್ಷದೊಳಗಿನ ನಾರಿಯರು ೧೬೩ ಮಕ್ಕಳನ್ನು ಹೆತ್ತರು. ಅದೇ ದೇಶದಲ್ಲಿ ೩೫ರಿಂದ ೩೯ರೊಳಗಿನ ಸ್ತ್ರೀಯರಲ್ಲಿ ಪ್ರತಿ ಸಾವಿರಕ್ಕೆ ೧೩೦ ಪ್ರೌಢೆಯರು ಹೆತ್ತರು. ಆದರೆ ೧೯೪೮ರಲ್ಲಿ ಇದೇ ವಯೋಮಾನದ ಸ್ತ್ರೀಯರಲ್ಲಿ ಪ್ರತಿಸಾವಿರಕ್ಕೆ ೧೪೩ ಮಹಿಳೆಯರು ಆಪತ್ಯಲಾಭ ಪಡೆದರು..

ಜನಸಂಖ್ಯೆಯಲ್ಲಿ ಹೆಚ್ಚಳ

ಹೀಗೆ ಜನನಸಂಖ್ಯೆಯು ಹೆಚ್ಚಾಗುತ್ತ ಹೋಗಹತ್ತಿದ್ದರಿಂದ ಜಗತ್ತಿನ ಜನಸಂಖ್ಯೆಯಾದರೂ ಏರಹತ್ತಿತು. ಯುದ್ಧಪೂರ್ವಕಾಲದಲ್ಲಿ ಜನಸಂಖ್ಯೆಯು ಇಳಿಮುಖವಾಗಿದೆಯೆಂದು ಹೇಳಿಕೊಳ್ಳುತ್ತಿದ್ದ ದೇಶಗಳಲ್ಲಿಯೂ ಜನಸಂಖ್ಯೆಯು ಹೆಚ್ಚತೊಡಗಿತು.

೧೯೩೬ರಲ್ಲಿ ಫ್ರಾನ್ಸದಲ್ಲಿ ಜನನ ಪ್ರಮಾಣವು ೧೭೦ ಇತ್ತು. ಎಂದರೆ ೧೫ರಿಂದ ೪೯ ವರ್ಷದೊಳಗಿನ ಮಹಿಳೆಯರಲ್ಲಿ ಪ್ರತಿ ಸಾವಿ-

ರಕ್ಕೆ ೮೭೦ ಸ್ತ್ರೀ ಶಿಶುಗಳನ್ನು ಹೆರುತ್ತಿದ್ದರು. ಈ ಪ್ರಮಾಣವು ೧೯೪೯ರಲ್ಲಿ ೧೩೫ಕ್ಕೇರಿತು.

ಆಯುರ್ಮಾನ ಬೆಳೆದಿದೆ

ಯುದ್ಧಾನಂತರ ಅನೇಕ ರಾಷ್ಟ್ರಗಳಲ್ಲಿ ಮರಣಸಂಖ್ಯೆಯ ಪ್ರಮಾಣವು ಯುದ್ಧಪೂರ್ವದ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಜನಸಂಖ್ಯೆಯಲ್ಲಿ ಪ್ರೌಢರ ಹಾಗೂ ವೃದ್ಧರ ಪ್ರಮಾಣವು ಹೆಚ್ಚಿಗಿರುವುದನ್ನು ಗಮನಿಸಿದರೂ ಚಿಕ್ಕಮಕ್ಕಳ, ತರುಣರ ಮರಣ ಸಂಖ್ಯೆಯು ಕಡಿಮೆಯಾಗಿದ್ದುದೂ ಕಂಡುಬರುತ್ತದೆ.

ಸಂಸರ್ಗಜನ್ಯ ದೋಷಗಳನ್ನು ಪ್ರತಿಬಂಧಿಸುವ, ಹಾಗೂ ಇತರ ಪ್ರತಿಬಂಧಕೋಪಾಯಗಳನ್ನು ಯೋಜಿಸಿವ್ವರಿಂದ, ಆರೋಗ್ಯವಿಷಯಕ ಜ್ಞಾನವು ಹೆಚ್ಚಾಗಿ, ಮರಣಸಂಖ್ಯೆಯು ಕಡಿಮೆಯಾಗುತ್ತ ನಡೆದಿದೆ.

ಅಬಲೆಯರೆ?

ಶಿಶುಗಳಲ್ಲಿ ಬಾಲಿಕೆಯರಿಗಿಂತ ಬಾಲಕರ ಮರಣಸಂಖ್ಯೆಯೆ ಹೆಚ್ಚಾಗಿರುವುದು— ಎಂಬುದು ಅವರ ಪ್ರೌಢಾವಸ್ಥೆಯಲ್ಲಿ ಹೆಚ್ಚು ಪ್ರತ್ಯಯಕ್ಕೆ ಬರುತ್ತದೆ. ಎಂದರೆ ಪ್ರೌಢರಲ್ಲಿ ಕೂಡ ಮರಣ ಸಂಖ್ಯೆಯು ಹೆಚ್ಚಾಗಿರುವುದು ಪುರುಷರಲ್ಲಿ; ಸ್ತ್ರೀಯರಲ್ಲಿ ಅಲ್ಲ.

ಅಮೇರಿಕೆಯಲ್ಲಿ ೧೯೩೦ರಲ್ಲಿ ೫೫ರಿಂದ ೫೯ರೊಳಗಿನ ಜನರಲ್ಲಿ ಸ್ತ್ರೀ-ಪುರುಷರ ಮರಣದ ಪ್ರಮಾಣವು ೧೦೦ಕ್ಕೆ ೧೨೭ ಇತ್ತು. ೧೯೪೯ರಲ್ಲಿ ಈ ಪ್ರಮಾಣವು ೧೦೦ಕ್ಕೆ ೧೩೬ರಷ್ಟಾಯಿತು. ಈ ನಡುವಿನ ಅವಧಿಯಲ್ಲಿ ಸ್ತ್ರೀಪುರುಷರಿಬ್ಬರ ಮರಣದ ಪ್ರಮಾಣವು ಇಳಿದರೂ ಸತ್ತವರಲ್ಲಿ ಸ್ತ್ರೀಯರಿಗಿಂತ ಪುರುಷರ ಸಂಖ್ಯೆಯೇ ಹೆಚ್ಚಾಗಿರುತ್ತದೆಂಬುದು ಈ ಮೇಲಿನ ಅಂಕೆಯಿಂದ ಕಂಡುಬರುತ್ತದೆ. ಎಂದ ಮೇಲೆ ಸ್ತ್ರೀಯರು ಅಬಲೆಯರೆ?

ಅವನ ಶೋಧ

ಶ್ರೀ. ಬಾಳು ಉಪಾಧ್ಯೆ, ಕನುನೇವಾಡಿ

★

ಅವನೆಲ್ಲಿ! ಅವನೆಲ್ಲಿ?
ಅವನಿರವ ಜಗವೆಲ್ಲಿ!
ಹೃದಯಪದರಮಂದಿರವ
ಒಳಗರ್ಭ ಗುಡಿಯಲ್ಲಿ!
ಮೃದುಮಧುರ ಮಾತಿರುವ
ಮಧುಬಿಂಬ ತಟದಲ್ಲಿ!!
ನಿನ್ನಲ್ಲಿ! ನನ್ನಲ್ಲಿ!!
ನಾನೆಂಬ ವಿಷವಿರವ
ಭಾವನೆಯು ಬನದಲ್ಲಿ!
ಭಯಭಕ್ತಿ; ನಿಜಶಕ್ತಿ
ಹಸಿವೆಂಬ ಮುಸಿಯಲ್ಲಿ
ಉಪವಾಸ! ವನವಾಸ!!
ಸುಡುತಿರಲು ನಿನ್ನನ್ನು.....
ಓಜಸ್ಸು-ತೇಜಸ್ಸು
ಚಿರಶಾಂತಿಗದು ಲೇಸು.
ಅದು ನೋಡು! ಅದು ನೋಡು!!
ಅದರಂತೆ ಪದನಾಡು
ಮನವನ್ನು ಮಿದುಮಾಡು!

ಮೌನದಲಿ ನೀ ನುಡಿ
ನುಡಿಯಲ್ಲಿ ಅಡಗಿರುವ
ನಿನ್ನಾತ್ಮನನು ನೋಡು
ನಿಜವಾದ ವರ ಬೇಡು!
ಒಳಗಣ್ಣು ತೆರೆ; ನೋಡು!!
ನೋಡುತ್ತ ನೀ ಹಾಡು
ಹಾಡಿನಲಿ ನಯವಿರಲಿ,
ಹಾಡಿನಲಿ ದಯವಿರಲಿ,
ಹಾಡು ಹಾಡಿನೊಳಿರಲಿ
ಹಾಡು ನಾಡಿಯೊಳಿರಲಿ.
ನಾಡಿಯೊಳು ಮಿತಿ ಇರಲಿ!
ಮಿತಿಗೊಂದು ಗತಿ ಬೇಕು
ಗತಿಗೊಂದು 'ಮತಿ' ಸಾಕು!
'ಮತಿ'ಯೆ ಮುಕ್ತಿಗೆ ಮಾರ್ಗ,
ಮತಿ ಇಲ್ಲದವಗತಿ!
ಚಿರಕಾಲ!! ಅಧೋಗತಿ!!!
ಅವನೆಲ್ಲಿ ಅವನೆಲ್ಲಿ?
ಅವನಿರವ ಎಡೆಯೆಲ್ಲಿ?

ಬಡವರ ಬಾಳಿನ ವಾಸ್ತವಚಿತ್ರ

ನನ್ನೋ ಮುನ್ನೋ

(ಚಿತ್ರವಿಮರ್ಶಕ)

★

ಇದು 'ಅಲ್ಲಾದ ಚಿತ್ರ' ಪವರು ನಿರ್ಮಿಸಿದ ಹಿಂದೀ ಚಿತ್ರ 'ಚಿಮುಣೀ ಪಾಖರ್' ಎಂಬ ಹೆಸರಿನಿಂದ ಮರಾಠಿಯಲ್ಲಿಯೂ, ಇದನ್ನು ನಿರ್ಮಿಸಲಾಗಿದೆ. ಎರಡು ಭಾಷೆಗಳಲ್ಲಿಯೂ ಅಭಿನಯಿಸಿದವರು ಅದೇ ಅದೇ ನಟರು. ಧಾರವಾಡದ ಜನತಾ ಪಿಕ್ಚರ್ಸ್‌ನವರು, ಎರಡೂ ಭಾಷೆಯಲ್ಲಿಯು ಚಿತ್ರಗಳ ಬಗ್ಗೆ ಕರ್ನಾಟಕ ಪ್ರದೇಶದಲ್ಲಿ ಪ್ರಚಾರಕ ಅಧಿಕಾರವನ್ನು ಪಡೆದುಕೊಂಡಿದ್ದಾರೆ.

ಮಹಾರಾಷ್ಟ್ರದಲ್ಲಿ ಇತ್ತೀಚೆಗೆ ತಮ್ಮ 'ಸ್ತ್ರೀ ಜನ್ಮಾ ಹೀ ತುಝೀ ಕಹಾಣೀ' 'ಬಾಳಾ ಜೋಜೋ ರೇ' ಚಿತ್ರಗಳ ನಿರ್ದೇಶನದಿಂದ ಸುಪ್ರಸಿದ್ಧಿಯನ್ನು ಪಡೆದ ಶ್ರೀಮಾನ್ ದತ್ತಾ ಧರ್ಮಾಧಿಕಾರಿ ಅವರು, ಇದಕ್ಕೂ ನಿರ್ದೇಶಕರಾಗಿ, ತಮ್ಮ ನಿರ್ದೇಶನ ಚಾತುರ್ಯವನ್ನು ಹೊರಕ್ಕೆ ಹಾಕಿದ್ದಾರೆ. ಹಳ್ಳಿಗರ ಮತ್ತು ಬಡವರ ಬಾಳಿನ ಕಷ್ಟನಷ್ಟಗಳನ್ನು ಸಂಪೂರ್ಣವಾಗಿ ಅಭ್ಯಸಿಸಿದ— ಮಹಾರಾಷ್ಟ್ರದ ಸಾಹಿತ್ಯಿಕ— ಶ್ರೀ. ಜಿ. ಡಿ. ಮಾಡಗೂಳಕರ್ ಅವರು ಈ ಚಿತ್ರಕ್ಕೆ ಕಥಾವಸ್ತುವನ್ನು ಒದಗಿಸಿಕೊಟ್ಟವರು. ಇನ್ನೊಂದು ವಿಶೇಷ ಸಂಗತಿಯೆಂದರೆ, ಇದರ ಕಥಾವಸ್ತು ಕಲ್ಪಿತವಾದುದಲ್ಲ; ನಡೆದ ಘಟನೆಯೊಂದರಿಂದ ಕೂಡಿದುದು.

ಗೋವಿಂದ ಒಬ್ಬ ಟ್ಯಾಕ್ಸಿ ಡ್ರಾಯ್ವರು. ಶಾರದಾ ಅವನ ಪ್ರೀತಿಯ ಪತ್ನಿ. ೧೩-೧೪ ವರ್ಷದ ಹಿರಿಯ ಮಗಳು ಪ್ರಭಾ ಇಲ್ಲದೆ, ಆ ದಂಪತಿಗಳಿಗೆ ಇನ್ನೂ ಮೂರು ಗಂಡು ಮಕ್ಕಳಿರುವರು. ಗಂಡನ ಗಳಿಕೆ ಕುಟುಂಬಪೋಷಣೆಗೆ ಸಾಲದುದರಿಂದ ಹೆಂಡತಿ ಶಾರದೆಯು ಒಂದು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುವಳು. ಗಂಡ-ಹೆಂಡಿರಲ್ಲಿ ಅನೂನವಾದ ಪ್ರೇಮ. ಇಬ್ಬರ ಗಳಿಕೆಯಿಂದಲೂ ಕುಟುಂಬ ಪೋಷಣೆಯಾಗದಂತಹ ಇಂದಿನ ಆರ್ಥಿಕಮುಗ್ಗಟ್ಟಿನ ಕಾಲ. ತನ್ನ ಗಳಿಕೆಯಿಂದ ತನ್ನ ಪ್ರೀತಿಯ ಹೆಂಡತಿ-ಮಕ್ಕಳನ್ನು ಸಲಹಲಿಕ್ಕೆ ಸಾಧ್ಯವಿಲ್ಲವಲ್ಲಾ— ಎಂಬ ಕೊರಗು ಗೋವಿಂದನಿಗೆ. ಈ ಕೊರಗು ಗೋವಿಂದನನ್ನು ಸಿಡುಕನನ್ನಾಗಿ ಮಾಡಿರುವುದು.

ಒಂದು ದಿನ ಟ್ಯಾಕ್ಸಿ ಸಾರಿಗೆ ಮಾಡುವಾಗ, ಬಾಡಿಗೆ ಕೊಟ್ಟು ಕುಳಿತ ಒಬ್ಬ ಪೋಲಿ ಹಣವಂತ, ಗೋವಿಂದನಿಗೆ ಅಪಮಾನವಾಗುವಂತೆ ಮಾತನಾಡುವನು. ಆತನ ಹೆಂಡತಿಯ ಸೌಂದರ್ಯವನ್ನೆತ್ತಿ ತನ್ನ ಕಾಮವಾಸನೆ ಪ್ರಕಟಿಸುವನು. ಇದರಿಂದ ತಲೆತಿರುಗಿದಂತಾದ ಗೋವಿಂದ, ಅವನನ್ನು ಹುಚ್ಚುರೇಗಿನಲ್ಲಿ ಹೊಡೆಯುವನು. ಆ ಹೊಡೆತದಿಂದ ಆ ಹಣವಂತ ಸಾಯುವನು. ಕೊಲೆಯ ಆರೋಪದೊಂದಿಗೆ ಗೋವಿಂದ ಎಲ್ಲಿಯೋ ಕಣ್ಮರೆಯಾಗುವನು.

ಗಂಡನ ಮೇಲೆ ಬಂದ ಕೊಲೆಯ ಆರೋಪದಿಂದ ನೊಂದು, ಹೃದಯದ ಮೇಲೆ ಆಘಾತ ಮಾಡಿಕೊಂಡ ಶಾರದೆಯೂ ಕೆಲವು ದಿನಗಳಲ್ಲಿಯೇ ಸತ್ತು ನಾಲ್ಕು ಮಕ್ಕಳನ್ನೂ ಪರದೇಶಿಗಳನ್ನಾಗಿ ಮಾಡುವಳು. ಹೆಂಡತಿಯ ಅನಾರೋಗ್ಯದ ವಿಷಯ ತಿಳಿದು, ಅಜ್ಞಾತವಾಸದಲ್ಲಿದ್ದ ಗೋವಿಂದ ಊರಿಗೆ— ವೇಷ ಬದಲಿಸಿಕೊಂಡು— ಬಂದಾಗ, ಅವಳ ಶವ ಚಿತೆಯ ಮೇಲೆ ಉರಿಯುತ್ತಿರುವುದು.

ಇಲ್ಲಿ ದುಃಖಸರವಶನಾಗಿ ಅಳುತ್ತಿರುವ ಗೋವಿಂದನನ್ನು ಕಂಡು, ಪೋಲೀಸರಿಗೆ ಯಾರೋ ವರದಿಕೊಟ್ಟುದರಿಂದ, ಅದೇ ಸ್ಥಳದಲ್ಲಿ ಪೋಲಿಸರು ಬಂದು ಅವನನ್ನು ನೆರೆ ಹಿಡಿದುಕೊಂಡು ಒಯ್ಯುವರು.

ಮುಂದೆ ಪರದೇಶಿ ಮಕ್ಕಳು ಪಟ್ಟ ಪಾಡೇ ಈ ಚಲಚ್ಚಿತ್ರದ ಮುಖ್ಯ ಕತೆಯಾಗಿದೆ. ದೀನರ ವಿಷಯದಲ್ಲಿ ನಮ್ಮ ಸಮಾಜದಲ್ಲಿರುವ ದುರ್ಧರವಾದ ಔದಾಸೀನ್ಯ, ಕೆಲವು ದುಷ್ಟ ವ್ಯಕ್ತಿಗಳಿಂದ ಅಕಾರಣವಾಗಿ ತಿನ್ನಬೇಕಾದ ಏಟು, ಒಬ್ಬಿಬ್ಬರು ದೀನ ಜನರಿಂದಲೆ ಆಗಾಗ ದೊರೆಯುತ್ತಿರುವ ನಾನವೀಯ ಸಹಾನುಭೂತಿ, ಸುಡುವ ಮನೆಯ ಗಳಗಳೆನ್ನುವ ದುಷ್ಟ ಮನಸ್ಸಿನ ಸ್ವಾರ್ಥವೃತ್ತಿ— ಇವೆಲ್ಲವುಗಳ ಸಹಜಚಿತ್ರವೇ ಈ ಕರುಣಾರಸಪ್ರಧಾನ ಕಥೆಯಲ್ಲಿ ತುಂಬಿಕೊಂಡಿದೆ. ದುಃಖದಿಂದಲೇ ಪ್ರಾರಂಭವಾಗಿ ದುಃಖದಿಂದಲೇ ಬೆಳೆದು ದುಃಖದಲ್ಲಿಯೇ ಕೊನೆಗೊಳ್ಳುವ ಈ ಈ ಚಿತ್ರವನ್ನು ನೋಡಿದವರು, ಕೊನೆಯವರೆಗೂ ಕಂಬನಿಗಳಿಂದ ನನೆಯದೆ ಬೇಕಾಗುವುದು. ಈ ಚಿತ್ರವನ್ನು ನೋಡಿ ಅಳದೆ ಇರುವ ಮನುಷ್ಯನೆಂದರೆ, ಅವನು ಕಗ್ಗಲ್ಲಿನ ಮೂರ್ತಿಯೆ ಆಗಿರಬೇಕು.

ಸಾಮಾನ್ಯವಾಗಿ ಇತ್ತೀಚಿನ ಚಲಚ್ಚಿತ್ರಗಳಲ್ಲಿ ತಲೆಯೆತ್ತಿ ತಾಂಡವವಾಡುವ ಅಶ್ಲೀಲ ಶೃಂಗಾರಕ್ಕೆ ಇದರಲ್ಲಿ ಆಸ್ಪದವೇ ಇಲ್ಲ. ಅಳುತ್ತಿರುವಾಗಲೇ ನಗಿಸಲು ಹಚ್ಚುವಂತಹ ಕೆಲವು ಘಟನೆಗಳನ್ನೂ ಕುಶಲತೆಯಿಂದ ನಿರ್ಮಿಸಲಾಗಿದೆ. ಪಾತ್ರಮಾಡಿದ ನಾಲ್ಕೂ ಹುಡುಗರೂ ತಮ್ಮ ಅಭಿನಯದಿಂದ ಪ್ರೇಕ್ಷಕರನ್ನು ಜಕ್ತಗೊಳಿಸುವರು. ನನ್ನೋ-ಮುನ್ನೋ ಎಷ್ಟು ಚಿಕ್ಕ ಹುಡುಗರು! ಅಂತಹರಿಂದ ಈ ಬಗೆಯ ಅಭಿನಯವನ್ನು ಪ್ರದರ್ಶಿಸಹಚ್ಚಿದುದು ದಿಗ್ದರ್ಶಕನ ಪ್ರಾವೀಣ್ಯಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಪ್ರತಿಯೊಬ್ಬರೂ ಈ ಚಿತ್ರವನ್ನು ಒಂದು ಸಲವಾದರೂ ನೋಡಿ, ತಮ್ಮ ಹೃದಯಮುಲವನ್ನು ಕಂಬನಿಯಿಂದ ತೊಳೆದುಕೊಳ್ಳಬೇಕಾದಂತಹ ನೀತಿಪ್ರಸಾರಕ ಚಿತ್ರವಿದು.



ವರುಣ

(ಕವನ ಸಂಕಲನ)

ಕವಿಗಳು ತ್ರಿವಂಗತ ಪೇಜಾವರ ಸದಾಶಿವರಾಯರು. ಪ್ರಕಾಶಕರು ಪ್ರೊ. ರಂ. ಶ್ರೀ. ಮುಗಳಿ, ವಿಲಿಂಗ್ಡನ್ ಕಾಲೇಜ್ ಸಾಂಗಲಿ.

ಅರಳುವ ಮೊದಲೇ ಬಾಡಿಹೋದ ಕನಿಜೀವನ ತ್ರಿವಂಗತ ಪೇಜಾವರ ಸದಾಶಿವರಾಯರದು. ಚಿಕ್ಕತನದಲ್ಲಿಯೇ ಲಲಿತ ಭಾಷೆಯಲ್ಲಿ ಕವನಗಳನ್ನು ಹೆಣೆಯಲು ತೊಡಗಿದುದನ್ನು ಕಂಡವರು, ಶ್ರೀ. ಸದಾಶಿವರಾಯರ ಪ್ರತಿಭೆಯ ಪರಿಪಕ್ವಕೃತಿಗಳನ್ನು ವಿಶ್ವಾಸದಿಂದ ನಿರೀಕ್ಷಿಸುತ್ತಲಿದ್ದರು. ಹೆಚ್ಚಿನ ಶಿಕ್ಷಣಕ್ಕಾಗಿ ಅವರು ಇಟಲಿಗೆ ಹೋಗಿರುವರೆಂಬ ಸಮಾಧಾನದಲ್ಲಿರುವಾಗಲೇ, ಅವರ ಅಕಾಲ ಮರಣದ ದುರ್ವರವಾರ್ತೆಯನ್ನು ಕೇಳಬೇಕಾಗಿ ಬಂದು, ಅನೇಕ ಕನ್ನಡಾಭಿಮಾನಿಗಳು ಕಳವಳಪಡಬೇಕಾಯಿತು. ತ್ರಿವಂಗತರು ಬದುಕಿ ಕನ್ನಡನಾಡಿಗೆ ಮರಳಿಬಂದಿದ್ದರೆ, ಕರ್ನಾಟಕಕ್ಕಾಗಿ ಅವರು ಎಷ್ಟೊಂದು ದುಡಿಯುತ್ತಿದ್ದರೋ ಏನೋ! ಇದು 'ಸತ್ತ ಎಮ್ಮೆಗೆ ಸೇರು ತುಪ್ಪ' ಎನ್ನುವಂತಹ ಬಣ್ಣನೆಯ ಮಾತಲ್ಲ. ಇನ್ನೂ ಎಳೆಯ ವಯಸ್ಸಿನಲ್ಲಿಯೆ ಅವರು ಪ್ರಾರಂಭಿಸಿದ ಲೇಖನಕಾರ್ಯ, ಮಿತ್ರಮಂಡಲ, ತೊದಲ್ನುಡಿ ಗ್ರಂಥಮಾಲೆಗಳಂತಹ ಸಂಸ್ಥಾನಿರ್ಮಿತಿ ಇವು ಅವರ ಆದರ್ಶದ ಆಶೆಗೆ ಪ್ರತ್ಯಕ್ಷ ಸಾಕ್ಷಿಗಳಾಗಿವೆ.

ಈ ಸಂಕಲನದಲ್ಲಿ ತ್ರಿವಂಗತರ ಕವನಗಳಲ್ಲಿಯ ಆಯ್ದ ೪೮ ಕವನಗಳಿವೆ. ಸಂಪಾದಕರಾದ ಪ್ರೊ. ಮುಗಳಯವರು ಕವಿಯನ್ನು ಕೃತಿಯ ಪರಿಚಯ ಮಾಡಿಕೊಡುವಂತಹ ಮುನ್ನುಡಿಯನ್ನೂ ಬರೆದಿದ್ದಾರೆ. ಪ್ರಾರಂಭದಲ್ಲಿಯೆ ಕಂಡುಬರುವ ಸದಾಶಿವರಾಯರ ಛಾಯಾಚಿತ್ರ, ಅವರ ಸೌಂದರ್ಯದೃಷ್ಟಿಯನ್ನೂ ಕಲಾಪ್ರೀತಿಯನ್ನೂ ಪ್ರಕಾಶಗೊಳಿಸುವಂತಹದಾಗಿದೆ.

ಕವಿಯ ಪ್ರತಿಭೆಯ ವಿಕಾಸವನ್ನು ಸಂಕಲನದ ಮೊದಲಲ್ಲಿಯೆ ಪ್ರಕಟವಾಗಿರುವ 'ವರುಣ' ಮತ್ತು 'ನಾಟ್ಯೋತ್ಸವ' ಎಂಬ ಕವನಗಳಲ್ಲಿ ಕಾಣಬಹುದು. ಉತ್ಸಾಹಗಣದಿಂದ ಕೂಡಿದ ಲಘು-ಜರಣಗಳಲ್ಲಿ 'ವರುಣ' ಕವಿತೆ ದೀರ್ಘವಾಗಿ ಸಾಗಿರುವುದು. ವಿಷಯ ಒಂದು ದಿನ ಸುರಿದ ಮಳೆಯ ವರ್ಣನೆ. ಉಪಮೆ, ಉತ್ಪ್ರೇಕ್ಷೆ, ರೂಪಕಗಳು ಮೈದಾಸಲುಬಗೆಯವಾಗಿರುವುವು. ಕವನ ಪ್ರಾರಂಭವಾಗುವ ಕಾಲದ ವರ್ಣನೆಯನ್ನೇ ನೋಡಿರಿ:

" ಆಕಾಶವು ಮುಸುಕಿದ್ದರು
ಬಿಸಿಲ ರಂಗು ಮಿರುಗುತಿಹುದು;
ಕುಳಿರ್ಗಾಳಿ ಬೀಸಿದ್ದರು
ಬೆಪ್ಪಿನೊಪ್ಪ ಸಂಜೆಗಿಹುದು.
ಬಾನ ಮೂಲೆಯಿಂದ ತಾರೆ-
ಯೊಂದು ಕಣ್ಣ ಮಿಟುಕುತಿಹುದು;
ದಾರಿಯುದ್ದ ನಾಲುದೀಪ
ಮಿಣುಕೆ ಕೆಣಕೆ ಕರೆಯುತಿಹುದು.
ನಾಲ್ಕು ಕಡೆಗೆ ನೇಹನಗೆಗೆ
ಎನ್ನ ಹೃದಯವರಳಿ ಮನಸು
ಮಿಡುಕುಮುಸುಕ ಹರಿದಿದೆ;
ಬೇಸರಿಕೆಯ ಕೋಟೆಯಿಂದ
ಯೋಜನೆಗಳ ಬಾಗಿಲೊಡೆದು
ನಸುಕನೊಡನೆ ಬೆರೆತಿದೆ.
ಕುದಿವ ಜೀವ ಕೊಚ್ಚಿ ಹರಿವ
ಜನೋದಧಿಯ ಊರ್ಮಿಯೊಡನೆ
ಉಕ್ಕುತೊಂದು ವೀಚಿಯಾಗೆ
ನನ್ನ ಕರೆದಿದೆ.

ಇಂತಹ ಸಮಯದಲ್ಲಿ ಕವಿ ತನ್ನ ಕಿರುಮನೆಯನ್ನು ಬಿಟ್ಟು ಹೊರಗೆ ಹೊರಡುತ್ತಾನೆ. ಮೊದಲು ಮಳೆಬರುವ ಚಿಹ್ನೆ. ಆಮೇಲೆ ಸಿರುಮಳೆಯ ಸೂಚಿಕೆ. ಆಮೇಲೆ 'ಬೆಳ್ಳಿಸೂಜಿ' ಯಂತಹ 'ಮೌಕ್ತಿಕಗಳ ತುಂತುರ'ದಂತಹ ಮಳೆ.

" ಮೊದಲ ಹನಿಯು ಸಿಂಜನಕ್ಕೆ
ಉದ್ಭವಿಸಿದ ನೆಲದ ಗಂಧ
ಮೂಲೆಯಲ್ಲಿ ಮಲೆತುಕೊಂಡು
ನುಳಿಗಾಲವು ಇಳಿಗಿಳಿದಿಹ
ಮೊದಲ ಸುದ್ದಿ ಸಾರಿತು."

ಹೀಗೆಯೆ ಮಳೆಗಾಲವನ್ನು ಸುಂದರವಾಗಿ ಬಣ್ಣಿಸುತ್ತ, ಮುಗಿಯುತ್ತೇಕೆಂಬ ನಿರಾಶೆಯಲ್ಲಿಯೆ ಕವಿತೆ ಮುಗಿಯುವುದು.

'ನಾಟ್ಯೋತ್ಸವ' ಕವಿತೆಯೂ ವಿಷಯಕ್ಕನುಗುಣವಾದ ಗತಿಯಲ್ಲಿ, ನಾದಮಾಧುರ್ಯದೊಂದಿಗೆ ರಭಸದಿಂದ ಸಾಗಿ, ಕವಿ ಹೇಳಿದ:

" ಜೀವನಕ್ಕೆ ಎರಡು ಮುಖ
ಒಂದು ಸುಖ ಒಂದು ದುಃಖ
ನಾಳಿನರಿವು ಯಾಕೆ ಸಖಾ ?
ಇಂದಿಗಿಹುದು ತುಂಬ ಸುಖ!
ನೋಡು ಗಾನನೇರುತಿಹುದು!
ಎಂಬ ಮಾತನ್ನು ಒಪ್ಪಬೇಕೆನ್ನುವುದರಲ್ಲಿಯೇ
' ದೀಪವೆಲ್ಲ ಆರುತಿಹುದು! '

ಎಂದು ಹೇಳಿ ಕಾಮುಕಶೃಂಗಾರವನ್ನು ಚಿತ್ರಿಸಲು ತೊಡಗುವುದು. ಕೊನೆಯ ನಾಲ್ಕು ಚರಣಗಳಲ್ಲಿ ಶೈಲಿ ಅನುಕರಣದ ಹುಚ್ಚಿಗೆ ಹೋಗಿ, ಬೆಳೆದು ಬಂದ ಚೆಲುವನ್ನು ಅಂದಗೆಡಿಸಿದೆಯೆಂದು ಹೇಳಬಹುದು.

ಮಿಕ್ಕ ಕವನಗಳಲ್ಲಿ ಕವಿಯ ಪ್ರಥಮಪ್ರಯತ್ನವೇ ಹೆಚ್ಚಾಗಿ ಅಭಿವ್ಯಕ್ತವಾಗುವುದು. ಆದರೆ ಭಾಷಾಶೈಲಿ, ಛಂದೋಗತಿಗಳು ಯಾವ ಕವನದ ವಿಷಯದಲ್ಲಿಯೂ ಬೇಸರವನ್ನು ಹುಟ್ಟಿಸುವಂತಿಲ್ಲ. 'ಆಟೆಯ ಹುಣ್ಣಿಮೆ' 'ಸ್ವಾತಂತ್ರ್ಯಭೈರವ' 'ಮಾಯಕದ ಮನಣ' 'ಜವರಾಯ' 'ಮೊರೆ' 'ಹಂಬಲದ ಹಾಡು' 'ಯಾತ್ರಿಕ' ಮೊದಲಾದ ಕವನಗಳಲ್ಲಿ ಕವಿಯ ಸ್ವತಂತ್ರ ಪ್ರತಿಭೆ ಎಲ್ಲೆಲ್ಲಿ ತಲೆಯೆತ್ತಿದೆ. 'ಲಕ್ಕಣ' 'ಉಲ್ಕೆ'ಗಳು ಕೇವಲ ಅನುಕರಣದ ಕೂಸುಗಳು.

ದಿವಂಗತ ಸದಾಶಿವರಾಯರ ನೆನಪು ಕನ್ನಡ ರಸಿಕರಿಗೆ ಮರೆಯದಂತೆ, ಅವರ ಹಲವು ಕವನಗಳನ್ನು ಒಂದೆಡೆಯಲ್ಲಿ ಸಂಕಲಿಸಿ ಪ್ರಕಟಿಸಿದುದಕ್ಕಾಗಿ ಕವಿಯ ಬಂಧುಗಳನ್ನೂ ಪ್ರೊ ಮುಗಳಿಯವರನ್ನೂ ಕನ್ನಡಿಗರೆಲ್ಲ ಅಭಿನಂದಿಸಬೇಕಾಗಿದೆ.

—ಬಿ. ಪಿ. ಎಸ್. ರಾವ್

ಅತ್ತಿಗೆ

(ಸಾಮಾಜಿಕ ಕಾದಂಬರಿ)

ಬರೆದವರು ಶ್ರೀಸಾನ್ ಎಸ್. ಅನಂತನಾರಾಯಣ ಎಂ. ಎ. ಸೀನುರಿನ ಉಷಾಸಾಹಿತ್ಯವಾಲೆಯ ಪ್ರಕಾಶನ.

ಶ್ರೀ. ಎಸ್. ಅನಂತನಾರಾಯಣರು ಕನ್ನಡ ವಾಚಕರಿಗೆ ಹೊಸಬರೆನಿಸುವ ಲೇಖಕರೇನೂ ಅಲ್ಲ. ಈ ಮೊದಲು ನಾಲ್ಕು ಸಾಮಾಜಿಕ ಕಾದಂಬರಿಗಳನ್ನು ಬರೆದುಕೊಟ್ಟಿದ್ದಾರೆ. ಕವಿತಾಸಂಕಲನ- ಕಥಾಸಂಕಲನ ಹೊರಗೆ ಹಾಕಿದ್ದಾರೆ. ನಾಟಕ ಬರೆದಿದ್ದಾರೆ. ವಿನುರ್ಶಾ ಗ್ರಂಥ ಪ್ರಕಟಿಸಿದ್ದಾರೆ. ಅನುವಾದಿತ ಸಾಹಿತ್ಯವನ್ನೂ ಒದಗಿಸಿದ್ದಾರೆ. ಇದೀಗ ಅವರ ಋಣೆಯ ಸಾಮಾಜಿಕ ಕಾದಂಬರಿ.

ಒಂದು ಕುಟುಂಬದಲ್ಲಿ ನಡೆದ ಘಟನೆಯೊಂದು ಈ ಕಾದಂಬರಿಯ ಕಥಾವಸ್ತು. ಶಾಂತಾ ಒಂದು ಮನೆಗೆ ಸೊಸೆಯಾಗಿ ಬಂದಿರುವಳು. ಕಾಲೇಜಿನಲ್ಲಿ ಓದುತ್ತಿರುವ ಸೀನೂ ಶಾಂತಾನ ಮೈದುನ. ಈ ಮೈದುನ ಅತ್ತಿಗೆಯರ ಜಗಳದಿಂದಲೇ ಕಾದಂಬರಿ ಪ್ರಾರಂಭವಾಗಿದೆ.

ಮನೆಯಲ್ಲಿ ಬೆಲ್ಲದಚ್ಚಿನಂತಹ ಮಧುರ ಸ್ವಭಾವದ ಅತ್ತೆ-ಮಾವಂದಿರು. ಸಾಧುಸ್ವಭಾವದ ಸ್ನೇಹಮಯನಾದ ಪತಿ. ಹೊಟ್ಟೆಯ ಮಗಳಿಗಿಂತ ಹೆಚ್ಚಿಗೆ ಹಚ್ಚಿಕೊಂಡಿದ್ದ ಚಿಕ್ಕ ನಾದಿನಿ ವಸಂತು! ಮಧುರವಾದ ಸಂಸಾರ ಶಾಂತಳದು. ಆದರೂ ಒಂದು ದಿನ ಮೈದುನನೊಂದಿಗೆ ನಡೆದ ಜಗಳದ ನಿಮಿತ್ತದಿಂದ, ಅತ್ತೆ-ಮಾವಂದಿರ ಮಾತನ್ನು ಕೇಳದೆ, ನಾದಿನಿ ವಸಂತುವಿನ ಪ್ರೀತಿಯನ್ನು ಗಣಿಸದೆ, ತನಗೊಬ್ಬ ಅಚ್ಚುಮೆಚ್ಚಿನ ಗಂಡನಿರುವುದನ್ನು ನೆನಪಿಗೆ ಕೂಡ ತಂದುಕೊಳ್ಳದೆ— ರೋಷಪರವಶಳಾಗಿ— ಒಬ್ಬಳೇ ತವರು ಮನೆಗೆ ಹೊರಟು ಹೋಗುವಳು. ಹೋಗುವಾಗ [illegible] ಅಹುದು.

ಮೈದುನ ಸೀನುವಿಗೂ ಅತ್ತಿಗೆಯ ವಿಷಯದಲ್ಲಿ [illegible] ಆಕೆಯ ಎಚ್ಚರಗೇಡಿತನವೊಂದು, ಸೀನುವಿನ ಕ್ರಿಕೆಟ್ ಪಂದ್ಯಾಟದ ಪ್ರಯಾಣಕ್ಕೆ ತಡೆಮಾಡಿದುದರಿಂದ, ರೋಷದ ಮರೆವಿನಲ್ಲಿ [illegible] ಗೆ ಕಟುನುಡಿಗಳನ್ನಾಡಿದನಿಷ್ಟೆ! ಆದರೆ ಆಕೆ ಹೋದ [illegible] ಮೇಲೆ ಅವನಿಗೂ ಪಶ್ಚಾತ್ತಾಪವಾಗಿ ಅತ್ತಿಗೆಗಾಗಿ ಕಳವಳಪಡುವನು.

ತವರಿಗೆ—ಆಕಸ್ಮಿಕವಾಗಿ—ಬಂದುದಕ್ಕಾಗಿ, ಶಾಂತಳ ತಾಯಿಯು ಸ್ನೇಹಿತೆಯರ ಬಳಗ ಸಲ್ಲದ ಸುದ್ದಿಯನ್ನು ಹುಟ್ಟಿಸುವುದು. ಅತ್ತೆಯ ಮನೆಯಿಂದ ಕರೆಯೋಲೆ ಬಾರದುದಕ್ಕಾಗಿ ತಂದೆ-ತಾಯಿಗಳು ಕೂಡ ಏನೋ ಸಂದೇಹಕ್ಕೊಳಗಾಗುವರು. ಹಿಂದೆ ತವರಿನಲ್ಲಿ ಮುದ್ದಿನ ಮಣಿಯಾಗಿದ್ದ ಶಾರದಾ, ಈಗ ಎಲ್ಲರ ಸಂದೇಹ-ಜುಗುಪ್ಸೆಗಳಿಗೆ ಕಾರಣಳಾಗುವಳು. ಅಣ್ಣ-ಅತ್ತಿಗೆಯರ ನಡತೆಯಂತೂ ಆಕೆಯ ಹೃದಯಕ್ಕೆ ಬರೆಯೆಳೆದು ಬಿಡುವುದು. ತವರಿನಲ್ಲಿ ಶಾಂತಾ ಅನುಭವಿಸಬೇಕಾಗಿ ಬಂದ ಭವಣೆ, ಒಂದು ದುಃಖದ ಕಡಲಾಗಿದೆ. ಶಾಂತಳಿಗೆ ತಾನು ಸಿಡುಕುತನದಿಂದ ಒಮ್ಮೆಲೇ ಹೊರಟುಬಂದುದಕ್ಕೆ ಸಾಕಷ್ಟು ಪಶ್ಚಾತ್ತಾಪವಾದರೂ, ಅತ್ತೆಯಮನೆಯ ಕರೆ ಬಾರದುದರಿಂದ, ಅನಿವಾರ್ಯವಾಗಿ ಅಲ್ಲಿಯೆ ಕಳವಳದ ಕಹಿಯನ್ನು ಅನುಭವಿಸುತ್ತ ಇದ್ದುಬಿಟ್ಟಳು.

ಇತ್ತ ಶಾಂತಳ ಅತ್ತೆಮನೆಯಲ್ಲಿ, ಚಿಕ್ಕನಾದಿನಿ ವಸಂತಾ ಅತ್ತಿಗೆಗಾಗಿ ಹೃದ್ರೋಗ ಹಚ್ಚಿಕೊಂಡಂತೆ ಮಾಡಿದಳು. ಈ ಹೃದಯಾಘಾತದಲ್ಲಿಯೆ ಪ್ರಾರಂಭವಾದ ಜ್ವರ, ಟಾಯ್‌ಫಾಯಿಡಾಗಿ ಪರಿಣಮಿಸಿ, ಪರಿಸ್ಥಿತಿ ವಿಷಮತೆಗೆ ಇಳಿಯಿತು. ಜ್ವರದ ಭರದಲ್ಲಿ ಅತ್ತಿಗೆಯ ಹೆಸರನ್ನೇ ಕನವರಿಸುತ್ತಿದ್ದಳು ವಸಂತು.

ತವರಿನ ವಾಸದ ವಿಷವನ್ನು ಅನುಭವಿಸಲಾರದೆ ಶಾಂತಾ, ಮತ್ತೆ ಒಬ್ಬಳೇ ಹೊರಟು ಅತ್ತೆಯ ಮನೆಗೆ ಬರುವಳು. ಅತ್ತೆಯ ಮನೆಯಲ್ಲಿ ಎಲ್ಲರೂ ಪ್ರೀತಿಯಿಂದ ಅವಳನ್ನು ಸ್ವಾಗತಿಸುವರು. ಶಾಂತಳ ದರ್ಶನದಿಂದ ವಸಂತುನಿಗೂ ಗುಣವಾಗುವ ಸೂಚನೆಯಿಂದ ಕಾದಂಬರಿ ಕೊನೆಗೊಳ್ಳುವುದು.

ಅತ್ತಿಗೆ ಶಾಂತಳನ್ನು ಕೇಂದ್ರವಾಗಿಟ್ಟುಕೊಂಡೇ ಕಥೆ ಬೆಳೆದು ನಿಂತಿದೆ. ಆದುದರಿಂದ ಅತ್ತಿಗೆಯ ಪಾತ್ರಪರಿಪುಷ್ಟಿಯ ಕಡೆಗೇ ಹೆಚ್ಚು ಲಕ್ಷ್ಯ ಪೂರಯಿಸಲಾಗಿದೆ. ಶಾಂತಳ ಅತ್ತೆಯ ಮನೆಯ ಜನರೆಲ್ಲ ಒಳ್ಳೆಯವರು; ತವರ ಮನೆಯ ಬಳಗವೆಲ್ಲ— ತಾಯಿಕೂಡ— ಹೃದಯವಿಹೀನರು, ಸಂಸ್ಕೃತಿಯಿಲ್ಲದವರು. ಆ ಕೆಸರಿನಲ್ಲಿ ಶಾಂತಳು ಒಬ್ಬಳೇ ಕಮಲದಂತೆ ಹುಟ್ಟಿಕೊಂಡಿರುವಳೆಂದು ಹೇಳಬೇಕೆ? ಮೈದುನನೊಂದಿಗೆ ಜಗಳವಾಡಿ ಮೊಂಡುತನದಿಂದ ತವರಿಗೆ ಹೊರಟುಹೋದ ಘಟನೆಯನ್ನೊಂದಿದರೆ, ಈ ಕಮಲಕ್ಕೂ ತವರಿನ ಕೆಸರು ಮೆತ್ತಿಕೊಂಡಿದೆಯೆಂದೆ ಹೇಳಬೇಕಾಗುವುದು. ಈ ಮಲಿನತೆಯು ಮೂಲಕವಾಗಿಯೆ ಶಾಂತಾ ರಸಿಕವಾಚಕರಿಂದ, ಪಡೆಯಬೇಕಾದಷ್ಟು ಸಹಾನುಭೂತಿಯನ್ನು ಪಡೆಯಳು. —'ಕುಂಜವಿಹಾರಿ'

ಸಾಹಿತ್ಯವಿಹಾರ

ಚಲಚ್ಚಿತ್ರ ದಿಗ್ದರ್ಶಕ ಕನ್ನಡಿಗರೊಬ್ಬರು ಸಿಂಗಾಪುರದಲ್ಲಿ!

ಸುಪ್ರಸಿದ್ಧ ನಟರೂ ಚಲಚ್ಚಿತ್ರ ದಿಗ್ದರ್ಶಕರೂ ಆದ ಶ್ರೀಮಾನ್ ವಾಸುದೇವ ಗಿರಿಮಾಜಿಯವರ ಹೆಸರನ್ನು ಅನೇಕ ಕನ್ನಡಿಗರು ಕೇಳಿರಲಿಕ್ಕೆ ಸಾಕು. ದಿವಂಗತ ಪೀರ್ ಔವರೊಂದಿಗೆ, ಅವರ 'ಸಂಸಾರ ನೌಕಾ' ಮೊದಲಾದ ನಾಟಕಗಳಲ್ಲಿ ಮುಖ್ಯ ನಾಯಿಕೆಯ ಪಾತ್ರವನ್ನು ಅಭಿನಯಿಸುತ್ತಲಿದ್ದರು. ಬೆಂಗಳೂರಿನ ನಾಟ್ಯವಿಲಾಸಿಗಳ ಗುಂಪಿನೊಂದಿಗೆ ಉತ್ತರಕರ್ನಾಟಕಕ್ಕೆ ಬಂದು, ಗದುಗು ಧಾರವಾಡ ಹುಬ್ಬಳ್ಳಿಗಳಲ್ಲಿ ನಾಟಕಗಳನ್ನಾಡಿ, ತಮ್ಮ ಸ್ತ್ರೀಪಾತ್ರದ ಅಭಿನಯದಿಂದ ಪ್ರೇಕ್ಷಕರನ್ನು ಮುಗ್ಧಗೊಳಿಸಿದವರು. ಬೆಂಗಳೂರನ್ನು ಬಿಟ್ಟಮೇಲೆ ಬಂಗಾಲಕ್ಕೆ ಹೋಗಿ ಇದ್ದು, ಅಲ್ಲಿ ಚಲಚ್ಚಿತ್ರ ಕಲಾಭಿಜ್ಞರಾದ ಸ್ವರ್ಗೀಯ ಬರುವಾ ಅವರೊಂದಿಗೆ ಸಹಾಯಕ ದಿಗ್ದರ್ಶಕರಾಗಿದ್ದುಕೊಂಡು ಒಂದೆರಡು ಚಿತ್ರಗಳನ್ನು ಪ್ರಕಟಿಸಿದುದೂ ಉಂಟು. ಈಗ ಶ್ರೀಮಾನ್ ವಾಸುದೇವರಾಯರು ಸಿಂಗಾಪುರದಲ್ಲಿಯ ಮಲಯಾ ಫಿಲ್ಮ್ ಪ್ರಾಡಕ್ಷನ್ಸ್ ಲಿಮಿಟೆಡ್ ಎಂಬ ಸಂಸ್ಥೆಯಲ್ಲಿ ಮುಖ್ಯ ದಿಗ್ದರ್ಶಕರಾಗಿ ನೇಮಕಹೊಂದಿ, ಅಲ್ಲಿ ಚಲಚ್ಚಿತ್ರ ನಿರ್ಮಾಣಕಾರ್ಯವನ್ನು ಆರಂಭಿಸಿದ್ದಾರೆ. ಅಲ್ಲಿಯ ತಮ್ಮ ಕಾರ್ಯದ ಬಗ್ಗೆ ಶ್ರೀ. ವಾಸುದೇವರಾಯರು ನನಗೊಂದು ಕಾಗದ ಬರೆದು ಹೀಗೆ ತಿಳಿಸಿದ್ದಾರೆ :

"ಈ ತಿಂಗಳು (ನವಂಬರ್) ಮೊದಲನೆಯ ತಾರೀಖಿನಿಂದ ನಾನು ನನ್ನ ಚಿತ್ರದ ಕೆಲಸ ಆರಂಭಿಸಿದ್ದೇನೆ. ಈಗಾಗಲೇ ೫೦೦೦ ಅಡಿಗಳಷ್ಟು ಕೆಲಸ ಮುಗಿಸಿದ್ದಾಗಿದೆ. ಡಿಸೆಂಬರು ೧೫ರೊಳಗೆ ಚಿತ್ರದ ಕಾರ್ಯ ಮುಗಿಯುತ್ತದೆ. ಎರಡು ತಿಂಗಳು ೭೦ ದಿನದ ಒಳಗೆ ಒಂದೊಂದು ಚಿತ್ರವನ್ನು ಮುಗಿಸಬೇಕು. ಚಿತ್ರತಯಾರಿಕೆಗೆ ಬೇಕಾದ ಎಲ್ಲಾ ಸಿದ್ಧತೆಗಳೂ ಸರಿಯಾಗಿವೆ; ಹೆಚ್ಚು ಬೇಕಾದರೆ ಕೂಡಲೆ ಒದಗಿಸಿಕೊಡುತ್ತಾರೆ. ಯಾವ ವಿಧದಲ್ಲೂ ಸಲಕರಣೆಗಳನ್ನು ಒದಗಿಸುವುದರ ಬಗ್ಗೆ ವಿಲಂಬವಾಗಿ ಕೆಲಸ ನಿಲ್ಲುವುದಿಲ್ಲ. ಪ್ರತಿದಿನ ಮೂರು ಬೇರೆ ಬೇರೆ ಚಿತ್ರಗಳ ತಯಾರಿಕೆ ನಡೆಯುತ್ತಿರುತ್ತದೆ. ಬೇರೆ ಬೇರೆ ದಿಗ್ದರ್ಶಕರು ಕೆಲಸ ನೋಡುತ್ತಾರೆ.

"ನಾನು ದಿಗ್ದರ್ಶಿಸುತ್ತಿರುವ ಚಿತ್ರದ ಹೆಸರು "The Castle in The Air" ಎಂದರೆ "ಗಾಳಿಯ ಗೋಪುರ". ಮಲಯಾ ಭಾಷೆಯಲ್ಲಿಯ ಹೆಸರು "ಬರಾಂಗ್ ಕಾಯಾ ಬಾರೋ". ಹಾಸ್ಯರಸ ಪ್ರಾಧಾನ್ಯವಾದ ಈ ಚಿತ್ರದಲ್ಲಿ ಪುರುಷಭೂಮಿಕೆಯನ್ನು ಮಿ. ಶಮ್-ಸುದ್ವೀನ್ ಅವರೂ ಸ್ತ್ರೀಭೂಮಿಕೆಯನ್ನು ಮಿಸ್ ಸಾಡಿಯಾ,— ಮರಿಯಾನಿ ಮತ್ತು ಶ್ರೀಮತಿ ನ್ಯಾಂಗ್ ಯಾತಿ ಮಾ ವಹಿಸುವರು. ಈಕೆ ಎಂದರೆ ನ್ಯಾಂಗ್ ಯಾತಿ ಮಾ, ನನ್ನ ಹಿಂದೂದೇಶದ ಉಚ್ಚ ತರಗತಿಯ ಅಭಿನೇತ್ರಿಯರ ಸಾಲಿನಲ್ಲಿ ನಿಲ್ಲುವ ಯೋಗ್ಯತೆಯುಳ್ಳ ನಟಿಯು. ಮಿಸ್ಟರ್ ಶಮ್ಸುದ್ದೀನ ಅವರು ಚಾರ್ಲಿ (ಇಂಡಿಯ ಇವರ ತರಗತಿಯವರು.

"ಇಲ್ಲಿಯ ನಟ-ನಟಿಯರಿಗೆ ರೂಪು ಪ್ರಾಧಾನ್ಯವಾಮ ಅಭಿನಯ ಕುಶಲತೆಗೇ ಹೆಚ್ಚು ಬೆಲೆ. ಕಂಪನಿಯಲ್ಲಿ ಕೆಲಸ ಮಾ ನಟ-ನಟಿಯರಿಗೆ ಇರಲು ಮನೆಗಳನ್ನು ಒದಗಿಸಿದ್ದಾರೆ. ಬಾಡ ಯನ್ನು ಕಂಪನಿಯವರೇ ಕೊಡುತ್ತಾರೆ. ನಟ-ನಟಿಯರಿಗಷ್ಟೆ ಅ ಹೊರಗಿನಿಂದ ಎಂದರೆ ಇಂಡಿಯಾದಿಂದ ಬಂದಿರುವ ದಿಗ್ದರ್ಶಕ ಕ್ಯಾನುರಾಮೆನ್ನುಗಳು, ಎಡಿಟರರು— ಇವರುಗಳಿಗೂ ಮನೆ ಸೌಕರ್ಯವನ್ನು ಮಾಡಿಕೊಟ್ಟಿದ್ದಾರೆ. ಕಂಪನಿಯವರು ನೌಕರ ಎಲ್ಲ ವಿಷಯಗಳಲ್ಲಿಯೂ ಅನುಕೂಲತೆ ಕಲ್ಪಿಸಿ ಕೊಟ್ಟಿರುವರು.

ನಿಮ್ಮ ನೂತನ ಸಾಮಾಜಿಕ ಕಾದಂಬರಿ "ಮುಗಿಲ ಮದು ಯನ್ನು ದಯೆಯಿಟ್ಟು ಕಳಿಸಿಕೊಡಿರಿ, ಓದಿ ನೋಡುವೆ. ಇಲ್ಲಿ ಸಾಮಾಜಿಕ ನಡೆನುಡಿಕೆ-ವ್ಯವಹಾರಗಳಿಗೆ ಹೊಂದುವಂತಿದ್ದರೆ, ಚಿ ಕ್ಯಾಗಿ ಸ್ವೀಕರಿಸಲು ಕಂಪನಿಯ ಒಡೆಯರಿಗೆ ಹೇಳುತ್ತೇನೆ."

ಕನ್ನಡಿಗರೊಬ್ಬರು ಸಾಹಸದಿಂದ ಮುಂದುವರಿದು ಸಿಂಗಾಪ ದಂತಹ ವಿದೇಶದಲ್ಲಿ ಚಲಚ್ಚಿತ್ರ ದಿಗ್ದರ್ಶಕನಾಗಿ ಕಾರ್ಯಮಾ ತ್ತಿರುವುದು ಕನ್ನಡನಾಡಿಗೆ ಹೆಮ್ಮೆಯ ವಿಷಯ. ಎಲ್ಲಿಯೇ ಇದ್ದ ಶ್ರೀ. ವಾಸುದೇವ ಗಿರಿಮಾಜಿಯವರಿಗೆ ಕನ್ನಡ ನಾಡು-ನುಡಿ ಮರೆವು ಎಂದೂ ಆಗುವುದಿಲ್ಲ. ಸ್ವದೇಶಕ್ಕೆ ಮರಳಿದ ಮೆ 'ರಾಜಯೋಗಿ' 'ಅಶಾಂತಿಪರ್ವ' ಈ ಐತಿಹಾಸಿಕ ಕಾದಂಬ ರಿಗಳನ್ನು ಚಲಚ್ಚಿತ್ರವನ್ನಾಗಿ ನಿರ್ಮಿಸಿಯೇ ತೀರುವೆನೆಂಬ ಹಂಬ ಲವನ್ನೂ ಇಟ್ಟುಕೊಂಡಿದ್ದಾರೆ. ಶ್ರೀ. ವಾಸುದೇವರಾಯರ ಕೃ ನಿರ್ಮಿತಿ. ಕರ್ನಾಟಕದ ಕೀರ್ತಿಗೆ ಕಾರಣವಾಗಲೆಂದು ನಮ ಹಾರೈಕೆ.

— ಸಂಪಾದಕ

ಕನ್ನಡದಲ್ಲಿ ಪತ್ರಿಕಾಪ್ರಪಂಚ

(ಸ್ಥೂಲಪರಿಚಯ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

ಇಪ್ಪತ್ತನೆಯ ಶತಮಾನದ— ಈ ದಿನಗಳಲ್ಲಿ ನಮ್ಮ ಕನ್ನಡವ ಭಾಷೇತರಗಳಂತೆ— ಪತ್ರಿಕೆಗಳ ಸುರಿಮಳೆಯಲ್ಲಿ ಯಾವ ದಿ ಯಿಂದಲೂ ಹಿಂದುಳಿದಿಲ್ಲ. ಹಲವಾರು ವರ್ಷಗಳ ಹಲವಾ ನಷ್ಟಗಳ— ಅನಂತ ಧಾರೆಯಲ್ಲಿ ಉಳಿಯುತ್ತ ಬಂದಿರುವ ಹ ವಾರು ಪತ್ರಿಕೆಗಳ ಲೆಕ್ಕಮೊಡನೆ, ದಿನಕ್ಕೊಂದರಂತೆ ಮೊಳೆದೆ ನಾಶವಾದ—ನಾಶವಾಗುವ— ಪತ್ರಿಕೆಗಳನ್ನು ಸೇರಿಸಿದರೆ, ನಾವು ನ ದೇಶದ ಆರ್ಥಿಕ ದುಃಸ್ಥಿತಿಗೂ— ಕೆಲವು ಪತ್ರಿಕೆಗಳು ಕೈಗೊ

ಧೋರಣೆಗೂ ನಾಚಬೇಕಾಗಿದೆ; ಮರುಗಬೇಕಾಗಿದೆ. ವ್ಯಕ್ತಿದ್ವೇಷ, ವರ್ಣದ್ವೇಷ— ವ್ಯಾಪಾರದೃಷ್ಟಿ, ಪ್ರಚಾರದೃಷ್ಟಿ— ಈ ಭಾವನೆಯಿಂದ ತಾತ್ಕಾಲಿಕವಾದ ಕ್ರಾಂತಿಯನ್ನೆಬ್ಬಿಸಿ— ವಿವಿಧಾಕರ್ಷಣೆಗಳ ಪ್ರಚಾರದಿಂದ ಮುಂದುವರಿದ ಪತ್ರಿಕೆಗಳ ಸಾಲು ಒಂದೆಡೆಯಲ್ಲಿಯಾದರೆ, ಮತ್ತೊಂದೆಡೆ ಸಮಾಜಪ್ರೇಮ-ದೇಶಪ್ರೇಮ-ಭಾಷಾಪ್ರೇಮಗಳನ್ನು ಹೃದಯದಲ್ಲಿ ತುಂಬಿ ಮೊರೆದಾಡುವ ಪತ್ರಿಕೆಗಳ ಚಿಲುವಿನ ಸಾಲು! ಹೀಗೆ ಇಂದಿನ ಪತ್ರಿಕಾ ಪ್ರಪಂಚವು ಇತ್ತಂಡವಾಗಿ ಹರಿದುನಿಂತಿದೆ.

ಮಾನವನ ಜೀವನೋನ್ನತಿಗೆ ಅನುವಾಗುವ, ವಿವಿಧ ಕ್ಷೇತ್ರವ್ಯವಸಾಯಿಯಾವ— ಜನತೆಗೆ ವಿವಿಧ ಮುಖದಿಂದ ಜೀವನಕ್ಕೆ ನೆರವಾಗುವ—ಸುನೋವೈಶಾಲ್ಯಕ್ಕೆ ನೆರವನ್ನಿತ್ತು ಸೌಹಾರ್ದವನ್ನು ತುಂಬಿ ಹೃದಯವನ್ನು ಬೆಳಗುವ— ಈ ದೃಷ್ಟಿಯು, ಪತ್ರಿಕೆಯ ಗುರಿಯಾಗಿರಬೇಕು. ಸಾಹಿತ್ಯವೆಂದರೂ ಇದೇ! ಸಾಹಿತ್ಯದ ಅವತರಣವೂ ಇದಕ್ಕಾಗಿಯೆ. ಹೃದಯಕ್ಷೇತ್ರದ ವ್ಯವಸಾಯವೇ ಸಾಹಿತ್ಯದ ಗುರಿಯೆಂದಾದರೆ— ಜೀವನದಲ್ಲಿ ಬರತಕ್ಕ ಯಾವ ಪ್ರಸಂಗದಲ್ಲೂ ಮಾನವನು ಹಿಮ್ಮೆಟ್ಟದೆ ವಿಚಾರಶೀಲನಾಗಿ ಮುಂಬರಿವಂತೆ ಮಾಡುವುದೇ ಸಾಹಿತ್ಯದ ದರ್ಶನವಾಯಿತು. ಇಂತಹ ವಿಚಾರಗಳನ್ನು ಪತ್ರಿಕೆಗಳೂ ಸಾರಬೇಕು. ಅಂದಬಳಿಕ ಪತ್ರಿಕೆಗಳ ಹೃದಯವೂ ಸಾಹಿತ್ಯಕ್ಷೇತ್ರದಿಂದ ಹೊರಗಲ್ಲ ಎಂಬ ಸತ್ಯವನ್ನು ನಾವಿಲ್ಲಿ ಕಾಣಬಹುದು. "ಸಾಹಿತ್ಯವು ಸಾಹಿತ್ಯಕ್ಕಾಗಿ— ಕಲೆ ಕಲೆಗಾಗಿ" ಎಂಬ ಮಾತನ್ನು— ಒರ್ವ ತತ್ತ್ವಜ್ಞನು ಆಡಿದ್ದರೂ ಅದನ್ನೇ ಕೆಲವರು "ಸಾಹಿತ್ಯವು ಜೀವನಕ್ಕಾಗಿ" ಎಂದು ಮಾರ್ಪಡಿಸುವ ಪ್ರಸಂಗವನ್ನು ತಂದೊಡ್ಡಿದರೂ, ನಾವು ಮೊದಲ ಮಾತಿನಲ್ಲಿ ಆಳವಾಗಿ ಹುದುಗಿದ ಕವಿಯ ಆಶಯವನ್ನು— ಎರಡನೆಯದರಲ್ಲಿ ಸ್ಫುಟವಾಗಿ ಹೇಳಿದ ಅದರ— ಸಾರವನ್ನು ಕಾಣಬಹುದು. ಇಬ್ಬರೂ ಸಾರಿದುದು ಒಂದೇ ದಾರಿಯನ್ನು. ಒಂದೊಂದೇ ವಿಚಾರವನ್ನು ಅವಲಂಬಿಸಿ ಸಾಗುವ ಸಾಹಿತ್ಯಪ್ರಸಂಚದ— ಪತ್ರಿಕೆಗಳಿಂದ ಹೊರತಾದ ಇತರ ಪಂಥಗಳ ಧಾಟಿಯು ಒಂದಾದರೆ— ಪತ್ರಿಕೆಗಳ ವಿವಿಧವಿಚಾರಗಳಿಂದ ತುಂಬಿ— ವಿವಿಧಾಭಿರುಚಿಗಳನ್ನೊಳಗೊಂಡು— ವಿವಿಧ ಕ್ಷೇತ್ರವ್ಯವಸಾಯಿಗಳನ್ನು ಆದರದಿಂದ ಆಹ್ವಾನಿಸುವ ಧಾಟಿ ಮತ್ತೊಂದು. ಈ ಧಾಟಿಯು ಗಮನೀಯವಾಗಿದೆ. ಆದುದರಿಂದಲೇ ಉತ್ತಮ ಸಂಪಾದಕನ ದೃಷ್ಟಿಯು ವಿಶಾಲವಾಗಿದ್ದು ಜನತೆಯೊಡನೆ ವಿವಿಧ ವಿಚಾರಗಳಲ್ಲೂ ಸಮರಸವಾಗಬೇಕಾಗಿದೆ. ಆತನ ಹೊಣೆ ದೊಡ್ಡದು. ಆತನು ಕರ್ತವ್ಯಪರಾಯಣನಿದ್ದಂತೆ ಜನತೆಯ ಹಿತರಕ್ಷಕನೂ ಇರಬೇಕು. ಪಕ್ಷಪಾತಗಳಿಂದ ದೂರನಾಗಿದ್ದು, ನ್ಯಾಯಪಕ್ಷಪಾತಿಯಾಗಿದ್ದು, ತನ್ನೆದೆಯಿಂದ ಚಿಮ್ಮುವ ವ್ಯಕ್ತಿಸ್ವಾತಂತ್ರ್ಯದ ಬುಗ್ಗೆಯನ್ನು ಜನತೆಯ ವೈಯಕ್ತಿಕ ವಿಚಾರಕ್ಕೆ ಚಿಮ್ಮಬೇಕು. ಆಗ ಸಂಪಾದಕನು ತಾನು ಕೈಗೊಂಡ ಧ್ಯೇಯವನ್ನು ಸಫಲವಾಗಿಸಿದಂತಾಯಿತು. ದಿನಪತ್ರಿಕೆ ವಾರಪತ್ರಿಕೆ, ಪಕ್ಷಪತ್ರಿಕೆ, ಮಾಸಿಕ-ತ್ರೈಮಾಸಿಕ-ವಾರ್ಷಿಕಗಳೆಂಬ ವಿವಿಧರೂಪ-ರೀತಿಗಳಿಂದ ಹರಿದಾಡುವ ಪತ್ರಿಕೆಗಳು, ಈಗ ಸಾಕಷ್ಟಿವೆ. ದಿನಪತ್ರಿಕೆಗಳು ಕೇವಲ ರಾಷ್ಟ್ರ-ಅಂತರರಾಷ್ಟ್ರಗಳ ಸಮಾಚಾರವನ್ನು ತುಂಬಿದರೆ—. ವಾರಪತ್ರಿಕೆಯು ತುಸು ವಿಪುಲವಾಗಿ ಅದೇ ವಿಚಾರಗಳಲ್ಲಿ ಕೆಲವನ್ನು ಕೂಲಂಕಷವಾಗಿ ವಿಮರ್ಶಿಸಿ,— ರಾಷ್ಟ್ರೀಯ ಭಾವನೆಯನ್ನು ಕೆರಳಿಸುವ ಕೆಲವು ಲೇಖನಗಳನ್ನೂ, ರಾಷ್ಟ್ರದ ಪ್ರಗತಿ—ಜನತೆಯ ನೈತಿಕ-ಧಾರ್ಮಿಕ ಆರ್ಥಿಕೋನ್ನತಿ— ಇವುಗಳಿಗೆ ಸಂಬಂಧಿಸಿದ ವಿಚಾರಗಳುಳ್ಳ ಲೇಖನಗಳನ್ನೂ, ಕತೆಗಳನ್ನೂ ಒಳಗೊಂಡಿರಬೇಕು; ಮಾತ್ರವಲ್ಲದೆ ದೇಶದ ವಿವಿಧ ಮಾರ್ಗಗಳಲ್ಲಿ, ಜೀವನವನ್ನು ಸಾಗಿಸುವ ಜನತೆಯ ಸುಖಮಯ ಜೀವನಕ್ಕನುವಾಗುವ— ಜೀವನಾನುಕೂಲ ಪದ್ಧತಿಗಳನ್ನು ರಾಷ್ಟ್ರ ಹಾಗೂ ಅಂತರರಾಷ್ಟ್ರಗಳ ಜೀವನದ ತುಲನೆಯೊಡನೆ ತೂಗಿ ಸಾರಬೇಕು. ಈ ದೃಷ್ಟಿಯಿಂದ ನೋಡಿದರೆ, ಮಂಗಳೂರಿನ ನವಭಾರತ, ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕಗಳೂ ವಾರಪತ್ರಿಕೆಗಳಲ್ಲಿ ಪ್ರಮುಖವಾದ ಕರ್ಮವೀರ, ಜನಪ್ರಗತಿಗಳೂ ಶ್ಲಾಘನೀಯವಿವೆಯೆಂದೆನ್ನಲು ಅಡ್ಡಿಯಿಲ್ಲ. ಇಂತಹ ಪತ್ರಿಕೆಗಳು ಚಿರವಾಗಿ ಉಳಿಯುವುದರಲ್ಲೂ ಸಂದೇಹವಿಲ್ಲ. ಕಳೆದ ಮಹಾ ಚುನಾವಣೆಯ ತುಸು ಹಿಂದೆ ಹೊಳೆದೋರಿದ ಕೆಲವು ವಾರ ಪತ್ರಿಕೆಗಳಿದ್ದುವು. ಹುಟ್ಟುವಾಗಲೇ ತೋರಿದ ರೀತಿ-ನೀತಿ-ಧ್ಯೇಯಗಳು ಚುನಾವಣೆಯ ಕಾಲದಲ್ಲಿ ಬದಲಾಗಿ— ತಮ್ಮ ಹಿರಿಮೆಯನ್ನು ಈಗ ಉಳಿಸಿಕೊಳ್ಳಲಾರದೆ ಹೋದುವಲ್ಲಾ—ಎಂಬುದು ಖೇದದ ವಿಷಯ. ಅವು ಪ್ರಚಾರವನ್ನು ಕೈಕೊಂಡುವು. ಅವುಗಳ ಪ್ರಚಾರದ ಹೊನಲಲ್ಲೇ ಜತೆಗೊಂಡು ಹರಿದ ಕೆಲವು ಪತ್ರಿಕೆಗಳೂ ಇವೇ ದಾರಿಯಲ್ಲೇ ನಾಗುತ್ತಿವೆಯೆಂದರೆ— ಅತಿಶಯೋಕ್ತಿಯಾಗದು.

ಇನ್ನು ಮಾಸಿಕಗಳು. ಇವುಗಳ ವಂಗಡಗಳೇ ತುಂಬ. ಚಲಚ್ಚಿತ್ರ, ವಿನೋದ, ಸಾಹಿತ್ಯ, ಮಹಿಳಾ, ಬಾಲಕ ಇವಕ್ಕೆ ಸಂಬಂಧಿಸಿದ ಪತ್ರಿಕೆಗಳೇ ಹಲವಾರು. ಏನೆಂದರೂ ಚಲಚ್ಚಿತ್ರ, ವಿನೋದ, ಇವುಗಳಿಗೆ ಮಿಾಸಲಿರಿಸಿದ ಪತ್ರಿಕೆಗಳ ಉದ್ದೇಶವೇ ಇನ್ನೂ ನೆರವೇರಿಲ್ಲ ಎಂಬುದನ್ನು ಹೇಳದಿರಲು ನಿರ್ವಾಹವಿಲ್ಲ. ಚಲಚ್ಚಿತ್ರ ಮಾರ್ಗದ ಯಥಾರ್ಥ ಕಥನಗಳೂ— ನಿರ್ಮಲವಾದ ಸೂಕ್ಷ್ಮವಾದ ಸತ್ಯದೃಷ್ಟಿ ಮತ್ತು ಹದವಾದ ಅನಾಸಕ್ತಿಯಿರುವ ವಿನೋದ ಚಿತ್ರಗಳೂ ನಮ್ಮಲ್ಲಿ ಇಲ್ಲವೆಂಬುವನ್ನು ಹೇಳಲೇಬೇಕಾಗಿದೆ. 'ಕೊಠಂಜಿ'ಯು ಕೆಲವುಮಟ್ಟಿಗಾದರೂ ಈ ಬಗೆಯಲ್ಲಿ ಕಳೆ ಬೀರಿನಿಂತಿದೆಯೆಂಬುವನ್ನು ಸಂತೋಷದಿಂದ ಹೇಳಬೇಕಾಗಿದೆ. ಯಥಾರ್ಥ ವಿನೋದದ ಬೆಳಕನ್ನು ಬೀರುವ ಹಾಸ್ಯ ಪತ್ರಿಕೆಗಳ ಕೊರತೆ ನಮ್ಮಲ್ಲಿ ತುಂಬಾ ಇದೆ. ಅದು ಬೆಳೆಯಬೇಕು. ಯಾಕೆಂದರೆ "ನಗಲಾರದ ದೇಶ-ಜನ ನೆಲೆಯಾಗಿ ಬಾಳುವುದು ಅಸಾಧ್ಯ". ಈ ಮಾತು ಸತತ ಸತ್ಯ.

ಇನ್ನು ಮಹಿಳಾ ಪತ್ರಿಕೆಗಳು. ಇವುಗಳ ಬೆಳೆವಣಿಗೆಯು ತೀರಾ ಸಾಲದು. ವಿಚಾರ ಧಾರೆಯ— ಅಭಾವ ತುಂಬಾ ಇದೆ. ಈ



ಪತ್ರಿಕೆಗಳಿಂದ ಹಿಂದಿಗಾಗಿ ಕೆಲವು ಸಾಪ್ತಾಹಿಕ ಪಾಕ್ಷಿಕ ಪತ್ರಿಕೆಗಳು ಮಹಿಳೆಯರಿಗಾಗಿಯೆ ಪ್ರಕಾಶಿಸಲ್ಪಡುತ್ತಿದ್ದುವು. ಅವು— ಪತ್ರಿಕೆಯ ಹೆಸರನ್ನು ನೋಡಿದರೆ— ಇವು ಹಿರಿಯರ ಲೇಖನಗಳಿಂದಲೆ ತೆಜ್ಜಾಗಿ ತುಂಬಿದ್ದು, ಮಕ್ಕಳ ಜೀವನದ— ವಿವಿಧ ಕತೆಗಳಿಂದಲೆ ತುಂಬಿ, ಧಗಧಗ್ಯಮಾನವಾದ ಅಲಂಕರಣವನ್ನು ಪಡೆದಿದ್ದರೂ ಒಳಪುಟಗಳಲ್ಲಿ ಪ್ರಸ್ತಾವಗಳ ಸ್ವಾರಸ್ಯಗಳಿಂದಲೂ, ಸಾಹಿತ್ಯಪ್ರಬಂಧ ಸ್ವಾರಸ್ಯಗಳಿಂದಲೂ ಭರಿತವಾಗಿದೆ. ನಮ್ಮ ಭವಿಷ್ಯವು ಶೈಕ್ಷಣಿಕವಾಗಬೇಕಾದರೆ, ಭಾವಿಗಾಗಿ ಮಾತನಾಡಿ ಬಾಲಕ ಮನೋಭಾವವನ್ನು ಹುಟ್ಟಿಸಿ ತುಂಬಿ ಬೆಳೆಯಬೇಕು; ತುಂಬಿ ಬೆಳೆದು ಮುಂದಿನ ಬಿಡಾರ ಸಾಹಿತ್ಯಿಕ ಮಾಸಪತ್ರಿಕೆಗಳ ಕಡೆಗೆ: ನಮ್ಮ ದೃಷ್ಟಿಗೆ ಬೆಳಕಾಗಿ ಕಾಣಿಸಿಗುವ ಉತ್ಕೃಷ್ಟ ಮಾಸಪತ್ರಿಕೆಗಳೆಂದರೆ— ಮನೆಮನೆಯಲ್ಲೂ ತುಂಬ ಜೋಕಾದ, ಕನ್ನಡಿಗರ ಅದರಾಭಿಮಾನಗಳಿಗೆ ಬಿಸಿಯಾದ **ಜಯಂತಿ, ಜೀವನ, ಸುಬೋಧೆ**ಗಳು. ಇವು ಮುಂದು ಪತ್ರಿಕೆಗಳೂ ಸುನಿಷ್ಪತ್ತ ಲೋಕಾನುಭವ, ಪಾಂಡಿತ್ಯಗಳ ಸಮುದಾಯದಿಂದ ಭರಿತವಾದ ವಿದ್ವತ್ಪೂರ್ಣ ಸಂಪಾದಕರ ಸಂಪಾದಕತ್ವದಿಂದ ಜೀವನವನ್ನು ಪಡೆದಿವುಗಳು. ಅಂತೆಯೆ

ಪತ್ರಿಕೆಯನ್ನು ಜೀವನ ಇಷ್ಟೆಯನ್ನು ಜೀರಾಡುವ ಜ್ಞಾನದ ಕೈಯಿಂದಲೂ ನಗಿಸಿದರೆ ಆ ಮಾತು ಅತಿಶಯೋಕ್ತಿಯಾಗಲಾರದು. ಅದರೊಳು ಇಂತಹ ಉತ್ಕೃಷ್ಟ ಮಾಸಪತ್ರಿಕೆಗಳಿಗೆ ಬೆಳ್ಳಿಯ ಮೊಟ್ಟೆಯ ಹೊರಡಿಸಿ ಇನ್ನೊಂದು ಉಂಟಲ್ಲ. ಇಂದಿನ ಜನತೆಯು ಒಂದು ಎಕಸ್ಪ್ರೆಸ್ ಟ್ರೈನ್‌ನಂತೆ ಗಡಿಬಿಡಿಯಲ್ಲಿ ಸಾಗುವ ಕಾರಣದಿಂದ ಇದ್ದುದನ್ನು ಸ್ವೀಕರಿಸಿಕೊಂಡೆ ಸಮಯವನ್ನು ಎಡೆಯನಿಡೋಕಾಗದೆ. ಸಾಹಿತ್ಯವು ಮೊಗೆದಿಟ್ಟಂತೆ ಸುಧಾರಸಭರಿತವಾದ ಲೇಖನಗಳಿಂದಲೂ, ಅತ್ಯುತ್ತಮ ಕಥಾವಸ್ತುಗಳಿಂದಲೂ, ವಿವಿಧಾಭಿರುಚಿಯ ಜನರ ಬೇಡಿಕೆಯನ್ನು ಇತಿಮಿತಿಯಿಂದ ಪೂರೈಸಿ ಸುಧಾರಿಸಿ ಜನಪ್ರಿಯವಾಗಿ ಜನರ ಮನಸ್ಸನ್ನು ಸೂರೆಗೊಳ್ಳುವ ಪತ್ರಿಕೆಯೆ ಮಾಸಿಕಪತ್ರಿಕೆಯಲ್ಲಿ ಕೈಯಾಡಿಸಿತ್ತಿದೆಯೆಂಬುದರಲ್ಲಿ ಸಂಶಯವಿಲ್ಲ. ಅಂತಹ ಪತ್ರಿಕೆಗಳಲ್ಲಿ ಮೊದಲನೆಯದಾಗಿ ಹೇಳಬೇಕಾದ್ದು ಮಾಸಪತ್ರಿಕೆಗಳ ಮೂಲಪುರುಷನಾದ ಮಾಸಪತ್ರಿಕೆಗಳ ಪಿತಾಮಹನಾದ ಶ್ರೀಯುತ ಎಂ. ಚಿದಾನಂದಮೂರ್ತಿಯವರ ಸಂಪಾದಕತ್ವದಲ್ಲಿ ಪ್ರಕಾಶಿಸಲ್ಪಡುತ್ತಿರುವ **ಜಯಂತಿ**. ಇದು ಸ್ವಾತಂತ್ರ್ಯಪೂರ್ವದಲ್ಲಿ ಪ್ರಾರಂಭವಾಗಿ ಸ್ವಾತಂತ್ರ್ಯಾನಂತರದಲ್ಲಿ ಮೈಸೂರಿಗೆ ಬಂದು ಸೇರಿಕೊಂಡಿರುವ ಪತ್ರಿಕೆಗಳಿಗೆ ಮೇಲಾದ್ದು

ಪುಸ್ತಕ ಪುಟ್ಟದಾಗಿದ್ದರೂ ಸಾಂಪ್ರದಾಯಿಕ ಕಾವ್ಯ-ಕವನಗಳನ್ನು ಅಭ್ಯಸಿಸಲಪೇಕ್ಷಿಸುವ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ.

೨. **ಭಾರತದ ಐಕ್ಯ** (ಅನುವಾದಿತ ಸ್ವಸ್ತಕ) ಪಂಡಿತ ಜವಾಹರಲಾಲ ನೆಹರು ಅವರ ಒಲವಿನ ಸಂದೇಶವನ್ನು ಶ್ರೀ. ಗುಜ್ಜಸ್ವಲ್ಲಿ, ಅಧ್ಯಾಪಕ ಮೊಗವೀರ ಸ್ಕೂಲ್ ಫೈನಲ್ ಕ್ಲಾಸು, ಮುಂಬಯಿ ರವರು ಅನುವಾದಿಸಿದ್ದಾರೆ. ಪ್ರಕಾಶಕರು ಪೂರ್ಣಸೂ ಸ್ವಕಾರಸನ ಸಹಕಾರಂಗಾ, ಮುಂಬಯಿ ೧೯. ಕ್ರೌ. ಅ. ೬೦ ಪುಟಗಳು ಬೆಲೆ ೦-೪-೦.

೩. **ಸುವಿಚಾರ ಮಂಥನ** (ನೀತಿವಚನ ಸಂಕಲನ). ಸಂಪಾದಕಾರರು ಶ್ರೀ. ಚಂದ್ರಶೇಖರಸ್ವಾಮಿ ಒರೇಮರ್ಕ, 'ಕಾವ್ಯ ಕರ್' ಇತ್ಯಾದಿ. ಮತ್ತು ಶ್ರೀ. ಸದ್ಗುರಾಜನ್ ಬಾಕೇಕುಂದ್ರಿ ರಾ. ಬಾ. ವೃತಿಷ್ಠಾ ಪ್ರಚಾರಕಕಾರ್ಯದರ್ಶಿ. ಬೆಳಗಾಂವಿಯ ಸುಧಾಗ್ರಂಥಸೂಚಿಯ ಆನೆಯ ಸ್ವಪ್ನ. ಕ್ರೌ. ಅ ೧೦ ಪುಟಗಳು ಬೆಲೆ ೦-೪-೦

೧೦೦ **ಕುಣಿಮಿಂಚು** (ವೈಶ್ಯಸಂಕಲನ) ಶ್ರೀ. ಎನ್. ಎನ್. ಗದಗಕರ್ ಬಿ. ಎ. ಅವರು ಬರೆದಿದ್ದಾರೆ. ಸ್ವಕಾರಕರು ಶ್ರೀ. ಪ. ಬಾ. ಕುಂಕರ್ಣಿ, ಸುಸೋಪರ ಗ್ರಂಥ ಭಾಂಡಾರ, ಧಾರವಾಡ. ಕ್ರೌ. ತಿ. ೬೪ ಪುಟಗಳು ಬೆಲೆ ೦ ೧೪-೦

೧೦೧ **ರಶ್ಮೀಂದ್ರದರ್ಶನ** (ಸಾಹಿತ್ಯವಿಮರ್ಶೆ) ಲೇಖಕರು ಶ್ರೀ. ಸಿರೋಡಿ ಪುಟ್ಟಯ್ಯ ಕಾರಂತ, ಕುಂದಾಪುರ ಕುಂದಾಪುರದ ಲಕ್ಷ್ಮಿ ಒರೆಸ ಸಾಲಯ ಆನೆಯ ಸ್ವಕಟನ ಕ್ರೌ ೮ ೦೦ ಪುಟಗಳು ಬೆಲೆ ೧-೦-೦

ವೈನ್ಯಜೀವನದ ಸಹಜಕಾವ್ಯ! ಕರುಣೆಯ ಕಂಬನಿಯ ಕಡಲು!

— ಪ್ರೇಕ್ಷಕರ ಹೃದಯದಲ್ಲಿ ಮಾನವತೆಯನ್ನು ಮೂಡಿಸಬಲ್ಲ ಸತ್ಯಕಥೆ —

ನನ್ನೇ ಮುನ್ನೇ ಅಥವಾ ಬಡವರ ಬಾಳು

ಅಲ್ಲಾಡ ಚಿತ್ರದವರ ನಿರ್ಮಿತಿ.



ನಿರ್ದೇಶಕರು: ಶ್ರೀ. ಪದ್ಮಾ ಧನುರ್ಧಾರಿ

ಸಂಗೀತ ಶ್ರೀ. ಸುತ್ತಿ ಸುಬ್ಬೋಚಣಾ ಕುಮಾರಿ ಶಕುಂತಲಾ

ಶ್ರೀ. ರಾಜಾ ಸೇನೇ ಸಾಹಸಪ್ರದರ್ಶನ.

ಕರ್ನಾಟಕ ದೇಶದ ಪ್ರಚಾರಕರು: ಧಾರವಾಡದ ಜನತಾ ಪಿಕ್ಚರ್ಸ್ ಅವರು.

ಈ ಚಿತ್ರವನ್ನು ಸ್ಥಳೀಯ ಚಿತ್ರಮಂದಿರದಲ್ಲಿ ಶೀಘ್ರದಲ್ಲಿ ತೋರಿಸಲಾಗುವುದು. ಚಿತ್ರಮಂದಿರದ ವಿವರವನ್ನು ಮುಂದೆ ತಿಳಿಸಲಾಗುವುದು.

ಈ ಸುಸಂದರ್ಭವನ್ನು ಯಾರೂ ಕಳೆದುಕೊಳ್ಳಬಾರದು.

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು ! ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದರ' ತರಂಗರೂಪಕ ಸಂಕಲನ :

ಬೆಳವಡಿ ಮಲ್ಲಮ್ಮ

ಕ್ರಾ. ಅ. ೧೧೬ ಪುಟಗಳು. ಹೊಳಪಿನ ಕಾಗದ. ಬೆಲೆ ೧-೪-೦

ಹೊಸತಾಗಿಯೆ ಹೊರಟ ಕವನಸಂಕಲನ

ಕಾರಹುಣ್ಣಿವೆ

ಇದರಲ್ಲಿ 'ಆನಂದಕಂದ'ರ ರಸವತ್ತಾದ ೫೨ ಕವನಗಳು ಸಂಕಲನಗೊಂಡಿವೆ. ವಿವಿಧ ಭಾವಗಳನ್ನು ವಿಸ್ತರಿಸಿದ ಸುಂದರವಾದ ಭಾವಗೀತಗಳು ! ಸಂಗೀತಗಾರರ ಕಾವ್ಯಗಾಯನ ಕಾರ್ಯಕ್ರಮಕ್ಕೆ ತುಂಬ ಸಹಕಾರಿಯಾದುವು !

ಕ್ರಾ. ಅ. ೧೨೬ ಪುಟಗಳು. ಅಂದವಾದ ಅಚ್ಚು. ಬೆಲೆ ೩-೦-೦.

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ. ಬಸವಣ್ಣನವರು
ನುಗೆಳ ನುದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ. ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯಸಮಸ್ಯೆ' 'ಕರ್ನಾಟಕ ವಿಕೀಕರಣ', ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫೦೦ ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : ಎಸ್. ಡಿ. ಧರಮಟ್ಟಿ, ಶ. ಪ್ರ. ಮಂದಿರ, ಧಾರವಾಡ.

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar -4340 - 53.

ಜಯಂತಿ

ಫೆಬ್ರುವರಿ
೧೯೫೩

ಈ ಸಂಚಿಕೆಯಲ್ಲಿ:

ಹೊಲದೊಡೆಯರ ಹಾಳುಬಾಳು (ಸಂಪಾದಕೀಯ)	ಸಂಪಾದಕರು	೩೨೧
ನಾಡನಡೆ (ವಿಮರ್ಶಾತ್ಮಕ ಟಿಪ್ಪಣಿಗಳು)	'ಕಾಲಭೈರವ'	೩೨೩
ವಿಶ್ವಜ್ಯೋತಿ ಬಾಪು (ಒಂದು ದೃಶ್ಯ)	ಶ್ರೀ. ಜಿ. ಡಿ. ದೇಸಾಯಿ, ಗದಗು	೩೨೫
ಪತ್ರಿಕೋದ್ಯಮಿಯ ವ್ರತಜೀವನ (ಪ್ರಬಂಧ)	ಶ್ರೀ. ಹೋ. ಸೀತಾರಾಮ ಆಚಾರ್ಯ, ಸುರತಕಲ್ಲು	೩೨೮
ನಂದ್ಯಾಕರ ಚಿಂತಿ ? (ಒಂದು ನಲ್ವಾಡು)	'ಆನಂದಕವ'	೩೩೧
ಕಾಗದದ ಹೂಗಳು (ಅನುವಾದಿತ ಕಥೆ)	ಶ್ರೀ. ಪಾ. ಭೀ. ಜೋರಾಪುರ ಬಿ. ಎ.	೩೩೩
ಅಪರಾಧಿ ಬಾಲಕ (ಪರಿಚಯಾತ್ಮಕ)	ಶ್ರೀ. ಬೆಳುವಡಿ ರಾಮರಾಯನು ಬಿ.ಎ. ಪುಣೆ	೩೩೫
ಆಚಾರ್ಯ ಪ್ರಫುಲ್ಲಚಂದ್ರರಾಯ್ (ಜೀವನ)	ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಮ್. ಎಸ್‌ಸಿ.	೩೩೭
ಮುಂಗಲಾಂಗಿಗೆ (ಕವನ)	ಶ್ರೀ. ಮುದೇಸೂರ ಸಂಗಣ್ಣ, ಚಿಗಟೇರಿ	೩೪೧
ಅಸೂಯೆ (ಲಲಿತಪ್ರಬಂಧ)	ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ	೩೪೨
" ....ಪೂತ ! " (ಸಣ್ಣಕತೆ)	ಶ್ರೀ. ಕೆ. ವಿ. ದೇವಳೀ ಬಿ. ಎ. ಹುಬ್ಬಳ್ಳಿ	೩೪೪
ಬೆಳುವಲ ಕನ್ನಡಿಗರ ಜಾನಪದ ಹಬ್ಬ (ಗುಡಿಯ ಹುಣ್ಣಿಮೆ)	ಶ್ರೀ. ಜೆಟಗೇರಿ ಕೃಷ್ಣಶರ್ಮ, ಧಾರವಾಡ	೩೪೭
ಫಾ ಫಾರ್ಡಿಯ ಕಾದಂಬರಿಗಳು (ಪರಿಚಯಾತ್ಮಕ)	ಶ್ರೀ. ಯಂ. ಕೇಶವಭಟ್ಟ ಬಿ. ಎ. ಮಂಗಳೂರು	೩೫೦
ನಗೆಯ ಹೊಗೆ (ಸಣ್ಣಕತೆ)	ಶ್ರೀ. ಎನ್. ಬಿ. ಸುಶದ ಬಿ. ಎಸ್‌ಸಿ. ಮುಂಬಯಿ	೩೫೪
ಹುತಾತ್ಮನಿಗೆ (ಕವನ)	ಶ್ರೀ. ಸಿ. ಎನ್. ಕುಲಕರ್ಣಿ ಬಿ. ಎ. ಧಾರವಾಡ	೩೫೬
ಸಾಹಿತ್ಯವಿಹಾರ	ವಿವಿಧ ಲೇಖಕರು	೩೫೮
ಸಾದರಸ್ವೀಕಾರ	ಮೇಲೋಲೆಯ ೩-೩ ಪುಟಗಳಲ್ಲಿ	

ಸಂಪುಟ ೧೫

★

ಸಂಚಿಕೆ ೯

★

JAYANTI

CONTD IN
NEXT ROLL

CONTD IN
NEXT ROLL

END

END

END

END

END